ಸಂಚಿಕೆ
೦೮
ಜನವರಿ, ೨೦೧೯

# ಬೃಂದಾವನ ವಾಣಿ

ಬೃಂದಾವನ ಕನ್ನಡ ಕೂಟ, ನ್ಯೂಜೆರ್ಸಿಯ ದ್ವೈಮಾಸಿಕ ಪತ್ರಿಕೆ






Copyright © KCO – Brindavana

ಸಂಚಿಕೆ
೦೮
ಜನವರಿ, ೨೦೦೭

# ಬೃಂದಾವನ ವಾಣಿ

ಬೃಂದಾವನ ಕನ್ನಡ ಕೂಟ, ನ್ಯೂಜೆರ್ಸಿಯ ದ್ವೈಮಾಸಿಕ ಪತ್ರಿಕೆ



ಈ ಸಂಚಿಕೆಯಲ್ಲಿ....


| | | | |
|---|---|---|---|
| ಸಂಪಾದಕೀಯ | ಪು ೧ | ಓ ನನ್ನ ಚೇತನ | ಪು ೧೫ |
| ಅಧ್ಯಕ್ಷರ ನುಡಿ | ಪು ೨ | ಕವನ | ಪು ೧೭,೧೯ |
| ಎತ್ತರಾಯಣ | ಪು ೩ | ನಾವು ನೋಡಿದ ಸಿನಿಮಾ | ಪು ೧೯ |
| ಹಿನ್ನೋಟ | ಪು ೪ | ಯುವವಾಣಿ | ಪು ೨೦ |
| ಸಹಾಯ ಹಸ್ತ | ಪು ೫ | ಹೀಗೊಂದು ಪ್ರಶ್ನೆ | ಪು ೨೧ |
| ವ್ಯಕ್ತಿ-ಪರಿಚಯ | ಪು ೭ | ಮುನ್ನೋಟ | ಪು ೨೧ |
| ಕಥಾ ಸಮಯ | ಪು ೧೧ | | |



**ಸಂಪಾದಕ ಮಂಡಳಿ**


ಸತ್ಯ ಪ್ರಸಾದ್
ಪ್ರಧಾನ ಸಂಪಾದಕರು


ರಾಘವೇಂದ್ರ ಕುಂದಲಗುರ್ಕಿ
ಸಂಪಾದಕರು


ಕಾವ್ಯಾ ಕಡಮೆ ನಾಗರಕಟ್ಟೆ
ಸಂಪಾದಕ ವರ್ಗ


ಭಾಸ್ಕರ ತೈಲಗೇರಿ
ಸಂಪಾದಕ ವರ್ಗ


ಅನಿಲ್ ಭಾರದ್ವಜ
ಸಂಪಾದಕ ವರ್ಗ


ಪ್ರಶಾಂತ ಎಂ.
ಸಂಪಾದಕ ವರ್ಗ


ಅಮೂಲ್ಯ ಕಟ್ಟೀಮನಿ
ಸಂಪಾದಕ ವರ್ಗ


ಮುಖಪುಟ ಚಿತ್ರ: ಸಂಕ್ರಾಂತಿ ಹಬ್ಬ
ಕೃಪೆ : ದೀಪ್ತಿ ಗಡ್ ,ರಾಘವೇಂದ್ರ ಕುಂದಲಗುರ್ಕಿ ಮತ್ತು ಅಂತರ್ಜಾಲ

ಸಂಪಾದಕೀಯ ಪುಟ ಚಿತ್ರ:ಎಳ್ಳು-ಬೆಲ್ಲ , ಸಕ್ಕರೆ ಅಚ್ಚು
ಕೃಪೆ: ಅಂತರ್ಜಾಲ

ಪತ್ರಿಕೆ ವಿನ್ಯಾಸ:
ಪ್ರಶಾಂತ ಎಂ.
ರಾಘವೇಂದ್ರ
ಸತ್ಯ ಪ್ರಸಾದ್

## ಪ್ರಧಾನ ಸಂಪಾದಕರಿಂದ......

ಸಮಸ್ತ ಬೃಂದಾವನ ಬಳಗಕ್ಕೆ ಸಂಕ್ರಾಂತಿಯ ಶುಭಾಶಯಗಳು !!!

ಸಂಕ್ರಾಂತಿ "ಸುಗ್ಗಿ" ಹಬ್ಬ, ಅನ್ನದಾತನ ಬೆವರಿನ ಸಾರ್ಥಕತೆಯ ಸಡಗರದ ಹಬ್ಬ. ಭೂ ತಾಯಿಯನ್ನೇ ನಂಬಿ ವರ್ಷವಿಡೀ ಹಗಲಿರುಳು ಮೈ ಮುರಿದು ದುಡಿದ ರೈತನ ಮೊಗದಲ್ಲಿ ಮಂದಹಾಸ ಮೂಡುವ ಕ್ಷಣ. ಸೂರ್ಯ ಉತ್ತರಾಯಣದ ಕಡೆ ಪಥ ಬದಲಿಸಿದ ಹಾಗೆ ಉಳುವಾ ಯೋಗಿಯ ಬಾಳಲ್ಲಿ ಏಳಿಗೆಯ ಕಡೆ ಸಾಗುವ ಸಂಕೇತ ಮತ್ತು ಹೊಸತನದ ಹಬ್ಬ. ಸಂಕ್ರಾಂತಿ ಗ್ರಾಮೀಣ ಪ್ರದೇಶದ ಬಣ್ಣದ ಹಬ್ಬ ಅಂದು ರಾಸುಗಳನ್ನು ಸಿಂಗರಿಸಿ ಮೆರವಣಿಗೆ ಮಾಡಿ ರೈತಾಪಿಗಳು ಸಂಭ್ರಮಿಸುತ್ತಾರೆ, ಗಾಳಿಪಟವನ್ನು ಹಾರಿಸಿ, ಎಳ್ಳು ಬೆಲ್ಲ ಹಂಚಿ ಹಬ್ಬ ಆಚರಿಸುತ್ತಾರೆ.

ಸಂಕ್ರಾಂತಿಯ ಹೊಸತನದ ಸಂಕೇತವಾಗಿ ಬೃಂದಾವನ ಕನ್ನಡ ಕೂಟದ ಹೊಸ ಸಮಿತಿ 'ಅಭಿಮಾನಿ ತಂಡ' ಅಸ್ತಿತ್ವಕ್ಕೆ ಬಂದಿದೆ. ಅಧ್ಯಕ್ಷರಾಗಿ ಆಯ್ಕೆಯಾದ ಡಾ. ಅಶೋಕ್ ಕಟ್ಟಿಮನಿ ಮತ್ತು ನಿರ್ದೇಶಕರಾಗಿ ಆಯ್ಕೆಯಾದ ಶ್ರೀಧರ್ ಸೂರ್ಯನಾರಾಯಣ, ತಿರುಮಲೇಶ ಕೌಡ್ಬಾಯ್, ಸುರೇಶ ಗಾಡ್ಗಿ, ಬಸವರಾಜು ಶಿವಣ್ಣ, ಸತೀಶ್ ಈಶ್ವರಪ್ಪ, ಕಿರಣ್ ಅಗ್ರಹಾರ, ಡಾ. ಶ್ರೀ ಸಾಯಿ ಯವರಿಗೆ ಬೃಂದಾವನದ ವಾಣಿ ತಂಡದ ಶುಭಾಶಯಗಳು.

ಮುಂದುವರಿದ ಬಾಗವಾಗಿ, ಅಕ್ಷರ ಪ್ರೇಮಿ ಗೆಳೆಯ ರಾಘವೇಂದ್ರ ಕುಂದಲಗುರ್ಕಿ ಸಂಪಾದಕರಾಗಿ ಬೃಂದಾವನ ವಾಣಿಯ ಸಾರಥ್ಯ ವಹಿಸಲಿದ್ದಾರೆ. ಇವರಿಗೆ ಕಾವ್ಯ ಕಡಮೆ, ಭಾಸ್ಕರ ತೈಲಗೇರಿ, ಅನಿಲ್ ಭಾರದ್ವಾಜ್, ಪ್ರಶಾಂತ ಮತ್ತು ಅಮೂಲ್ಯ ಕಟ್ಟಿಮನಿ ಬೆನ್ನೆಲುಬಾಗಿ ದುಡಿಯಲಿದ್ದಾರೆ.

ನಾನು ಅತ್ಯಂತ ಗೌರವಿಸುವ ಬಹುಮುಖ ಪ್ರತಿಭೆ, ಹೆಮ್ಮಯ ಬರಹಗಾರ ಮೈ. ಶ್ರೀ. ನಟರಾಜ್ ನಮ್ಮ ಮನವಿಗೆ ಸ್ಪಂದಿಸಿ ಸಂದರ್ಶನ ಕೊಟ್ಟಿದ್ದಾರೆ, ಅವರಿಗೆ ನನ್ನ ಅನಂತ ನಮನಗಳು.

ಇಡೀ ತಂಡ ಪ್ರೀತಿಯಿಂದ ಸುಂದರವಾದ ಸಂಕ್ರಾಂತಿ ವಿಶೇಷಾಂಕ ಹೊರ ತಂದಿದೆ ಇವರೆಲ್ಲರಿಗೂ ನನ್ನ ಹೃತ್ಪೂರ್ವಕ ವಂದನೆಗಳು.

ಎಲ್ಲರೂ ಎಳ್ಳು ಬೆಲ್ಲ ತಿಂದು ಒಳ್ಳೆ ಮಾತನಾಡೋಣ !!!

ನಮಸ್ಕಾರಗಳು

**ಸತ್ಯ**

## ಸಂಪಾದಕರಿಂದ......

ಆತ್ಮೀಯ ವಿಶ್ವ ಕನ್ನಡಿಗರಿಗೆ ಹಾಗು ನ್ಯೂಜೆರ್ಸಿಯ ಪ್ರಿಯ ಓದುಗರಿಗೆ ಸಂಕ್ರಾಂತಿ ಹಬ್ಬದ ಶುಭಾಶಯಗಳು,

ಸಂಕ್ರಾಂತಿಯ ಎಳ್ಳು-ಬೆಲ್ಲದಂತೆ ಹೊಸ ಬೃಂದಾವನ ವಾಣಿಯ "ಸಂಕ್ರಾಂತಿ ವಿಶೇಷಾಂಕ " ನಿಮ್ಮ ಮುಂದಿದೆ. ಸಂಕ್ರಾಂತಿಯ ಮಹತ್ವವನ್ನು ಪರಮ ಪೂಜ್ಯ ಪುತ್ತಿಗೆ ಶ್ರೀ ಸುಗುಣೇಂದ್ರ ತೀರ್ಥ ಶ್ರೀಪಾದಂಗಳವರು ಅವರ ಲೇಖನದಲ್ಲಿ ತಿಳಿಸಿದ್ದಾರೆ.

ಡಿಸೆಂಬರ್ ತಿಂಗಳ "ಬೃಂದಾವನ ಮಕ್ಕಳೋತ್ಸವ ಕಾರ್ಯಕ್ರಮ" ವಿಜೃಂಭಣೆಯಿಂದ ನಡೆಯಿತು. ಅಶೋಕ್ ನೇತೃತ್ವದ ಹೊಸ "ಅಭಿಮಾನಿ ತಂಡ" ಇನ್ನೆರೆಡು ವರ್ಷ ಬೃಂದಾವನದ ಕನ್ನಡ ತೇರನ್ನೆಳೆಯಲು ಅಣಿಯಾಗಿದೆ.

ಮಕ್ಕಳೋತ್ಸವದ ವರದಿ ಸುಜಯ ಅವರ ಲೇಖನದಲ್ಲಿದೆ.ಚಿಣ್ಣರಿ ಮಕ್ಕಳ "ಜ್ಞಾನ ಪೀಠ ವೈಭವದ" ಚಿತ್ರಗಳು, ಹೆಂಗೆಳೆಯರ ರಂಗು-ರಂಗು ವಸ್ತ್ರಗಳ ಪ್ರದರ್ಶನದ "ಕಾಮನ ಬಿಲ್ಲಿನ ಹೊಳಪು –ಕರ್ನಾಟಕದ ಉಡುಪು" ಚಿತ್ರಗಳಿವೆ.ಅಹೀಷ್, ಸರಿತಾ, ಅನಿಲ್ ಅವರ ಕಥೆಗಳು, ಯುವ ಬೃಂದಾವನದಲ್ಲಿ ಅನನ್ಯ ಗಿರೀಶ್ ಅವರ ಲೇಖನ, ಹಲವಾರು ಕವಿತೆಗಳು ಇವೆ.

ಬೃಂದಾವನವಾಣಿಯ ಸಂಪಾದಕವರ್ಗ ಉತ್ಸಾಹ ಬರಿತ ಹಲವರ ಸೇರ್ಪಡೆಯೊಂದಿಗೆ ಹೊಸ ರೂಪು ಗೊಂಡಿದೆ. ಹೊಸ ಹೊಸ ಲೇಖನದೊಂದಿಗೆ, ಹೊಸ ವಿನ್ಯಾಸಗಳೊಂದಿದೆ ವಾಣಿಯ ಮುಂದಿನ ಸಂಚಿಕೆಗಳು ನಿಮ್ಮ ಕೈ ಸೇರಲಿವೆ.

ಇದು ನಿಮ್ಮೆಲ್ಲರ ವಾಣಿ. ಲೇಖನ, ಕಥೆ, ಕವನ , ರಂಗೋಲಿ ಎಲ್ಲದಕ್ಕೂ ಸ್ವಾಗತ ..

ನಿಮ್ಮ ಅಭಿಪ್ರಾಯಗಳನ್ನು ತಿಳಿಸಿ ಇನ್ನು ಉತ್ತಮ ರೀತಿಯಲ್ಲಿ ಮೂಡುವಂತೆ ಬರಲು ನಮ್ಮ ಕೈಗೂಡಿಸಿ.

ಅಲ್ಲಿಯವರೆಗೂ ನಿಮ್ಮ

**ರಾಘವೇಂದ್ರ ಕುಂದಲಗುರ್ಕಿ**


Copyright © KCO – Brindavana



# ಅಧ್ಯಕ್ಷರ ನುಡಿ

ಡಾ. ಅಶೋಕ್ ಕಟ್ಟಿಮನಿ.

ನ್ಯೂಜೆರ್ಸಿ ಕನ್ನಡಿಗರಿಗೆಲ್ಲ ಹೊಸ ವರ್ಷ ಮತ್ತು ಸಂಕ್ರಮಣ ಹಬ್ಬದ ಹಾರ್ದಿಕ ಶುಭಾಶಯಗಳು..

ಬೃಂದಾವನದ ಮುಂದಿನ ಎರಡು ವರ್ಷದ ಕಾರ್ಯಕಾರಿ ಸಮಿತಿಯನ್ನು ತಾವೆಲ್ಲ ಸೇರಿ ಅವಿರೋಧವಾಗಿ ಚುನಾಯಿಸಿದ್ದೀರಿ, ನಮ್ಮ "ಅಭಿಮಾನಿ ತಂಡ" ದ ಪರವಾಗಿ ನಿಮಗೆಲ್ಲ ತುಂಬು ಹೃದಯದ ಕೃತಜ್ಞತೆಗಳು.

ಮಿಲನ ತಂಡದಿಂದ ಬೃಂದಾವನದ ಜವಾಬ್ದಾರಿಯನ್ನು ಹೊತ್ತಿರುವ ನಮಗೆ, ನಿಮ್ಮೆಲ್ಲರ ಬೃಂದಾವನ ಕನ್ನಡ ಕೂಟವನ್ನು ಮತ್ತಷ್ಟು ತಮಗೆ ಹತ್ತಿರವಾಗುವಂತೆ ಮತ್ತು ಇನ್ನಷ್ಟು ಎತ್ತರಕ್ಕೆ ಒಯ್ಯಬೇಕೆನ್ನುವ ಮಹದಾಸೆ. ನಿಮ್ಮೆಲ್ಲರ ಪ್ರೀತಿ, ಸಹಕಾರಗಳೇ ನಮ್ಮ ಯಶಸ್ಸಿನ ಸಂಗಾತಿ.ಈ ಸಲದ ನಮ್ಮ ಮುಖ್ಯ ಉದ್ದೇಶಗಳು ಹಲವಾರು.

ಪ್ರತಿಸಲವೂ ಅತ್ಯಂತ ಹೆಚ್ಚಿನ ಗುಣಮಟ್ಟದ ಕಾರ್ಯಕ್ರಮಗಳನ್ನು ತಮ್ಮ ಮುಂದಿಡುವುದು ನಮ್ಮ ಆದ್ಯ ಕರ್ತವ್ಯ. ಬೃಂದಾವನದ ಕಾರ್ಯಕ್ರಮಗಳು ತಮಗೆಲ್ಲ ಒಂದು ಸುಂದರ ಕನ್ನಡದ ಅನುಭವವನ್ನು ಕೊಡುವಂತೆ ಶ್ರಮಿಸುತ್ತೇವೆ. ನಮ್ಮ ಸಾಂಸ್ಕೃತಿಕ ಕಾರ್ಯಕ್ರಮಗಳಿಗೆ ಹೆಚ್ಚು ಹೆಚ್ಚು ಕನ್ನಡಿಗರನ್ನು ಸೇರಿಸಿಕೊಂಡು, ನ್ಯೂ ಜೆರ್ಸಿಯಲ್ಲಿರುವ ಕನ್ನಡದ ಹಲವಾರು ಸಂಸ್ಥೆಗಳೆಲ್ಲ ಒಂದಾಗಿ ಬೆರೆಯುವ ಅವಕಾಶವನ್ನು ದೊರಕಿಸುವುದೇ ನಮ್ಮ ಉದ್ದೇಶ. ಇಡೀ ವರ್ಷದ ಕಾರ್ಯಕ್ರಮಗಳ ದಿನಾಂಕಗಳನ್ನು ಮೊದಲೇ ತೀರ್ಮಾನಿಸಿ ಅವುಗಳಿಗೆ ಬೇಕಾಗುವ ಸ್ಥಳಗಳನ್ನು ಈಗಾಗಲೇ ನಿಗದಿಗೊಳಿಸುತ್ತಿದ್ದೇವೆ. ಇಷ್ಟರಲ್ಲಿಯೇ ನಿಮಗೆ ಈ ವರ್ಷದ ಎಲ್ಲ ಕಾರ್ಯಕ್ರಮಗಳ ವಿವರ ದೊರಕಲಿದೆ.

ಈ ವರ್ಷದ ಮೊದಲ ಕಾರ್ಯಕ್ರಮ, ಏಪ್ರಿಲ್ ತಿಂಗಳ ೮ ರಂದು, ಹೈಸ್ಕೌನ್ ಶಾಲೆಯ ಸಭಾಂಗಣದಲ್ಲಿ ನೆಡೆಯಲಿದೆ. ಅಭಿಮಾನಿ ತಂಡದ ಮೊದಲ ಈ ಹೆಮ್ಮೆಯ ಕಾರ್ಯಕ್ರಮದಲ್ಲಿ ಇಬ್ಬರು ಸೆಲೆಬ್ರಿಟಿಗಳು ನಿಮಗಾಗಿ ಭಾಗವಹಿಸಲಿದ್ದಾರೆ. ಕನ್ನಡ ಚಿತ್ರರಂಗದ ಹೆಸರಾಂತ ಹಿನ್ನೆಲೆ ಗಾಯಕಿ ಬಿ. ಆರ್ ಛಾಯಾರವರೊಂದಿಗೆ, ಕನ್ನಡ ಚಿತ್ರರಂಗದ ಹೆಸರಾಂತ ಮತ್ತು ಪ್ರತಿಭಾಶಾಲಿ ನಾಯಕರಲ್ಲಿ ಒಬ್ಬರಾದ ಶ್ರೀ ಜಗ್ಗೇಶ್ ರವರು ಭಾಗವಹಿಸಲಿದ್ದಾರೆ. ಇವರೊಂದಿಗೆ ನ್ಯೂ ಜೆರ್ಸಿಯ ಹಲವಾರು ಕನ್ನಡ ಸಂಸ್ಥೆಗಳು ತಮ್ಮ ಕಾರ್ಯಕ್ರಮಗಳನ್ನು ನೀಡಲಿದ್ದಾರೆ. ಈ ಸಲದ ಯುಗಾದಿ ಹಬ್ಬವನ್ನು ನಿಮ್ಮೊಂದಿಗೆ ಸೇರಿ ಸಂಭ್ರಮದಿಂದ ಆಚರಿಸಲು ಇದಿರು ನೋಡುತ್ತಿದ್ದೇವೆ.

ಬೃಂದಾವನ ವಾಣಿ ತನ್ನ ಮೂರನೇ ವರ್ಷಕ್ಕೆ ಕಾಲಿಡುತ್ತಿದೆ ಎಂದು ತಿಳಿಸಲು ಹೆಮ್ಮೆಯೆನಿಸುತ್ತಿದೆ. ಈ ಸಲದ ಬೃಂದಾವನ ವಾಣಿಯ ಸಾರಥ್ಯವನ್ನು ಸತ್ಯ ಪ್ರಸಾದ್ ರವರೊಂದಿಗೆ ನಮ್ಮ ರಾಘವೇಂದ್ರ ಕುಂದಲಗುರ್ಕಿರವರು ಸಂಪಾದಕತ್ವದ ಜವಾಬ್ದಾರಿ ಹೊತ್ತಿದ್ದಾರೆ. ಅವರೊಂದಿಗೆ ನಮ್ಮ ಅತ್ಯಂತ ಪ್ರತಿಭಾಶಾಲಿ ಕನ್ನಡ ಮಿತ್ರರು ಸಂಪಾದಕ ತಂಡದಲ್ಲಿದ್ದಾರೆ. ಬೃಂದಾವನ ವಾಣಿ ತಮಗೆಲ್ಲ ಮತ್ತಷ್ಟು ಹತ್ತಿರವಾಗುವಂತೆ ನ್ಯೂ ಜೆರ್ಸಿ ಕನ್ನಡಿಗರ ಧ್ವನಿಯಾಗುವಂತೆ ರೂಪಿಸುವುದೇ ಈ ಸಂಪಾದಕ ತಂಡದ ಮಹದಾಸೆ. ನಿಮ್ಮೆಲ್ಲರ ಸಹಕಾರ ಅತ್ಯಗತ್ಯ. ತಮಗೆ ಸಾಧ್ಯವಾದಾಗಲೆಲ್ಲ ಬರೆಯಿರಿ, ಮಕ್ಕಳಿಗೆ ಬರೆಯಲು ಪ್ರೋತ್ಸಾಹಿಸಿ.

ಈ ವರ್ಷದ ಬೃಂದಾವನ ವಾಣಿಯ ಮೊದಲ ಸಂಚಿಕೆಯನ್ನ ಸಂಕ್ರಾಂತಿಯ ಸಿಹಿಯೊಂದಿಗೆ ತಮ್ಮ ಮುಂದಿಡುತ್ತಿದ್ದೇವೆ.

ತಮ್ಮ ಆತ್ಮೀಯ
**ಡಾ. ಅಶೋಕ್ ಕಟ್ಟಿಮನಿ.**



ಬೃಂದಾವನ ವಾಣಿ
ಬೃಂದಾವನ ಕನ್ನಡ ಕೂಟ, ನ್ಯೂಜೆರ್ಸಿಯ ದ್ವೈಮಾಸಿಕ ಪತ್ರಿಕೆ

# ಉತ್ತರಾಯಣ



ಶ್ರೀ ಸುಗುಣೇಂದ್ರತೀರ್ಥ ಸ್ವಾಮೀಜಿ,
ಪುತ್ತಿಗೆ ಮಠ.

ಸಂಕ್ರಮಣವೇ ಪರ್ವ ದಿನ. ಹಲವಾರು ಸಂಕ್ರಮಣಗಳು ರಾಶಿಯಿಂದ ರಾಶಿಗಾದರೆ, ಮಕರ ಸಂಕ್ರಮಣ ರಾತ್ರಿಯಿಂದ ಹಗಲಿಗೆ, ದಕ್ಷಿಣದಿಂದ ಉತ್ತರಕ್ಕೆ, ತಗ್ಗಿನಿಂದೆತ್ತರಕ್ಕೆ. ಉತ್ತರಾಯಣ.ಇಷ್ಟರತನಕ ಸೂರ್ಯ ರಾಶಿಕುಂಡಲಿಯ ಕೆಳಕೋಣೆಗಳಲ್ಲಿ ಉರುಳಿ ಬರುತ್ತಿದ್ದರೆ, ಇನ್ನು ಮುಂದೆ ಮೇಲ್ಭಾವಣೆಯನ್ನು ಹತ್ತುತ್ತಾನೆ. ಕ್ರಮಣವು ಕ್ರಮೇಣ ಉತ್ಕ್ರಮಣವಾಗುತ್ತದೆ.ಗ್ರಹರಾಜ ರವಿಯು ಮೇಲೇರುತ್ತಿರುವಾಗ, ಶುರುಮಾಡಿದ ಕಾರ್ಯಗಳೆಲ್ಲಾ ಸಹಜವಾಗಿಯೇ ಮೇಲೇಳಲೇಬೇಕು. ಆದ್ದರಿಂದಲೇ ಉತ್ತರಾಯಣ ಸರ್ವಕಾರ್ಯಗಳಿಗೂ ಪ್ರಶಸ್ತಕಾಲ. ಕೊನೆಗೆ ಮರಣಕ್ಕೂ ಕೂಡಾ.ಆದ್ದರಿಂದಲೇ ಭೀಷ್ಮರು ಅದಕ್ಕಾಗಿ ಕಾದದ್ದು.

ಇಲ್ಲಿ, ಶ್ರೀಕೃಷ್ಣ ಸಾಧಕನಿಗೊಂದು ಸಂದೇಶವನ್ನೂ ಬೀರುತ್ತಿದ್ದಾನೆ. ಸಾಧಕನ ಹೃದಯ ಉತ್ತರ ಶುಕ್ಲ ಹಗಲಿನ ನಸುಕಿನ ಬಯಲಿನಂತಿರಬೇಕು. ಹೊರತು, ದಕ್ಷಿಣ ಕೃಷ್ಣರಾತ್ರಿಯ ಉಸುಕು ತುಂಬಿದ ಮಸುಕಿನ ಕೋಣೆಯಂತಿರಬಾರದು. ಈ ದೃಷ್ಟಿಯಲ್ಲಿ ಉತ್ತರ-ದಕ್ಷಿಣಗಳ ಉಲ್ಲೇಖ ಮಾಡುತ್ತಿದ್ದಾನೆ. ಉತ್ತರಾಯಣ, ಅದು ಸ್ವರ್ಗದ ಹಗಲು.ಈ ದೃಷ್ಟಿಯಲ್ಲಿ ಖಗೋಳಿಗಳು ಈ ರೀತಿ ಹೇಳುತ್ತಾರೆ: ಪುರಾಣೋಕ್ತವಾದ ಸ್ವರ್ಗ ಎಲ್ಲಿರಬಹುದೆಂದರೆ, ಅದು ಉತ್ತರಾಯಣದ ಆರುತಿಂಗಳು ನಿರಂತರ ಹಗಲಾಗಿರುವ, ದಕ್ಷಿಣದ ಆರುತಿಂಗಳು ನಿರಂತರ ಕತ್ತಲಿನಲ್ಲಿರುವ, ಭೂಬುಗುರಿಯ ಉತ್ತರ ಧ್ರುವವೇ ಆಗಿರಬೇಕು. ಈ ಅಭಿಪ್ರಾಯದಲ್ಲೇ ಅಂದಿರಬೇಕು, ಮಾನವರ ಒಂದು ವರ್ಷ, ದೇವತೆಗಳ ಒಂದು ರಾತ್ರಿ ಒಂದು ಹಗಲು ಸಹಿತವಾದ ಒಂದು ದಿನ ಎಂದು.ಶ್ರೀರಾಮನ ಆಯನ, ಪಾಂಡವರ ಪ್ರಸ್ಥಾನ, ಕಿಷ್ಕಿಂಧೆ, ಕಿನ್ನರ-ಕಿಂಪುರುಷರ ಆವಾಸಸ್ಥಾನ, ಉತ್ತರ ಬದರಿ, ಮೇರುಪರ್ವತವೆಲ್ಲವೂ ಉತ್ತರದಿಕ್ಕಿನಲ್ಲೇ ವರ್ಣಿತವಾಗಿರುವುದರಿಂದ, ಈ ವಾದವು ತಿರಸ್ಕಾರ್ಯವೆನ್ನಬಹುದಾದರೂ, ದೇವ-ದೇವಸ್ಥಾನಗಳಿಗೆ ಆದರ್ಶನ ಶಕ್ತಿಯನ್ನು ವರ್ಣಿಸುವ, ಶಾಸ್ತ್ರದ ಮನಸ್ಸಿನಲ್ಲಿರುವ ಸ್ವರ್ಗ ಇದೇ ಆಗಿದೆ ಎನ್ನುವುದು ಸಮುಚಿತವಾಗಲಾರದು.ಇಲ್ಲೇ ಸ್ವರ್ಗ, ಇಲ್ಲೇ ನರಕ, ಅದು ಬೇರೆಲ್ಲೂ ಇಲ್ಲ ಎಂದು ಕೂಗುವ, ಸ್ವರ್ಗಸ್ಥರಾದ ವಿಚಾರವಾದಿ ಮಂದಿಗಳೂ ತಲೆತೂಗುವಂತಹ ಅನೇಕ ಅಂಶಗಳನ್ನು ಪುರಾಣಗಳು ಬಚ್ಚಿಟ್ಟಿಕೊಂಡಿವೆ ಎಂಬುದನ್ನು, ಖಗೋಳವಿಜ್ಞಾನವು ಸಾದರಪಡಿಸಬಲ್ಲದು ಎಂಬುದಕ್ಕೆ, ಈ ಮಕರ ಸಂಕ್ರಮಣ, ಸ್ವರ್ಗದ ಬಾಗಿಲು ತೆರೆದುಕೊಳ್ಳುವುದು, ಉತ್ತರಧ್ರುವದಲ್ಲಿ ಬೆಳಕು ಹರಿಯುವುದು ಇತ್ಯಾದಿ, ಪುರಾಣ-ಖಗೋಳಶಾಸ್ತ್ರಗಳ ಉಲ್ಲೇಖಗಳು ಸಾಕಷ್ಟು ಉಪಷ್ಟಮ್ಭಕವಾಗಬಲ್ಲವು.

ಅಂತೂ ಮಕರ ಸಂಕ್ರಮಣ ಅದು ಪರ್ವ ಪರ್ವತವಾಗಿದ್ದು, ಬೆಳಕಿನ ಉಧ್ಘಾಟನಾ ಸಮಾರಂಭವೆನಿಸಿದೆ. ಮಕರ ವಿಳಕ್ಕು(ಬೆಳಕು), ಮಕರ ಜ್ಯೋತಿ, ಮಕರ ಕುಂಡಲ, ಮಕರ ಧ್ವಜ, ಮಕರ ಸಂಕ್ರಮಣ ಎಂದು ಮಕರವು ಅನೇಕ ಕಡೆ ಕೇಳಿಬರುತ್ತದೆ.ಇಲ್ಲೆಲ್ಲಾ ಮಕರ ಶಬ್ಧವನ್ನು ಕೇಳಿದಾಗ ಥಟ್ಟನೆ ಕಣ್ಣೆದುರು ಬಂದು ನಿಲ್ಲುವುದು ಗಜೇಂದ್ರ ಮೋಕ್ಷ - ಮಕರ ಆಕ್ರಮಣ.ಮೊಸಳೆಯ ಎಳೆತ-ಸೆಳೆತಕ್ಕೆ ಸಿಕ್ಕಿ ಶಕ್ತಿಯೇ ಉಡುಗಿಹೋಗಿ ಇನ್ನೇನು ಕರಿ(ಆನೆ)ಯು ಮಕರಿ(ಮೊಸಳೆ)ಯ ವಶವಾಯಿತು ಎಂದಾಗ, ಕರಿ ಶ್ರೀಹರಿಯನ್ನೇ ಕರೆಯುತ್ತಾ ಮೊರೆಹೊಕ್ಕು, ಕೆರೆಯಿಂದ ತಾವರೆಯನ್ನು ಎತ್ತಿಕ್ಕಲು, ತಕ್ಷಣವೇ ಆದಿಮೂಲನು ಧಾವಿಸಿ ಬಂದು, ಸುದರ್ಶನ ಚಕ್ರದಿಂದ ವಕ್ರ ನಕ್ರದ ವಕ್ರವನ್ನೇ ಕರ್ತನಮಾಡಿದ ಮಕರ ಸಂಕ್ರಮಣದ ಘಟನೆ. ಅಂದು ಗಜೇಂದ್ರನಿಗೆ ಮಕರ ಸಂಕ್ರಮಣವಾಯಿತು. ಇಂದು ಮನುಷ್ಯನಿಗೆ ಮ-ಕಾರ ಸಂಕ್ರಮಣವಾಗಿದೆ. ನಾನು-ನನ್ನದು ಎಂಬ ಮಕಾರ ಮಮಕಾರಗಳು ಮನುಷ್ಯನನ್ನು ಆಕ್ರಮಿಸಿವೆ. ಮನುಷ್ಯ ಈ ಮಮಕಾರ ಮಕರದ ಸೆಳೆತಕ್ಕೆ ಸಿಕ್ಕಿ ಮೇಮೇಯೆಂದು ಮುಖರಮುಖಿಯಾಗಿ ಆರ್ತಘರ್ಜನೆ ಮಾಡುತ್ತಿದ್ದಾನೆ. ಈ ಮಮಕಾರ ಮಕರಿಯ ಪ್ರಖರ ಕರಗಳ ಸೆಳೆತದಿಂದ, ಸಂಸಾರ ಸರಸ್ಸಿನಲ್ಲಿ ಮುಳುಗಿಹೋಗದಂತಿರಲು, ಮಾನವನಿಗೆ ಏಕೈಕಮಾರ್ಗವಾಗಿರುವ, ಕಂಸಾರಿಯಾದ ಶ್ರೀಹರಿಗೆ ಹೃದಯಕಮಲವನ್ನೇ ಅರ್ಪಿಸಿದಾಗ, ಹರಿಯ ಸು-ದರ್ಶನವಾಗುತ್ತದೆ. ಭವಬಂಧನದ ಭೇದನವಾಗುತ್ತದೆ. ಸಂಸಾರ ಸಂಕಷ್ಟದ ಭೇದನವಾಗುತ್ತದೆ. ಮಕಾರ ಮಮಕಾರಗಳ ಮರ್ದನವಾಗುತ್ತದೆ. ಮಮಕಾರದ ನಿಷ್ಕ್ರಮಣವಾಗುತ್ತದೆ. ಇದನ್ನೇ ಹೇಳಿದ್ದು.

**'ಭಿದ್ಯತೇ ಹೃದಯ ಗ್ರಂಥಿ: , ಛಿದ್ಯತೇ ಸರ್ವಸಂಶಯಾ: |**

**ಕ್ಷೀಯಂತೇ ಚಾಸ್ಯ ಕರ್ಮಾಣಿ ತಸ್ಮಿನ್ ದೃಷ್ಟೇ ಪರಾವರೇ' ||**

ಇದೇ ಮಕರ ಸಂಕ್ರಮಣದ ನಿಜವಾದ ಸಾರ ಸಂದೇಶ. ಸಂದೇಶ ಸಾರ.

***



ಸಂಕ್ರಾಂತಿಯ ವಿಶೇಷ ಖಾದ್ಯ - ಪೊಂಗಲ್


Copyright © KCO – Brindavana

# ಬೃಂದಾವನ ವಾಣಿ
ಬೃಂದಾವನ ಕನ್ನಡ ಕೂಟ, ನ್ಯೂಜೆರ್ಸಿಯ ದ್ವೈಮಾಸಿಕ ಪತ್ರಿಕೆ

ಹಿನ್ನೋಟ



## ನೀವು ತೋರಿದ ಪ್ರೀತಿಗೆ ನಾವು ಅಭಾರಿಗಳು !

ಮಲ್ಲಿಕ್ ಪ್ರಸಾದ್

ನ್ಯೂಜೆರ್ಸಿ ಕನ್ನಡ ಮಿತ್ರರಿಗೆ ಸಂಕ್ರಾಂತಿ ಹಬ್ಬದ ಶುಭಾಶಯಗಳು !

ಬೃಂದಾವನದ ಅಧ್ಯಕ್ಷನಾಗಿ ರೂವಾರಿ ಹೊತ್ತ ೨ ವರ್ಷ ಮುಗದಿದೆ. ಈ ಎರಡು ವರ್ಷ ನ್ಯೂ ಜೆರ್ಸಿ ಕನ್ನಡ ಮತ್ತು ಕನ್ನಡಿಗರ ಸೇವೆ ಮಾಡಲು ಅವಕಾಶ ಮಾಡಿಕೊಟ್ಟ ನಿಮಗೆಲ್ಲರಿಗೂ ನಾನು ಚಿರಋಣಿ. ಇದಕ್ಕೆ ಸಹಾಯ ಮಾಡಿದ ಪ್ರತಿ ಮಿಲನ ತಂಡದ ಸದಸ್ಯರಿಗೆ ಮತ್ತು ಟ್ರಸ್ಟೀಗಳಿಗೆ ನಾನು ಅಭಾರಿ. ಇದಲ್ಲದೆ ಹಲವಾರು ಜನರ ಬೆಂಬಲ, ಹಿರಿಯರ ಆಶೀರ್ವಾದ ಮತ್ತು ಹಿತೈಷಿಗಳ ಪ್ರೋತ್ಸಾಹದ ನುಡಿಗಳು ಒಂದು ಸುಂದರ ಅನುಭವಕ್ಕೆ ಕಾರಣವಾಗಿದೆ. ಹಲವಾರು ಜನರ ಸಹಕಾರದಿಂದ ನಮ್ಮ ಬೃಂದಾವನ (೨೦೧೫-೧೬) ಹೊಸ ರೂಪುರೇಖೆಗಳೊಂದಿಗೆ ಪುನರ್ಚಾಲನೆಗೊಂಡಿದೆ. ಅನೇಕ ಹೊಸ ಸೌಲಭ್ಯಗಳು ಹಂತ ಹಂತವಾಗಿ ಉತ್ಸಾಹಿ ಬೃಂದಾವನ 'ಮಿಲನ' ತಂಡ ಯಶಸ್ವಿಗೊಳಿಸಿದೆ. ಈ ಎರಡು ವರ್ಷಗಳ 'ಕನ್ನಡದ ಗುಂಗು' ಇನ್ನು ಇಳಿದಿಲ್ಲಾ! ನನಗೆ ಅತಿ ಖುಷಿ ತಂದ ಕ್ಷಣಗಳನ್ನು ನಿಮ್ಮ ಮುಂದಿಡುತ್ತೇನೆ ...

**"ಯುವ ಬೃಂದಾವನ"**ದ ನಾಯಕರಾದ ಸುಹಾಸ್ ಕುಮಾರ್ ಮತ್ತು ಅಮೂಲ್ಯ ಕಟ್ಟೆಮನಿಯವರು ಡಿಸೆಂಬರ್ ೨೭ರಂದು ೩ನೇ ಯುವ ಬೃಂದಾವನ ಕಾನ್ಫರೆನ್ಸ್ ಆಯೋಜಿಸಿದ್ದರು. ಈ ಕಾರ್ಯಕ್ರಮದಲ್ಲಿ ನ್ಯೂ ಯಾರ್ಕ್ ನ "ಯುನೈಟೆಡ್ ನೇಷನ್ಸ್"ಗೆ ಪ್ರವಾಸ ಏರ್ಪಡಿಸಿದ್ದರು. ಸುಮಾರು ೪೦ ಕನ್ನಡದ ಯುವ ಮಿತ್ರರು ಈ ಕಾರ್ಯಕ್ರಮದಲ್ಲಿ ಭಾಗವಹಿಸಿ ಒಂದು ಅಮೋಘ ಅನುಭವ ಪಡೆದು ಹಿಂತಿರುಗಿದರು. ಎರಡು ವರ್ಷ ಉತ್ಸಾಹದ ಚಿಲುಮೆಯಾಗಿ ನಮ್ಮ ಯುವ ಮಿತ್ರರು ನ್ಯೂ ಜೆರ್ಸಿಯ ಕನ್ನಡ ಕಾರ್ಯಕ್ರಮಗಳಲ್ಲಿ ಪಾಲ್ಗೊಂಡು ಚೆನ್ನದ ಹೊಳಪು ನೀಡಿದರು.

**"ಬೃಂದಾವನ ಕನ್ನಡ ಕಲಿಸೋಣ"** - ನಮ್ಮ ಕನ್ನಡದ ಕಂದಮ್ಮಗಳಿಗೆ ನವೀನ ರೀತಿಯಲ್ಲಿ ಕನ್ನಡ ಸರಿಯಾಗಿ ಓದಲು, ಮಾತನಾಡಲು ಮತ್ತು ಬರೆಯಲು ತಯಾರು ಮಾಡಬೇಕೆಂಬ ಉದ್ದೇಶದಿಂದ ಬೃಂದಾವನ ಕನ್ನಡ ಶಾಲೆ ಪ್ರಾರಂಭಿಸಲಾಯಿತು. ಈ ಶಾಲೆ ಶುರುವಾಗಿ ಒಂದು ವರ್ಷದ ಮೇಲಾಗಿದೆ. ಒಂದು ವರ್ಷದಲ್ಲಿ ಮೂರು ಶಾಲೆಗಳು, ಹತ್ತಾರು ಸ್ವಯಂಸೇವಕ ಶಿಕ್ಷಕರು, ೧೨೫ ಕನ್ನಡದ ಕಂದಮ್ಮಗಳು ... ಎಂತಹ ಸಂತೋಷದ ವಿಷಯ. ಮೊದಲನೇ ಕನ್ನಡ ಶಾಲೆಯ ವಾರ್ಷಿಕ ಸಡಗರ! ಕೈ ಜೋಡಿಸಿದ ಹಲವಾರು ಹಿತೈಷಿಗಳು, ಶಾಲೆಯ ಮಕ್ಕಳು ಮತ್ತು ಸ್ವಯಂಸೇವಕ ಗುರುಗಳಿಗೆ ನಮೋ ನಮಃ!

**ಸಾಹಿತ್ಯ ಬೃಂದಾವನ** - ಕನ್ನಡದ ಪ್ರಸಿದ್ಧ ಸಾಹಿತಿಗಳನ್ನು ನಮ್ಮ ಬೃಂದಾವನಕ್ಕೆ ಆಹ್ವಾನಿಸಿ, ಕನ್ನಡ ಸಾಹಿತ್ಯದ ವಿಚಾರ ವಿನಿಮಯ ಮತ್ತು ಸಂವಾದವನ್ನು ಏರ್ಪಡಿಸಿವುದು ಇದರ ಮೂಲ ಉದ್ದೇಶ. ಈ ಪ್ರಯತ್ನಕ್ಕೆ ಕೈ ಜೋಡಿಸಿದ ಸತ್ಯ ಪ್ರಸಾದ್ ರವರಿಗೆ ಬೃಂದಾವವನದ ಉತ್ಸಾಹಿ ಕನ್ನಡ ಮಿತ್ರರು ಬೆಂಬಲ ಕೊಟ್ಟರು.

**'ಬೃಂದಾವನ ಅಕ್ಷರ ಭಂಡಾರ'** ಕನ್ನಡ ಪುಸ್ತಕಗಳ ವಿನಿಮಯ ಮತ್ತು ಸಂವಾದ ಬಿರುಸುಗೊಳಿಸಿದೆ. **'ಬೃಂದಾವನ ವಾಣಿ'** ಕನ್ನಡದ ಕಹಳೆ ಸಾಗರದಾಚೆ ಮೊಳಗಿಸಿದೆ. ಅಶೋಕ್ ಕಟ್ಟೆಮನಿ, ಸರಿತಾ ನವಲಿ, ಕಾವ್ಯ ಕಡಮೆ ನಾಗರಕಟ್ಟೆ, ಅಹೀಶ್ ಭರದ್ವಾಜ, ರಾಘವೇಂದ್ರ ಕುಂದಲಗರ್ಕಿ, ಕೇಶವ್ ಪ್ರಶಾಂತ್, ಪ್ರಶಾಂತ್ ಜೋಶಿ, ಭಾಸ್ಕರ್ ತೈಲಗೇರಿ, ದಾಶರಥಿ ಘಟ್ಟು ಮತ್ತು ಹಲವಾರು ಕನ್ನಡ ಪ್ರೇಮಿಗಳ ನಿರಂತರ ಪರಿಶ್ರಮದಿಂದ ಸ್ಥಳೀಯ ಪ್ರತಿಭೆಗಳು ಹೊರಬಂದು ಈ ಪ್ರಯತ್ನದ ಸಾರ್ಥಕತೆ ತಂದಿದೆ. **'ಬೃಂದಾವನ ವನವಾಣಿ - ೧೨ನೇ ವಾರ್ಷಿಕೋತ್ಸವದ ಸಂಚಿಕೆ'** ಅಮೋಘವಾಗಿ ಮೂಡಿಸಿದ ಸಂಪಾದಕ ವರ್ಗ, ಡಿಸೈನರ್ - ಸುರೇಶ ನಿಂಗಪ್ಪ ಮತ್ತು ಜ್ವಾಲಾಮುಖಿ ಮುದ್ರಣಾಲಯ - ಇವರಿಗೆ ನನ್ನ ಕೃತಜ್ಞತೆಗಳು.

ಹೊಸ ಬೃಂದಾವನ **'ಅಭಿಮಾನಿ'** ತಂಡ ನಾವು ಮಾಡಿದ ಎಲ್ಲಾ ಕಾರ್ಯಗಳನ್ನು ಇನ್ನು ಎತ್ತರಕ್ಕೆ ಕೊಂಡೊಯ್ಯಲಿ ಎಂದು ಹಾರೈಸುತ್ತೇನೆ

ಎರಡು ವರ್ಷ ನನಗೆ ಸಂಪೂರ್ಣ ಬೆಂಬಲ ಕೊಟ್ಟ ಮಿಲನ ತಂಡ, ವಾಣಿ ತಂಡ, ಬೃಂದಾವನ ಟ್ರಸ್ಟೀ ಮತ್ತು ಬೃಂದಾವನ ಕನ್ನಡ ಶಾಲೆ ತಂಡಗಳಿಗೆ ನಾನು ಚಿರಋಣಿ. ನಾನು ಕಳೆದ ತಂಡಗಳಲ್ಲಿ ಮೊದಲ ಬಾರಿ ಊಟದ ವ್ಯವಸ್ಥೆ, ಎರಡನೇ ಬಾರಿ ಸೆಕ್ರೆಟರಿಯಾಗಿ ಮತ್ತು ಮೂರನೇ ಬಾರಿ ಅಧ್ಯಕ್ಷನಾಗಿ ಸೇವೆ ಸಲ್ಲಿಸಿರುವೆ. ಮುಂದಕ್ಕೆ ಟ್ರಸ್ಟೀಯಾಗಿ ಬೃಂದಾವನದ ನಂಟು ಹೀಗೆ ಮುಂದುವರಿಯಲಿ ಎಂದು ಆಶಿಸುತ್ತೇನೆ. ಕಳೆದ ಎರಡು ವರ್ಷಗಳ ಅನುಭವ ಒಂದು ಸಾರ್ಥಕ ಭಾವ ತಂದಿದೆ.

ನಿಮ್ಮ ಅನಿಸಿಕೆಗಳನ್ನು ತಿಳಿಸಲು ಮತ್ತು ನನ್ನ ಜೊತೆ ಸಂಪರ್ಕಿಸಲು mal-likprasad@gmail.com ಗೆ ಮಿಂಚಂಚೆ ಕಳಿಸಿ.

ಹೊಸ ವರುಷ ತರಲಿ ಹರುಷ!

ಧನ್ಯವಾದಗಳೊಂದಿಗೆ, ನಿಮ್ಮ ಮಿಂಚಂಚೆಗೆ ಕಾಯುತ್ತಿರುವ,

ಇಂತಿ ನಿಮ್ಮ ಸ್ನೇಹಿತ
**ಮಲ್ಲಿಕ್ ಪ್ರಸಾದ್**
ಬೃಂದಾವನ ಅಧ್ಯಕ್ಷರು - ೨೦೧೫-೧೬
ಬೃಂದಾವನ ಟ್ರಸ್ಟೀ - ೨೦೧೭-೧೮


Copyright © KCO – Brindavana

ಸಂಚಿಕೆ
೦೮
ಜನವರಿ ೨೦೧೯

# ಬೃಂದಾವನ ವಾಣಿ

ಬೃಂದಾವನ ಕನ್ನಡ ಕೂಟ, ನ್ಯೂಜೆರ್ಸಿಯ ದ್ವೈಮಾಸಿಕ ಪತ್ರಿಕೆ

ಹಿನ್ನೋಟ

## ಕನ್ನಡ ಕೂಟದಲ್ಲಿ ನಡೆದ ಕಾರ್ಯಕ್ರಮಗಳ ಪಕ್ಷಿ ನೋಟ



ಸುಜಯ ರಾವ್

### ಕನ್ನಡ ರಾಜ್ಯೋತ್ಸವ ಮತ್ತು ಮಕ್ಕಳೋತ್ಸವ ೨೦೧೮

ಡಿಸೆಂಬರ್ ೨, ೨೦೧೮ ರಂದು ನಡೆದ ಮಕ್ಕಳೋತ್ಸವ / ಕನ್ನಡ ರಾಜ್ಯೋತ್ಸವದಂದು ಸುಮಾರು ೩೦೦ರಕ್ಕೂ ಹೆಚ್ಚು ಕನ್ನಡಿಗರು ಪಾಲ್ಗೊಂಡು, ಅನೇಕ ಸಾಂಸ್ಕೃತಿಕ ಕಾರ್ಯಕ್ರಮಗಳಲ್ಲಿ ಭಾಗವಹಿಸಿ, ಪ್ರೇಕ್ಷಕರ ಮನರಂಜಿಸಿದರು. ಬೆಳಗ್ಗೆ ೧೧ ಗಂಟೆಗೆ ಪ್ರಾರಂಭವಾದ ಸರ್ವ ಸಭಿಕರ ಸಭೆಯಲ್ಲಿ, ನೂತನ ಅಧ್ಯಕ್ಷರನ್ನಾಗಿ ಶ್ರೀ ಅಶೋಕ್ ಕಟ್ಟಿಮನಿಯವರನ್ನು ಆಯ್ಕೆ ಮಾಡಲಾಯ್ತು. ಇದೇ ಸಂದರ್ಭದಲ್ಲಿ ಮಕ್ಕಳಿಗಾಗಿ ವಿವಿಧ ಸ್ಪರ್ಧೆಗಳನ್ನು ಏರ್ಪಡಿಸಲಾಗಿತ್ತು. ಚಿತ್ರಕಲಾ ಸ್ಪರ್ಧೆ, ಬೃಂದಾವನ ಐಡಲ್, ಕನ್ನಡ ಆಶುಭಾಷಣ ಸ್ಪರ್ಧೆ, ಕನ್ನಡ ಅಕ್ಷರಮಾಲೆ ಹಾಗು ಕಾಗುಣಿತ ಸ್ಪರ್ಧೆಗಳಲ್ಲಿ ಮಕ್ಕಳು ಬಹಳಷ್ಟು ಸಂಖ್ಯೆಯಲ್ಲಿ ಪಾಲ್ಗೊಂಡು ತಮ್ಮ ಪ್ರತಿಭೆಯನ್ನು ಪ್ರದರ್ಶಿಸಿದರು.

ಮಧ್ಯಾಹ್ನ ರುಚಿಯಾದ ಊಟದ ನಂತರ, ಪ್ರಾರ್ಥನೆಯಿಂದ ಪ್ರಾರಂಭವಾದ ಬೃಂದಾವನ ಸದಸ್ಯರ ಸಾಂಸ್ಕೃತಿಕ ಕಾರ್ಯಕ್ರಮಗಳ ಪ್ರದರ್ಶನ ಸಂಜೆ ೭ ಗಂಟೆಯವರೆಗೂ ಪ್ರೇಕ್ಷಕರ ಮನ ಸೂರೆಗೊಂಡಿತ್ತು.

ಕೀರ್ತಿ ಹಾಗು ತನ್ಮಯಿ ಭರತನಾಟ್ಯ ಶೈಲಿಯಲ್ಲಿ ಗಣೇಶನಿಗೆ ನಮನ ಸಲ್ಲಿಸಿದರು. ಕೆಲವು ಚಿತ್ರಗೀತೆಗಳಿಗೆ ಮಕ್ಕಳ ನಾಟ್ಯ ಪ್ರದರ್ಶನ, ವೃಂದ ಗಾನ, ರಘು ದೀಕ್ಷಿತ್ ರವರ 'ಲೋಕದ ಕಾಳಜಿ' ಹಾಡಿಗೆ, ಸುಚಿತ್ರ ಲಕ್ಷ್ಮೀಶ್ ಶಿಷ್ಯ ವೃಂದದವರು ನುಡಿಸಿದ ವಯೊಲಿನ್ ಹಾಗು ಮೃದಂಗ ವಾದ್ಯ ಗಾನ ಜನರ ಮೆಚ್ಚುಗೆಗೆ ಪಾತ್ರವಾಯ್ತು. ಆನಂದ್ ಹಾಗು ತಂಡದವರು ಸಾಹಸ ಸಿಂಹ ವಿಷ್ಣುವರ್ಧನ್ ರವರ ಹಾಡುಗಳಿಗೆ ಮಾಡಿದ ನೃತ್ಯ ಬಹು ಸೊಗಸಾಗಿ ಮೂಡಿ ಬಂತು.

ಈ ದಿನದ ವಿಶೇಷ ಕಾರ್ಯಕ್ರಮಗಳಲ್ಲೊಂದಾದ "ಜ್ಞಾನ ಪೀಠ ವೈಭವ" ವಂತೂ








ನೆರೆದಿದ್ದ ಜನರನ್ನು ಮಂತ್ರ ಮುಗ್ಧರನ್ನಾಗಿ ಮಾಡಿತ್ತು. ಪುಟ್ಟ ಪುಟ್ಟ ಮಕ್ಕಳು, ಜ್ಞಾನ ಪೀಠ ಪ್ರಶಸ್ತಿ ಪಡೆದ ಕವಿಗಳ ಸಾಲುಗಳನ್ನು ಸುಲಲಿತವಾಗಿ ಹೇಳುವಾಗ, ಮಕ್ಕಳ ಪ್ರತಿಭೆಯನ್ನು ನೋಡಿ ಅಚ್ಚರಿಯಾಯ್ತು.

ಕೊನೆಯದಾಗಿ ರೂಪ ಭಟ್ ಹಾಗು ದೀಪ್ತಿ ಗಡ್ ನಿರ್ದೇಶನದಲ್ಲಿ, ಬೃಂದಾವನ ಬೃಂದಾವನ ಬೆಡಗಿಯರ ಫ್ಯಾಶನ್ ಶೋ ಈ ದಿನದ ಭರ್ಜರಿ ಕಾರ್ಯಕ್ರಮಗಳಲ್ಲೊಂದು..

ಮಕ್ಕಳ ಬಹುಮಾನ ವಿತರಣೆಯೊಂದಿಗೆ, ಈ ಸಾಲಿನ ಮಕ್ಕಳೋತ್ಸವ/ಕನ್ನಡ ರಾಜ್ಯೋತ್ಸವ ಬಹಳ ಅದ್ದೂರಿಯಿಂದ ನೆರವೇರಿತು.

***

### ಸಹಾಯ ಹಸ್ತ

ಬೃಂದಾವನ ಕನ್ನಡ ರಾಜ್ಯೋತ್ಸವ/ಮಕ್ಕಳೋತ್ಸವ ೨೦೧೮ ರಂದು ಕರ್ನಾಟಕದ ನೊಂದ ರೈತರಿಗಾಗಿ ದೇಣಿಗೆ ಕಾರ್ಯಕ್ರಮ ಹಮ್ಮಿಕೊಂಡಿತ್ತು. ಅದರ ವಿತರಣೆಯನ್ನು ಅಧ್ಯಕ್ಷರಾದ ಡಾ: ಅಶೋಕ್ ಕಟ್ಟಿಮನಿಯವರು ಕರ್ನಾಟಕದಲ್ಲಿ "ಮಂಡ್ಯ ಆರ್ಗಾನಿಕ್ ಫಾರ್ಮರ್ ಕೋ-ಆಪರೇಟಿವ್ ಸೊಸೈಟಿ"ಯ ಸಂಸ್ಥಾಪಕರಾದ ಮಧು ಚಂದನ್ ಅವರಿಗೆ ಮಾಡಿದರು.












ಬೃಂದಾವನ ವಾಣಿ
ಬೃಂದಾವನ ಕನ್ನಡ ಕೂಟ, ನ್ಯೂಜೆರ್ಸಿಯ ದ್ವೈಮಾಸಿಕ ಪತ್ರಿಕೆ

ಹಿನ್ನೋಟ

# ಕನ್ನಡ ರಾಜ್ಯೋತ್ಸವ ಮತ್ತು ಮಕ್ಕಳೋತ್ಸವ ೨೦೧೬
























Copyright © KCO – Brindavana

ಸಂಚಿಕೆ
೦೮
ಜನವರಿ ೨೦೧೭

# ಬೃಂದಾವನ ವಾಣಿ

ಬೃಂದಾವನ ಕನ್ನಡ ಕೂಟ, ನ್ಯೂಜೆರ್ಸಿಯ ದ್ವೈಮಾಸಿಕ ಪತ್ರಿಕೆ




## ಶ್ರೀ ಮೈಸೂರು ಶ್ರೀನಿವಾಸ ನಟರಾಜ್

ಸಂದರ್ಶಕರು



ಕಾವ್ಯಾ ಕಡಮೆ ನಾಗರಕಟ್ಟೆ



**ಪರಿಚಯ:** ಮೈಸೂರು ನಟರಾಜ್ ಅವರದು ಬಹುಮುಖಿ ವ್ಯಕ್ತಿತ್ವ. ಇವರು ಬೆಂಗಳೂರು ವಿಶ್ವವಿದ್ಯಾಲಯದಿಂದ ಬಿ.ಇ, ಮುಂಬೈ ಐಐಟಿಯಿಂದ ಎಂ.ಟೆಕ್, ಪೆನ್ಸಿಲ್ವೇನಿಯಾದ ಯುನಿವರ್ಸಿಟಿ ಆಫ್ ಪಿಟ್ಸ್ ಬರ್ಗ್ ನಿಂದ ಡಾಕ್ಟರೇಟ್ ಪದವಿ ಪಡೆದಿದ್ದಾರೆ. ವಿಶ್ವವಿಖ್ಯಾತ ಕನ್ಸಲ್ಟಿಂಗ್ ಕಂಪನಿಯೊಂದರಲ್ಲಿ ತಾಂತ್ರಿಕ ತಜ್ಞರಾಗಿಯೂ, ಜಾರ್ಜ್ ವಾಷಿಂಗ್ಟನ್ ವಿಶ್ವವಿದ್ಯಾಲಯದಲ್ಲಿ ಸಂದರ್ಶಕ ಪ್ರಾಧ್ಯಾಪಕರಾಗಿಯೂ, ಅಮೆರಿಕದ ಅಣುಶಕ್ತಿ ನಿಯಂತ್ರಣ ಆಯೋಗದಲ್ಲಿ ಅಧಿಕಾರಿಯಾಗಿಯೂ ಸೇವೆ ಸಲ್ಲಿಸಿದ ಅನುಭವ ಇವರಿಗಿದೆ. ಅಣುತ್ಯಾಜ್ಯಗಳನ್ನು ಭೂಮಿಯಡಿ ಒಪ್ಪಮಾಡುವ ಅಂತರರಾಷ್ಟ್ರೀಯ ತಂತ್ರಜ್ಞರ ಸಮಿತಿಯಲ್ಲಿ ಅಮೆರಿಕವನ್ನು ಸಕ್ರಿಯವಾಗಿ ಪ್ರತಿನಿಧಿಸಿದ ಹಿರಿಮೆ ಇವರದು. ಕವನ, ನಾಟಕ, ಅಂಕಣ ಬರಹ, ಅನುವಾದ ಸೇರಿದಂತೆ ಕನ್ನಡದಲ್ಲಿ ಹನ್ನೆರಡಕ್ಕೂ ಹೆಚ್ಚು ಕೃತಿಗಳನ್ನು ಪ್ರಕಟಿಸಿದ್ದಾರೆ, ಆರಕ್ಕೂ ಹೆಚ್ಚು ಪ್ರಮುಖ ಗ್ರಂಥಗಳನ್ನು ಸಂಪಾದಿಸಿದ್ದಾರೆ. ಸದಾ ಲವಲವಿಕೆಯಿಂದ ಕನ್ನಡದ ಕೆಲಸಗಳಲ್ಲಿ ಭಾಗಿಯಾಗಿರುವ ನಟರಾಜ್ ಅವರನ್ನು ಹಲವಾರು ಪ್ರಶಸ್ತಿ ಸನ್ಮಾನಗಳು ಅರಸಿ ಬಂದಿವೆ. ಸದ್ಯ ಪೋಟೋಮೆಕ್ ನಿವಾಸಿಯಾದ ಇವರದು ಪತ್ನಿ ಗೀತಾ, ಮಕ್ಕಳು ಮಧೂಲಿಕಾ, ಶ್ರುತಿರಂಜಿನಿ, ಶ್ರೀನಿವಾಸ್ ರೊಂದಿಗಿನ ಸುಖಿ ಕುಟುಂಬ. ಏನೆಲ್ಲ ಸಾಧನೆ ಮಾಡಿಯೂ 'Down to Earth' ವ್ಯಕ್ತಿತ್ವದ ಮೈ.ಶ್ರೀ.ನಟರಾಜ್ ಅವರ ಸಂದರ್ಶನ ಇಲ್ಲಿದೆ.

***೧. ಹಾಸನದಲ್ಲಿ ನಿಮ್ಮ ಬಾಲ್ಯ ಹೇಗಿತ್ತು? ನಿಮ್ಮ ವ್ಯಕ್ತಿತ್ವಕ್ಕೆ ನಿಮ್ಮ ಬಾಲ್ಯ ಹೇಗೆ ಪೂರಕವಾಗಿದೆ? ಹಾಗೆಯೇ ನಿಮ್ಮ ಹೆಸರಿನಲ್ಲಿರುವ ಮೈಸೂರಿನ ಕುರಿತ ಅನುಭವಗಳನ್ನು ನಮ್ಮೊಡನೆ ದಯವಿಟ್ಟು ಹಂಚಿಕೊಳ್ಳಿ.***

ಮೈಸೂರಿನ ಬಗ್ಗೆ ಮುಂದೆ ಹೇಳುವೆ, ಮೊದಲು ಹಾಸನದ ಮಾತಾಗಲಿ. ನಾನು ಹುಟ್ಟಿದ್ದು ಹಾಸನದಲ್ಲಿ, ಅದಕ್ಕೇ ಆ ಊರಿನ ಬಗ್ಗೆ ನನಗೆ ತೌರಿನ ಸಂಬಂಧ. ನಾನು ಹುಟ್ಟಿದ ತರುಣದಲ್ಲೇ ನಮ್ಮತಂದೆಯವರಿಗೆ ಬೇರೆ ಕಡೆಗೆ ವರ್ಗವಾಗಿ ಇಡೀ ಸಂಸಾರ ಅವರೊಂದಿಗೆ ಹೊರಟಿತು. ಹೀಗೆ ನನ್ನ ಶೈಶವ ಅಣಪಿನ ಕಟ್ಟೆ, ಆಯನೂರು ಮತ್ತು ಶಿವಮೊಗ್ಗದಲ್ಲಿ ಕಳೆಯಿತು. ಸಣ್ಣ ಪುಟ್ಟ ನೆನಪುಗಳನ್ನು ಬಿಟ್ಟರೆ ಆ ಊರುಗಳು ಮನಸ್ಸಿನಲ್ಲಿ ಮಸುಕುಮಸುಕಾಗಿ ಉಳಿದಿವೆಯಷ್ಟೆ. ಆದರೆ, ಶಿವಮೊಗ್ಗದಲ್ಲಿದ್ದಾಗಲೇ ನಮ್ಮ ತಾಯಿ ಮತ್ತು ತಂದೆ ನನಗೆ ರಾಮಾಯಣ, ಮಹಾಭಾರತ, ಧ್ರುವ, ಪ್ರಹ್ಲಾದ ಮುಂತಾದ ಕಥೆಗಳನ್ನು ಹೇಳಿಕೊಟ್ಟಿದ್ದರು. ಅವುಗಳನ್ನು ನಾನು ಮನೆಗೆ ಬಂದ ನೆಂಟರು ಮತ್ತು ಅತಿಥಿಗಳ ಮುಂದೆ ಚಾಚೂ ತಪ್ಪದೆ ಹೇಳಿ ಶಹಭಾಶ್ ಎನ್ನಿಸಿಕೊಳ್ಳುತ್ತಿದ್ದೆ! ಪ್ರಾಥಮಿಕ ಶಾಲೆ ಸೇರಿಕೊಳ್ಳುವ ಹೊತ್ತಿಗೆ ಮತ್ತೆ ವರ್ಗ, ಮುಂದಿನ ಊರು ತುಮಕೂರು. ಅಲ್ಲೇ ನನ್ನ ಪ್ರಾಥಮಿಕ ಶಾಲೆಯಲ್ಲಿ ನಾಲ್ಕು ವರ್ಷಗಳ ಮತ್ತು ಮಾಧ್ಯಮಿಕ ಶಾಲೆಯ ಒಂದು ವರ್ಷದ ವಿದ್ಯಾಭ್ಯಾಸ. ರಾಮದೇವರ ಗುಡಿಯ ಬಳಿ ನಮ್ಮ ಮನೆ, ಗುಡಿಯ ಪ್ರಾಕಾರದಲ್ಲೇ ಪ್ರಾಥಮಿಕ ಶಾಲೆ. ರಾಮದೇವರ ಗುಡಿಯಲ್ಲಿ ಹತ್ತಾರು ಹರಿಕಥೆಗಳು, ಸಂಗೀತದ ಕಾರ್ಯಕ್ರಮಗಳು ನಡೆಯುತ್ತಿದ್ದವು. ಭಕ್ತಾದಿಗಳು ಮಾಡಿಸುತ್ತಿದ್ದ ಪೂಜೆಗಳನ್ನು ನೋಡಲು ಹೋಗುತ್ತಿದ್ದುದು ಕೊನೆಯಲ್ಲಿ ಸಿಗುತ್ತಿದ್ದ ಚರ್ಪಿಗಾಗಿ! ಅಲ್ಲಿನ ಒಬ್ಬ ಪೂಜಾರಿ ನಮಗೆಲ್ಲ ಚಿರಪರಿಚಿತರು. ಮಧ್ಯಾಹ್ನ ಬಿಸಿಲಿನಲ್ಲಿ ನೀರು ಕುಡಿಯಲು ಅವರ ಮನೆಗೇ ಹುಡುಗರೆಲ್ಲಾ ಹೋಗುತ್ತಿದ್ದುದು. ಭಟ್ಟರ ಮಗನಿಗೆ, ಮಡಕೆಯಲ್ಲಿಟ್ಟಿದ್ದ ತಣ್ಣೀರನ್ನು ನಮಗೆಲ್ಲಾ ಅಲುಮಿಯಮ್ ಲೋಟದಲ್ಲಿ ತುಂಬಿ ಕೊಡುವುದೇ ಕೆಲಸ. ಆದರೆ ಪ್ರಾಕಾರದೊಳಗಿದ್ದ ಮಾವಿನಮರಗಳಲ್ಲಿ ಬಿಡುತ್ತಿದ್ದ ಕಾಯಿಗಳಿಗೆ ಕಲ್ಲು ಹೊಡೆಯುವ ಅಪರಾಧ ಮಾಡಿದರೆ ಭಟ್ಟರ ಕೈಲಿ ಬಿಗಿತ ತಪ್ಪುತ್ತಿರಲಿಲ್ಲ!

ತುಮಕೂರಿನಲ್ಲಿದ್ದಾಗಿನ ಅತ್ಯಂತ ಸುಂದರ ನೆನಪುಗಳೆಂದರೆ, ಮನೆಗೆ ನೆಂಟರಿಷ್ಟರು ಬಂದಾಗಲೆಲ್ಲ ಏರ್ಪಡಿಸುತ್ತಿದ್ದ 'ನಾಮದಚಿಲುಮೆ' ಪಿಕ್ನಿಕ್ಕುಗಳು! ತಂದೆಯವರು ಅರಣ್ಯಾಧಿಕಾರಿಯಾಗಿದ್ದುದರಿಂದ ಅಲ್ಲಿನ ಪ್ರವಾಸಿ ಬಂಗಲೆಯಲ್ಲಿ ನಮಗೆ ಒಳ್ಳೆಯ ಆತಿಥ್ಯ ಸಿಗುತ್ತಿತ್ತು. ಬಂಗಲೆಯ ಪಕ್ಕದಲ್ಲೇ ನಿರಂತರವಾಗಿ ಉಕ್ಕಿ ಹರಿಯುವ ಸಿಹಿನೀರಿನ ಬುಗ್ಗೆಯನ್ನು ಖಾಲಿಮಾಡಿ ಅದು ಮತ್ತೆ ತುಂಬಿಕೊಳ್ಳಲು ಎಷ್ಟು ಸಮಯ ಬೇಕೆಂದು ನೋಡುವುದೇ ಒಂದು ಮೋಜು! (ರಾಮ ವನವಾಸದಲ್ಲಿದ್ದಾಗ, ನಾಮ ಹಾಕಿಕೊಳ್ಳಲು ನೀರು ತಾರೆಂದು ಲಕ್ಷ್ಮಣನನ್ನು ಕಳುಹಿಸಲು, ಆತನೋ ಅಲ್ಲೇ ಒಂದು ಬಾಣ ಬಿಟ್ಟು ತೋಡಿದನೆನ್ನಲಾದ ಗುಂಡಿ ಈಗಲೂ ಇದೆ, ಅದರಿಂದ ಬುಗ್ಗೆ ನಿರಂತರವಾಗಿ ಇನ್ನೂ ಚಿಮ್ಮುತ್ತಲೇ ಇದೆ!) ನಾಮದ ಚಿಲುಮೆಯಿಂದ ಮುಂದೆ ಕಾಲುನಡಗೆಯಲ್ಲೇ ನಾವು ಹೋಗುತ್ತಿದ್ದ ದೇವರಾಯನ ದುರ್ಗ, ಮೂರು ಘಟ್ಟಗಳ ಬೆಟ್ಟಗಳು, ಒಂದರ ಮೇಲೊಂದು. ಹತ್ತುವುದಕ್ಕೆ ಒಂದಕ್ಕಿಂತ ಮುಂದಿನದು ಕಠಿಣ. ಪ್ರತಿ ಬೆಟ್ಟದ ಮೇಲೂ ಒಂದು ನರಸಿಂಹದೇವರ ದೇವಸ್ಥಾನ -ಯೋಗ ನರಸಿಂಹ, ಭೋಗ ನರಸಿಂಹ ಮತ್ತು ಉಗ್ರ ನರಸಿಂಹ! ಕೊನೇ ಬೆಟ್ಟದ ತುಟ್ಟ ತುದಿ ಮುಟ್ಟಿ ಕತ್ತಲಾಗುವುದರೊಳಗೇ ಹಿಂದಿರುಗದಿದ್ದರೆ ಹುಲಿಯ ಕೈಗೆ ಸಿಕ್ಕಿಕೊಳ್ಳುವುದಂತೂ ಖಂಡಿತ! ಅಂತಿಮ ಘಟ್ಟದಲ್ಲಿ ಅನೇಕ ಬಾರಿ ಕೇಳಿದ್ದ ದೂರದಿಂದ ಬರುತ್ತಿದ್ದ ಹುಲಿಯ ಘರ್ಜನೆ ನೆನೆಸಿಕೊಂಡರೆ ಬಾಲ್ಯದಲ್ಲಿ ಉಚ್ಚೆ ಹುಯ್ದುಕೊಂಡದ್ದರ ನೆನಪಾಗುವುದು! ಇವೇ ಅಲ್ಲದೇ, ಸಿದ್ಧಗಂಗೆ ಮತ್ತು ಶಿವಗಂಗೆ ಮುಂತಾದ ಯಾತ್ರಾಸ್ಥಳಗಳಿಗೂ ಹಲವಾರು ಬಾರಿ ಭೇಟಿಕೊಟ್ಟ ನೆನಪು ಇನ್ನೂ ಹಸಿರಾಗಿದೆ.

ಮಾಧ್ಯಮಿಕ ಶಾಲೆಯ ಒಂದು ವರ್ಷ ಕಳೆದಕೂಡಲೇ ತಂದೆಯವರಿಗೆ ಮತ್ತೊಂದು ವರ್ಗ, ಈ ಸಾರಿ ಚಾಮರಾಜನಗರಕ್ಕೆ. ತಂದೆಯವರ ಸರ್ಕಾರೀ ಸೇವೆಯ ಕೊನೇ ವರ್ಷ. ಮಾಧ್ಯಮಿಕ ಎರಡನೇ ವರ್ಷ ಭಾಗಶಃ ಅಲ್ಲಿ ಕಳೆದರೂ ಹೆಚ್ಚುಕಾಲ ನಾನು ಟೈಫಾಯ್ಡ್ ಜ್ವರದಿಂದ ನರಳಿದ್ದೇ ಅಲ್ಲಿನ ನೆನಪುಗಳಲ್ಲಿ ಮುಖ್ಯವಾಗಿ ಉಳಿದಿರುವುದು! ಆದರೆ, ತಂದೆಯವರು ಏರ್ಪಡಿಸುತ್ತಿದ್ದ ಸಫಾರಿಗಳು, ಓಹ್, ರೋಮಾಂಚಕ!.

(ಮುಂದಿನ ಪುಟಕ್ಕೆ...)



Copyright © KCO – Brindavana

# ಬೃಂದಾವನ ವಾಣಿ

ಬೃಂದಾವನ ಕನ್ನಡ ಕೂಟ, ನ್ಯೂಜೆರ್ಸಿಯ ದ್ವೈಮಾಸಿಕ ಪತ್ರಿಕೆ




ಕ್ಯಾತೇದೇವರಗುಡಿಯಲ್ಲಿರುವ ಮೈಸೂರು ಅರಸರ ಅರಮನೆಯಲ್ಲಿ ಯಾರಿಗೂ ಕಾಣದಂತೆ ದಪ್ಪನೆಯ ಹಾಸಿಗೆಯಲ್ಲಿ ಎರಡು ನಿಮಿಷ ಮಲಗಿದ ತೃಪ್ತಿ, ಪಾಶ್ಚಿಮಾತ್ಯ ಮಾದರಿಯ ಕಮೋಡನ್ನು ಉಪಯೋಗಿಸಲು ಬಾರದೇ ಅದರ ಮೇಲೇರಿ ತಿರುಗಾಮುರುಗಾ ಕುಕ್ಕುರು ಕೂತು ಹೊರಗೆಲ್ಲಾ ಹೇಸಿಗೆಮಾಡಿ ಗಾರ್ಡಿನ ಕೈಲಿ ಬೈಸಿಕೊಂಡ ಮಜಾ, ಅರಣ್ಯ ಇಲಾಖೆಯ ಆನೆಗಳ ಮೇಲೆ ಮಾಡಿದ ಸವಾರಿಯ ಪುಳಕ, ಪುಟ್ಟ ಆನೆ ಮರಿಗಳಿಗೆ ಹುಲ್ಲನ್ನು ಸಿಂಬಿ ಮಾಡಿ ಅದರೊಳಗೆ ಭತ್ತವನ್ನು ತುಂಬಿ ಪುಟ್ಟ ಸೊಂಡಿಲ ಹಿಂದೆ ಬಾಯಿಗೆ ತೂರಿಸುವಾಗಿನ ಸಂಭ್ರಮ! ಒಂದೇ ಎರಡೇ? ಅಲ್ಲೇ ಬಿಳಿಗಿರಿರಂಗನ ಬೆಟ್ಟದ ರಂಗನಾಥಸ್ವಾಮಿಯ ದೇಗುಲ. ಹಾಗೇ ಬಂಡಿ ಪುರಕ್ಕೆ ಪ್ರಯಾಣ. ಹಿಮವದ್ಗೋಪಾಲಸ್ವಾಮಿಯ ದೇವಸ್ಥಾನ ತಲುಪುವಾಗ ತೆರೆದ ಟಾಪಿನ ಲಾರಿಯಲ್ಲಿ ಮೋಡಗಳ ನಡುವೆ ಮಾಡಿದ ಪ್ರಯಾಣ, ಅಲ್ಲಿದ್ದ ಬ್ರಿಟಿಷರ ಕಾಲದ ಗಾಜಿನ ಮನೆಯಲ್ಲಿ ರಾತ್ರಿ ಊಟಮಾಡಿ ಮಲಗಿದ್ದು, ಮಾರನೆಯ ಬೆಳಿಗ್ಗೆ, ಜಿಂಕೆಗಳ ಗುಂಪು, ಕಾಡೆಮ್ಮೆಗಳ ಗುಂಪು, ಆನೆಗಳ ಹಿಂಡು, ಅವನ್ನೆಲ್ಲಾ ನೋಡಲು ಆನೆಯ ಮೇಲೆ ಸವಾರಿಮಾಡುತ್ತಾ ಹೋಗಿದ್ದು, ಇವೆಲ್ಲ ಹಾಸನವನ್ನು ಮತ್ತೆ ತಲುಪುವ ಮುನ್ನಿನ ಚಾಮರಾಜನಗರದ ಸಿಹಿ ಅನುಭವಗಳು.




ನಾನು ಹುಟ್ಟುವ ಮೊದಲೇ ನಮ್ಮ ತಂದೆಯವರು ಹಾಸನದಲ್ಲೊಂದು ಮನೆಯನ್ನು ಕಟ್ಟಿಸಿದ್ದರಿಂದ ಅವರ ನಿವೃತ್ತಿಯ ನಂತರ ಮತ್ತೆ ಹಾಸನಕ್ಕೆ ಹಿಂದಿರುಗಿ ಅಲ್ಲಿಯೇ ತಮ್ಮ ವಿಶ್ರಾಂತ ಜೀವನವನ್ನು ಕಳೆದರು. ಹುಟ್ಟೂರು ಹಾಸನಕ್ಕೆ ಬಂದಾಗ ಮಾಧ್ಯಮಿಕ ಎರಡನೇ ವರ್ಷ ಇನ್ನೂ ಮುಗಿದಿರಲಿಲ್ಲ. ಹಾಸನ ನನ್ನ ಬಾಲ್ಯದ ಮಹತ್ವದ ತಾಣ, ಎಕ್ಸ್ಟೆನ್ಶನ್ ಮಿಡಲ್ ಸ್ಕೂಲ್ ನಂತರ, ಸರ್ಕಾರೀ ಉನ್ನತ ಪ್ರೌಢಶಾಲೆಯಲ್ಲಿ ಎಸ್ ಎಸ್ ಎಲ್ ಸಿ ಮತ್ತು ಸರ್ಕಾರೀ ಕಾಲೇಜಿನಲ್ಲಿ ಪಿಯುಸಿವರೆಗಿನ ದಿನಗಳು ನನ್ನ ವ್ಯಕ್ತಿತ್ವವನ್ನು ರೂಪುಗೊಳಿಸಿದವು. ಮಾಧ್ಯಮಿಕ ಶಾಲೆಯಲ್ಲಿ ಸ್ಕೌಟ್ ಸಂಸ್ಥೆಯನ್ನು ಸೇರಿದ ನಾನು ಈಗಲ್ ಸ್ಕೌಟ್ ಆಗುವ ತನಕ ಮುನ್ನಡೆದು ಆ ಯಾತ್ರೆಯಲ್ಲಿ ಕಲಿತ ಜೀವನದ ಪಾಠಗಳು ಇಂದಿಗೂ ನನ್ನೊಂದಿಗೆ ಉಳಿದುಕೊಂಡಿವೆ! ಸ್ಕೌಟ್ ದಳದ ಸ್ವಯಂಸೇವಕನಾಗಿ ಹಲವು ಬೇಸಿಗೆ ರಜೆಗಳಲ್ಲಿ ಶ್ರಮದಾನ ಶಿಬಿರಗಳಲ್ಲಿ ಭಾಗವಹಿಸಿ, ಹಳ್ಳಿಗಳಲ್ಲಿ ಕಳೆದ ದಿನಗಳಲ್ಲಿ ಹಲವಾರು ಪಾಠಗಳನ್ನು ಕಲಿತೆ. ಕಸ್ತೂರ್ವಳ್ಳಿ ಎಂಬ ಹಳ್ಳಿಯನ್ನು ಮುಖ್ಯ ರಸ್ತೆಗೆ ಸೇರಿಸಲು ನಾವೆಲ್ಲಾ ಸೇರಿ ಕಟ್ಟಿದ ಕೆರೆಯ ಅಂಚಿನ ಅಣೆಕಟ್ಟು (ಕೆರೆಯಿಂದಲೇ ಅಗೆದು ತೆಗೆದ ಜೇಡಿಮಣ್ಣಿನಿಂದ ಕಟ್ಟಿದ್ದು), ಇವೆಲ್ಲಾ ಸವಿನೆನಪುಗಳು. ಮುಕುಂದಯ್ಯ ಮತ್ತು ರಾಧ್ಯಕೃಷ್ಣ ಎಂಬ ಇಬ್ಬರು ಮಹಾನುಭಾವರು ನನ್ನಲ್ಲಿದ್ದ ಬಾಲ್ಯದ ತುಂಟತನ ಮತ್ತು ಅಶಿಸ್ತುಗಳನ್ನು ನಿವಾರಿಸಿಕೊಳ್ಳುವುದರಲ್ಲಿ ಮತ್ತು ಮುಂದಾಳುತನವನ್ನು ಬೆಳೆಸಿಕೊಳ್ಳುವುದರಲ್ಲಿ ಮಾರ್ಗದರ್ಶನಮಾಡಿದ ಪ್ರಮುಖ ಸ್ಕೌಟ್ಮಾಸ್ಟರ್ಗಳು. ಇವರಿಬ್ಬರ ನಾಯಕತ್ವದಲ್ಲಿ ನಾನು ತುಮಕೂರಿನಲ್ಲಿ ಸ್ಟೇಟ್ ಜಾಂಬೂರಿ, ರಾಜಾಸ್ಥಾನದ ಜೈಪುರದಲ್ಲಿ ನಡೆದ ನ್ಯಾಶನಲ್ ಜಾಂಬೂರಿ ಮತ್ತು ಹೈದರಾಬಾದಿನಲ್ಲಿ ನಡೆದ ರೀಜನಲ್ ಜಾಂಬೂರಿ, ಹೀಗೆ ಹಲವು ಹತ್ತು ಸ್ಥಳಗಳಲ್ಲಿ ಹಾಸನವನ್ನು ಪ್ರತಿನಿಧಿಸುವ ಅವಕಾಶ ಸಿಕ್ಕಿತು. ಜೈಪುರ್ ಜಾಂಬೂರಿಗೆ ಹೋದಾಗ ನನಗ ಕೇವಲ ೧೨ ವರ್ಷ, ಅದೇ ಸಂದರ್ಭದಲ್ಲಿ ದೆಹಲಿ, ಆಗ್ರಾ ಮುಂತಾದ ಸ್ಥಳಗಳಿಗೆ ಭೇಟಿ ಕೊಟ್ಟ ಹೆಮ್ಮೆ, ಅದಕ್ಕಿಂತ ಹೆಚ್ಚಾಗಿ ದೇಶಪರ್ಯಟನೆಯಿಂದ ದೊರೆತ ಅನುಭವ ಶಬ್ದಗಳಲ್ಲಿ ವರ್ಣಿಸಲಾಗದ್ದು. ಸ್ಕೌಟ್ ನಾಯಕನಾಗಿ ಮೈಸೂರಿನಲ್ಲಿ ಆಗ ಅದ್ದೂರಿಯಿಂದ ನಡೆಯುತ್ತಿದ್ದ ದಸರಾ ಜಂಬೂಸವಾರೀ ಪೆರೇಡಿನಲ್ಲಿ ಮೂರು ಬಾರಿ ಭಾಗವಹಿಸುವ ಅವಕಾಶ ಸಿಕ್ಕಿತ್ತು! ಅರಮನೆಯಿಂದ ಹೊರಟು, ಬನ್ನಿ ಮಂಟಪ ತಲಪಲು ಹಲವು ಘಂಟೆಗಳೇ ಬೇಕು. ಅಲ್ಲಿ ಜಯಚಾಮರಾಜ ಒಡೆಯರಿಗೆ ಮೂರು ಬೆರಳಿನ ಸೆಲ್ಯೂಟ್ ಹೊಡೆದಾಗ ಸ್ವರ್ಗಕ್ಕೆ ಮೂರೇ ಗೇಣು! ಒಂದು ಸಾರಿ ಜಂಬೂ ಸವಾರಿಯಲ್ಲಿ ಹುಚ್ಚಾಪಟ್ಟೆ ಸುರಿದ ಮಳೆಯಲ್ಲಿ ನೆಂದು ತೊಪ್ಪೆಯಾಗಿ ಯಾರು ಯಾವ ಕಂಟಿಂಜೆಂಟಿನವರೆಂದು ಗೊತ್ತಾಗದೇ ಕತ್ತಲೆಯಲ್ಲಿ ಯಾವ್ಯಾವುದೋ ಗುಂಪಿನವರ ಜೊತೆ ಮಾರ್ಚ್ ಮಾಡಿ ಸುರಿಯುವ ಮಳೆಯಲ್ಲೇ ನಡೆದು ಕ್ಯಾಂಪಿಗೆ ಹಿಂದಿರುಗಿದಾಗ ಎಲ್ಲರಿಗೂ ಅಕ್ಷಿ ಅಕ್ಷಿ ಸೀನುಗಳು! ನಮ್ಮಲ್ಲನೇಕರು ಪೆರೇಡ್ ಗ್ರೌಂಡಿನಲ್ಲಿ ತಡೆದುಕೊಳ್ಳಲಾಗದೇ ನಿಂತಲ್ಲೇ ಉಚ್ಚೆ ಹುಯ್ದಿದ್ದು ಅದು ಧಾರಾಕಾರವಾಗಿ ಸುರಿಯುತ್ತಿದ್ದ ಮಳೆಯೊಂದಿಗೆ ಸೇರಿದ್ದು ಸ್ಕೌಟ್ ಮಾಸ್ಟರಿಗೆ ತಿಳಿಯಲೇ ಇಲ್ಲ! (ಆ ಸುರಿಯುವ ಮಳೆಯಲ್ಲಿ ನಾಲ್ಕೈದು ಘಂಟೆ ತಡೆದುಕೊಳ್ಳಿ ಅಂದರೆ, ಹೇಗೆ ತಾನೇ ಸಾಧ್ಯ?)

ಹಾಸನದಲ್ಲಿ ನನ್ನ ಸಂಸ್ಕೃತ ಅಭ್ಯಾಸ ಪ್ರಾರಂಭವಾಯಿತು, ಅದು ಇಂದಿಗೂ ಮುಂದು ವರೆದಿದೆ. ಕನ್ನಡವನ್ನು ಸರಿಯಾಗಿ ಕಲಿಯಲಾಗಲಿಲ್ಲವಲ್ಲಾ ಎಂದು ಕೊರಗುವಾಗ, ಹೋಗಲೀ ಸಂಸ್ಕೃತ ಕೊಂಚವಾದರೋ ದಕ್ಕಿತಲ್ಲ ಎಂಬ ಸಮಾಧಾನ! ಪ್ರೌಢಶಾಲೆಯಲ್ಲಿ ಕನ್ನಡ ಕೈಬಿಟ್ಟಿತು, ಆಂಗ್ಲ ಮಾಧ್ಯಮದ ಕಾರಣ (ಸಂಸ್ಕೃತ ದ್ವಿತೀಯ ಭಾಷೆ). ಆದರೆ, ನನ್ನ ಅದೃಷ್ಟ, ನನಗೆ ಪಂಡಿತ ನಂ. ಅಶ್ವತ್ಥನಾರಾಯಣರಂಥಾ ಹಿತಚಿಂತಕರ ಸಾನ್ನಿಧ್ಯ ದೊರಕಿತು. ಹೈಸ್ಕೂಲಿನಲ್ಲಿದ್ದಷ್ಟೂ ದಿನಗಳು ಅವರು ತರಗತಿಯ ಹೊರಗೆ ನನ್ನ ಕನ್ನಡ ಗುರುಗಳಾಗಿದ್ದರು. ಅದರಲ್ಲೂ, ಪ್ರಾಂತ್ಯದ ವಿವಿಧ ಊರುಗಳಿಗೆ ಚರ್ಚಾಸ್ಪರ್ಧೆಯಲ್ಲಿ ಭಾಗವಹಿಸಲು ಹೋಗುತ್ತಿದ್ದಾಗ ಜೊತೆಯಲ್ಲೇ ಬಂದು ನಮಗೆ ಮಾರ್ಗದರ್ಶನ ಮಾಡುತ್ತಿದ್ದರು, ಪ್ರಯಾಣದ ವೇಳೆಯಲ್ಲಿ ಹಲವು ಹತ್ತು ಉಪಯುಕ್ತ ವಿಷಯಗಳನ್ನು ಬೋಧಿಸುತ್ತಿದ್ದರು. ನನ್ನಲ್ಲಿ ಕನ್ನಡಪ್ರೇಮದ ಬುನಾದಿ ಹಾಕಿದವರು ಅವರೇ.ಕಾಲೇಜಿನಲ್ಲಿ ಪಿಯುಸಿ ಓದುವಾಗ ಯು. ಆರ್. ಅನಂತಮೂರ್ತಿ ಮತ್ತು ತಳುಕಿನ ಮಗ ಟಿ.ವಿ.ಅಶ್ವತ್ಥನಾರಾಯಣರಾವ್ ಇಂಗ್ಲಿಷ್ ಮೇಷ್ಟ್ರುಗಳಾಗಿ ದೊರಕಿದ್ದು ನನ್ನ ಬಾಳಿನ ಮತ್ತೊಂದು ಸುಕೃತ.ನಾನು ಕನ್ನಡದ ವಿದ್ಯಾರ್ಥಿಯಲ್ಲದಿದ್ದರೂ ಕನ್ನಡ ಉಪನ್ಯಾಸಕರಾಗಿದ್ದ ತಿಪ್ಪೇರುದ್ರಸ್ವಾಮಿಗಳು ನನ್ನ ಮೇಲೆ ಪ್ರಭಾವಬೀರಿದ ವ್ಯಕ್ತಿಗಳಲ್ಲಿ ಮುಖ್ಯರು. ಅವರು ಮಾಡುತ್ತಿದ್ದ ಯಾವ ಭಾಷಣವನ್ನೂ

(ಮುಂದಿನ ಪುಟಕ್ಕೆ....)


Copyright © KCO – Brindavana


# ಬೃಂದಾವನ ವಾಣಿ

ಬೃಂದಾವನ ಕನ್ನಡ ಕೂಟ, ನ್ಯೂಜೆರ್ಸಿಯ ದ್ವೈಮಾಸಿಕ ಪತ್ರಿಕೆ




ತಪ್ಪಿಸಿಕೊಳ್ಳುತ್ತಿರಲಿಲ್ಲ. ಅವರು ಅಚ್ಚಕನ್ನಡದಲ್ಲಿ ಘಂಟೆಗಟ್ಟಲೆ ನಿರರ್ಗಳವಾಗಿ ಭಾಷಣ ಮಾಡುತ್ತಿದ್ದರು. ಅನಂತಮೂರ್ತಿಗಳು ಅತ್ಯುತ್ತಮ ಬೋಧಕರಾಗಿದ್ದರು .ಅವರು ಪಾಠಮಾಡುವ ಶೈಲಿ ಕಾಲೇಜಿನಲ್ಲಿ ಮತ್ತಾರಿಗೂ ಇರಲಿಲ್ಲ. ಅವರು ಮಾಡಿದ "ಲೀಡ್ ಕೈಂಡ್ಲಿ ಲೈಟ್" ಪದ್ಯದ ಪಾಠ ಮರೆಯಲು ಸಾಧ್ಯವೇ? ಅದನ್ನು ಅವರು ಬಿಎಂಶ್ರೀ ಅವರ "ಕರುಣಾಳು ಬಾ ಬೆಳಕೆ" ಮೂಲಕ ವಿವರಿಸಿದ್ದು ಇಂದೂ ಮರೆತಿಲ್ಲ! ವರ್ಷ ಮುಗಿಯುವ ಮೊದಲೇ ಅನಂತಮೂರ್ತಿಗಳು ಮತ್ತು ತಿಪ್ಪೇರುದ್ರಸ್ವಾಮಿಗಳೂ ಮೈಸೂರಿಗೆ ಹೊರಟುಬಿಟ್ಟಿದ್ದು ನಮಗೆಲ್ಲಾ ತುಂಬಲಾರದ ನಷ್ಟವಾಗಿತ್ತು (ದುರ್ದೈವದಿಂದ ಟಿ.ವಿ. ಅಶ್ವತ್ಥನಾರಾಯಣರಾಯರೂ ಅದೇ ಕೆಲವು ದಿನಗಳಲ್ಲಿ ಅಕಾಲಮರಣಕ್ಕೆ ತುತ್ತಾದದ್ದು ವಿದ್ಯಾರ್ಥಿಗಳಿಗೆ ಸಹಿಸಲಸಾಧ್ಯವಾದ ದುರಂತವಾಗಿತ್ತು.) ಇವರೆಲ್ಲಾ ನನ್ನ ಮಾನಸಿಕ ಬೆಳವಣಿಗೆಗೆ ಕಾರಣರಾದ ಅಧ್ಯಾಪಕರು.

ಪಿಯುಸಿ ಮುಗಿಸಿ ಬೆಂಗಳೂರಿನಲ್ಲಿ ಇಂಜಿನಿಯರಿಂಗ್ ಸೇರುವ ಹೊತ್ತಿಗೆ ಹಾಸನದ ಋಣಾನುಬಂಧ ತೀರಿತೆಂದೇ ಹೇಳಬೇಕು. ಬೆಂಗಳೂರಿನಲ್ಲಿ ಆ ದಿನಗಳಲ್ಲಿ ಅ.ನ. ಕೃಷ್ಣರಾಯರ ಕನ್ನಡ ಚಳವಳಿ ಪ್ರಾರಂಭವಾಗಿತ್ತು, ಅದರ ಪ್ರಭಾವ ಸಹ ನನ್ನ ಮೇಲೆ ಬಹಳವಾಗೇ ಆಯಿತೆನ್ನಬೇಕು. ಬಿಇ ಮುಗಿಸಿ ಎಮ್ಟೆಕ್ ಗಾಗಿ ಮುಂಬೈ ಐಐಟಿ ಸೇರುವ ವೇಳೆಗೆ ಎಮ್.ಎಸ್. ನಟರಾಜ ಎನ್ನುವ ಹೆಸರನ್ನು ದೀರ್ಘಗೊಳಿಸಿ ಮೈಸೂರು ಶ್ರೀನಿವಾಸ ನಟರಾಜ ಎಂದು ಬರೆದು ಕೊಳ್ಳುವುದು ಅನಿವಾರ್ಯವಾಯಿತು.ಮುಂದೆ ಅಮೆರಿಕೆಗೆ ಬರುವ ಸಂದರ್ಭದಲ್ಲಿ ಮೈಸೂರು ಅನ್ನುವುದು ನನ್ನ ಪ್ರಥಮ, ಶ್ರೀನಿವಾಸ ಎಂಬುದು ಮಧ್ಯಮ ಹಾಗೂ ನಟರಾಜ ಅನ್ನುವುದು ಅಂತಿಮ ನಾಮಗಳಾದವು. (ಪ್ರಥಮ, ಮಧ್ಯಮ, ಅಂತಿಮ ನಾಮಗಳ ಪರಿಕಲ್ಪನೆ ದಾಕ್ಷಿಣಾತ್ಯರಾದ ನಮಗೆ ಅರಿವಾಗಿದ್ದೇ ಅಮೆರಿಕೆಗೆ ಬರಲು ಅರ್ಜಿ ತುಂಬಿದಾಗ. ಮುಂಬೈನಲ್ಲಿ ಸರ್ ನೇಮ್, ಫ್ಯಾಮಿಲಿ ನೇಮ್ ಮುಂತಾದ ಗೊಂದಲಗಳು ಪ್ರಾರಂಭವಾಗಿದ್ದವು. ಅಲ್ಲಿಯ ವರೆಗೂ ಎರಡು ಇನಿಶಿಯಲ್ಸ್ ಮತ್ತು ಹುಟ್ಟಿದಾಗ ಇಟ್ಟ ಒಂದೇ ಹೆಸರಿನವರ ಪೈಕಿ ನಾನು!)




ಮೈಸೂರಿನಲ್ಲಿ ಹುಟ್ಟದ, ಬೆಳೆಯದ ನನಗೆ ಮೈಸೂರು ಹೆಸರಿನಲ್ಲಿ ಅಂಟಿಕೊಂಡದ್ದು ಹೇಗೆಂದರೆ, ನಮ್ಮ ವಂಶದ ಹಿರೀಕರೊಬ್ಬರು ಏಳು ತಲೆಗಳ ಹಿಂದೆ ಅಂದರೆ ನಾಲ್ಕನೇ ಮೈಸೂರು ಯುದ್ಧದ (೧೭೯೯) ಆಚೆ ಈಚೆ ಸಂದರ್ಭದಲ್ಲಿ ಮೈಸೂರರಮನೆಯ ಭಕ್ಷಿಗಳಾಗಿದ್ದ ಕಾರಣದಿಂದ. ಅಂಚೆ ಭಕ್ಷಿ ತಿಪ್ಪಯ್ಯನವರೆಂದೇ ಪ್ರಸಿದ್ಧರಾಗಿದ್ದ, ಮೈಸೂರರಸರಿಂದ ಜಾಗೀರುಗಳನ್ನು ಪಡೆದಿದ್ದ ಅವರ ವಂಶ ಮೈಸೂರು ಮನೆತನವೆಂದು ಪ್ರಸಿದ್ಧವಾಯಿತು. ಅವರ ವಂಶಜರೆಲ್ಲರ ಮೊದಲ ಹೆಸರು ಮೈಸೂರು ಎಂದೇ ಇತ್ತು (ಈಗ ಅನೇಕರು ಅದನ್ನು ಬದಲಾಯಿಸಿಕೊಂಡಿದ್ದಾರೆ,ನನಗೂ ಬದಲಾಯಿಸಿಕೊಳ್ಳುವ ಅವಕಾಶ ಅಮೆರಿಕದ ಪೌರತ್ವ ಪಡೆಯುವಾಗ ಇತ್ತಾದರೂ, ಉತ್ತಮ ಆಡಳಿತಗಾರರೆಂದು ಹೈದರ್, ಟಿಪ್ಪು, ಮುಮ್ಮುಡಿ ಕೃಷ್ಣರಾಜಒಡೆಯರು ಮತ್ತು ಬ್ರಿಟಿಷ್ ಅಧಿಕಾರಿಗಳೆಲ್ಲರ ಶಹಭಾಶ್ಗಿರಿ ಪಡೆದಿದ್ದ ಮಹಾನುಭಾವರ ಹೆಸರಿನೊಂದಿಗಿದ್ದ ಏಕಮಾತ್ರ ಕೊಂಡಿಯನ್ನು ಕತ್ತರಿಸಿಕೊಳ್ಳಲು ಮನಸ್ಸಾಗಲಿಲ್ಲ. ಜೊತೆಗೆ "ಮೈಶ್ರೀನ" ಎಂಬ ಉಪನಾಮದೊಂದಿಗೆ ಹೆಚ್ಚಿನ ವ್ಯಾಮೋಹ ಬೆಳೆದುಬಿಟ್ಟಿತ್ತು!)

***೨. ನೀವು ನಿಮ್ಮ ವೃತ್ತಿ ಜೀವನದಲ್ಲಿ ಪ್ರಾಧ್ಯಾಪಕರಾಗಿ, ತಾಂತ್ರಿಕ ತಜ್ಞರಾಗಿ ಬಹುದೊಡ್ಡ ಜವಾಬ್ದಾರಿಗಳನ್ನು ನಿರ್ವಹಿಸಿದವರು. ಕನ್ನಡ ಸಾಹಿತ್ಯದಲ್ಲಿ ಹನ್ನೆರಡಕ್ಕಿಂತ ಹೆಚ್ಚು ಕೃತಿಗಳನ್ನು ರಚಿಸಿದ್ದೀರಿ, ಆರು ಪ್ರಮುಖ ಗ್ರಂಥಗಳನ್ನು ಸಂಪಾದಿಸಿದ್ದೀರಿ. ಈ ಸವಾಲಿನ 'ಟ್ರಾನ್ಸಿಷನ್' ಹೇಗೆ ಸಾಧ್ಯವಾಯಿತು?***

ಹೈಸ್ಕೂಲಿನಲ್ಲಿದ್ದಾಗ, ಒಮ್ಮೆ ಚರ್ಚಾಸ್ಪರ್ಧೆಯೊಂದಕ್ಕೆ ಹೋಗಿದ್ದೆ, ಅಲ್ಲಿ ಅಧ್ಯಕ್ಷತೆ ವಹಿಸಿದ್ದ ಮಂಗಳೂರಿನಿಂದ ಬಂದಿದ್ದ ಒಬ್ಬ ವಿದ್ವಾಂಸರು (ಹೆಸರು ಮರೆತಿದ್ದರೂ ಅವರ ಮುಖ ಮತ್ತು ಅವರು ಕೊಟ್ಟ ಸಂದೇಶ ಮರೆತಿಲ್ಲ) ತಮ್ಮ ಭಾಷಣದಲ್ಲಿ ಸಾಹಿತ್ಯ, ಸಂಗೀತ, ಸಂಸ್ಕೃತಿ, ವೇದಾಂತ ಮುಂತಾದವು ಹೇಗೆ ಜೀವನದಲ್ಲಿ ಮುಖ್ಯ ಎಂದು ತಿಳಿಸಿದ್ದರು. ಹೊಟ್ಟೆಪಾಡಿಗಾಗಿ ಏನು ಮಾಡಿದರೂ ಮನಸ್ಸಿನ ಆರೋಗ್ಯಕ್ಕೆ ಮತ್ತು ಸಂತೋಷಕ್ಕೆ ಅವುಗಳಲ್ಲಿ ಒಂದೆರಡನ್ನಾದರೋ ಬೆಳೆಸಿಕೊಂಡರೆ ಜೀವನ ಅರ್ಥಪೂರ್ಣವಾಗಿರುತ್ತದೆ ಎಂಬ ಅವರ ಸಂದೇಶ ನನಗೆ ವೇದವಾಕ್ಯವಾಯಿತು. ನನ್ನ ಮನೆಯ ವಾತಾವರಣದಲ್ಲಿ ಕರ್ನಾಟಕ ಸಂಗೀತ ತುಂಬಿತ್ತು, ಅದು ತಾನೇತಾನಾಗಿ ನನ್ನ ಜೀವನದ ಅಂಗವಾಯಿತು. ಹಾಸನ, ಬೆಂಗಳೂರು ಮತ್ತು ಮುಂಬೈನಲ್ಲಿ ನನಗಿದ್ದ ಸ್ನೇಹಿತರಲ್ಲಿ ಹೆಚ್ಚಿನವರು ಸಾಹಿತ್ಯಾಭಿಮಾನಿಗಳೇ. ಹೀಗಾಗಿ ನಾನು ಒಂದಿಷ್ಟು ಸಾಹಿತ್ಯವನ್ನು ಓದುವ ಹವ್ಯಾಸವನ್ನು ಬೆಳೆಸಿಕೊಂಡೆ. ಮೊದಮೊದಲು ಕಾರಂತರನ್ನೋದುವುದು ಕಷ್ಟವೆನಿಸುತ್ತಿತ್ತು, ಆದರೆ ತಾಳ್ಮೆಯಿಂದ ಓದಿಕೊಳ್ಳುತ್ತಾ ಹೋದೆ, ಅವರು ನಿಧಾನವಾಗಿಯಾದರೂ ನನಗೆ ತುಂಬಾ ಇಷ್ಟವಾದ ಕಾದಂಬರಿಕಾರರಾದರು. ಅಮೆರಿಕದಲ್ಲಿ ಹುಟ್ಟಿದ್ದಿದ್ದರೆ ನಿರ್ಭಯವಾಗಿ ಲಿಟರೇಚರ್, ಫಿಲಾಸಫಿ ಓದುತ್ತಿದ್ದೆನೇನೋ, ಆದರೆ ಭಾರತದ ಸಂದರ್ಭದಲ್ಲಿ ಅದು ಅಸಾಧ್ಯವಾಗಿತ್ತು. ಹಾಗಾಗಿ ಇಂಜಿನಿಯರಿಂಗ್ ಓದಿದೆ, ಅದರಲ್ಲೇ ಡಾಕ್ಟ್ರೇಟ್ ಸಹ ಪಡೆದೆನಾದರೂ ಒಂದು ಕವನವನ್ನು ಓದಿದಾಗ/ಬರೆದಾಗ ಆಗುವ ಸಂತೋಷ ಒಂದು ತಾಂತ್ರಿಕ ಪ್ರಬಂಧವನ್ನು ಬರೆದಾಗ ನನಗೆ ಆಗುವುದಿಲ್ಲ ಎಂಬುದನ್ನು ಮನಗಾಣಲು ಹೆಚ್ಚುಕಾಲ ಬೇಕಾಗಲಿಲ್ಲ!ಸ್ವಂತ ಸಂತೋಷಕ್ಕಾಗಿ ತಾನೇ ತಾನಾಗಿ ಒಂದಿಷ್ಟು ಬರೆಯುವ ಸಾಹಸಕ್ಕೆ ಕೈಹಾಕಿದೆ. ಹತ್ತಿರದ ಹಿರಿಯ ಗೆಳೆಯರಾಗಿದ್ದ (ದಿವಂಗತ) ಹರಿಹರೇಶ್ವರರ ಪ್ರೋತ್ಸಾಹವೂ ದೊರಕಿತು. ನನ್ನ ಉದ್ಯೋಗ ಮತ್ತು ನನ್ನ ಹವ್ಯಾಸಗಳಲ್ಲಿ

**(ಮುಂದಿನ ಪುಟಕ್ಕೆ...)**



Copyright © KCO – Brindavana

ಬೃಂದಾವನ ವಾಣಿ
ಬೃಂದಾವನ ಕನ್ನಡ ಕೂಟ, ನ್ಯೂಜರ್ಸಿಯ ದ್ವೈಮಾಸಿಕ ಪತ್ರಿಕೆ




ಯಾವ ವಿರೋಧವನ್ನೂ ಮನಗಂಡಿಲ್ಲ, ಏಕೆಂದರೆ, ನನ್ನ ವೃತ್ತಿಗೆ ಸಂಬಂಧಿಸಿದ ಕೆಲಸವನ್ನು ನಮ್ಮ ಬಿಲ್ಲುಗಳನ್ನು ಪಾವತಿ ಮಾಡಲು ಅಗತ್ಯವಾಗಿ ಮಾಡಬೇಕಾದ ಕರ್ತವ್ಯವೆಂದು ಅದಕ್ಕೆ ಯಾವ ಚ್ಯುತಿಯೂ ಬಾರದಂತೆ ನಿರ್ವಹಿಸುವ ದಕ್ಷತೆಯನ್ನು ಬೆಳೆಸಿಕೊಂಡೆ. ಟ್ರ್ಯಾನ್ಸಿಶನ್ ಎಂಬುದು ನನ್ನ ದೃಷ್ಟಿಯಲ್ಲಿ ಒಂದೇ ಬಾರಿ ಮಾಡಿಕೊಳ್ಳುವಂಥಾ ಪ್ರಕ್ರಿಯೆಯಲ್ಲ. ಕಛೇರಿಯನ್ನು ಬಿಟ್ಟು ಮನೆಗೆ ಬಂದಾಗ, ಮನೆಯನ್ನು ಬಿಟ್ಟು ಕಛೇರಿಗೆ ಹಿಂದಿರುಗಿದಾಗ ನಡೆಯುತ್ತಲೇ ಇರಬೇಕಾದ ಪ್ರಕ್ರಿಯೆ. ಈ ರೀತಿ ಸ್ವಿಚ್ ಆನ್ ಅಥವಾ ಆಫ್ ಮಾಡಿದಷ್ಟು ಸುಲಭವಲ್ಲ ಈ ಪ್ರಕ್ರಿಯೆ, ಆದರೂ ಬೆಳೆಸಿಕೊಳ್ಳಲು ಅಸಾಧ್ಯವೇನಲ್ಲ. ನನ್ನ ವೃತ್ತಿಗೆ ವಂಚನೆಯನ್ನು ಎಂದೂ ಮಾಡಿಲ್ಲ, ನನ್ನ ಕೆಲಸವನ್ನೂ ಮೇಲಿನವರು ಯಾವಾಗಲೂ ಮೆಚ್ಚಿಕೊಂಡೇ ಇದ್ದಾರೆ, ಆದರೆ, ನನ್ನ ಸ್ವಂತ ಸಮಯವನ್ನು ದಕ್ಷತೆಯಿಂದ, ವಿಚಕ್ಷಣೆಯಿಂದ ವಿತರಣೆ ಮಾಡುತ್ತ ಸಾಹಿತ್ಯದ ಹವ್ಯಾಸಗಳಲ್ಲಿ ಒಂದಿಷ್ಟು ಪ್ರಗತಿಯನ್ನೂ ಸಾಧಿಸಿದ್ದೇನೆ (ಎಂದು ನಾನು ತಿಳಿದಿದ್ದೇನೆ!). ಕೆಲಸದ ಮೇಲೆ ಪ್ರಯಾಣ ಮಾಡುವಾಗ ಒಂದೋ ಎರಡೋ ಪುಸ್ತಕಗಳನ್ನು ಜೊತೆಯಲ್ಲಿ ಒಯ್ದು ವಿಮಾನದಲ್ಲಿ, ಹೊಟೆಲ್ಲಿನಲ್ಲಿ ಬಿಡುವಿನ ವೇಳೆಯಲ್ಲಿ ಓದುವುದು ನನ್ನ ಹವ್ಯಾಸವಾಯಿತು. ವಾರಗಟ್ಟಲೆ ಪ್ರಯಾಣಮಾಡುವ ಸಂದರ್ಭದಲ್ಲಿ, ಬರೆಯುವುದು, ಬರೆದಿದ್ದನ್ನು ತಿದ್ದುವುದು, ಪುಸ್ತಕಗಳ ಎಡಿಟಿಂಗ್ ಮಾಡುವುದೂ ಮುಂತಾಗಿ ಸಮಯವನ್ನು ಸದುಪಯೋಗಪಡಿಸಿಕೊಂಡಿದ್ದರಿಂದ ಈ ಮೊದಲು ಹೇಳಿದಂತೆ ಚಿಂತನಾಲಹರಿಗಳನ್ನು ಉದ್ಯೋಗ ಮತ್ತು ಬರವಣಿಗೆಗಳ ನಡುವೆ ಅದಲಾಬದಲಿ ಮಾಡಿಕೊಳ್ಳುವುದು ಸಾಧ್ಯವಾಗಿದೆ. ವಿಮಾನಯಾನದ ಸಂದರ್ಭದಲ್ಲಿ ಭೂಮಿಯಿಂದ ೩೦,೦೦೦ ಅಡಿ ಎತ್ತರದಲ್ಲಿ ನಾನು ಹಲವು ಕವಿತೆಗಳನ್ನು ಬರೆದಿದ್ದೇನೆ, ಕೆಲವನ್ನು ಅನುವಾದಿಸಿದ್ದೇನೆ!

***೩. 'ಮೀನಿನ ಹೆಜ್ಜೆ', 'ನೇಣು', 1 am Brahman' ಮುಂತಾದ ಅಮೂಲ್ಯ ನಾಟಕಗಳನ್ನು ಕನ್ನಡ ಮತ್ತು ಇಂಗ್ಲೀಷ್ ಸಾರಸ್ವತ ಲೋಕಕ್ಕೆ ಕೊಟ್ಟವರು ನೀವು. ರಂಗಭೂಮಿಯೊಡನೆ ನಿಮಗಿರುವ ಬಂಧವನ್ನು ನಮ್ಮೊಡನೆ ಹಂಚಿಕೊಳ್ಳುವಿರಾ?***




ಶಾಲಾ ದಿನಗಳಿಂದಲೇ ನಾಟಕಗಳ ಹವ್ಯಾಸ ಇದ್ದೇಯಿತ್ತು, ಆದರೆ, ಈ ದೇಶಕ್ಕೆ ಬಂದು ಕನ್ನಡ ಸಂಘಗಳ ಚಟುವಟಿಕೆಗಳಲ್ಲಿ ಭಾಗವಹಿಸಲು ಶುರುಮಾಡಿದಮೇಲೆ, ನನ್ನ ಅನುಭವಕ್ಕೆ ಬಂದಿದ್ದು ಏನೆಂದರೆ, ಒಮ್ಮೆ ನಾವು ಭಾಗವಹಿಸಿ ಆನಂದಿಸುತ್ತಿದ್ದ ಕನ್ನಡ ನಾಟಕಗಳು (ಅದು ಗುಂಡಣ್ಣ ಬರೆದ ಪ್ರಹಸನಗಳೇ ಆಗಲೀ, ದಾಶರಥಿ ದೀಕ್ಷಿತ್ ಅಥವಾ, ಪರ್ವತವಾಣಿ ಮತ್ತು ಕೈಲಾಸಂ ಸಹ) ಇಲ್ಲಿನ ಸಂದರ್ಭಕ್ಕೆ ಸಮಂಜಸವಾಗಲಾರವು ಎಂಬುದು. ಕೆಂಪು ಸೀರೆಯುಟ್ಟ ವಿತಂತುವಿನಂಥಾ ಪಾತ್ರಗಳಾಗಲೀ, ಪ್ರತಿಯೊಂದು ನಾಟಕದಲ್ಲೂ ಬರುತ್ತಿದ್ದ ಅರ್ಧಂಬರ್ಧ ಕನ್ನಡ ತಮಿಳಾಡುವ ಅಡುಗೇ ಭಟ್ಟನಾಗಲೀ, ಅಥವಾ ಕಸಗುಡಿಸುವ ಬೋರ, ಮನೆ ಕೆಲಸದ ದೇವೀರಿ ಮುಂತಾದ ಪಾತ್ರಗಳು ಇಲ್ಲಿ ಮುದಕೊಡಲಾರವು ಅನ್ನಿಸಿತು. ಒಂದು ಕಾಲಕ್ಕೆ ಅಂಥ ಪಾತ್ರಗಳ ನಾಟಕಗಳೇ ಹೆಚ್ಚಾಗಿದ್ದವು. ಆದರೆ ನಮ್ಮ ಸಂಘಗಳ ಸದಸ್ಯರು ತುಂಬಾ ಗಂಭೀರ ನಾಟಕಗಳನ್ನು ನೋಡಿ ಅರ್ಥಮಾಡಿಕೊಂಡು ಮೆಚ್ಚುವ ಜನರೂ ಅಲ್ಲ. ಹಲವಾರು ಕಾರ್ಯಕ್ರಮಗಳ ನಡುವೆ, ನಾಟಕವೂ ಒಂದು. ಇವುಗಳನ್ನೆಲ್ಲ ಗಮನದಲ್ಲಿಟ್ಟುಕೊಂಡು, ನಾಟಕಗಳನ್ನು ನಾನೇ ಬರೆಯಲು ಯತ್ನಿಸಿದೆ. ಹೀಗೆ ಬರೆದ ನಾಟಕಗಳಲ್ಲಿ "ಮರಳಿ ಯತ್ನವ ಮಾಡು" ಎಂಬ ಒಂದು ರೇಡಿಯೋ ನಾಟಕ ನನ್ನ ಮೊದಲ ಯತ್ನ. ನ್ಯೂಯಾರ್ಕ್ ಕನ್ನಡ ಕೂಟ ಈ ನಾಟಕವನ್ನು ಕೊಲಂಬಿಯಾ ವಿಶ್ವವಿದ್ಯಾಲಯದ ಭಾರತೀಯ ಬಾನುಲಿ ಕಾರ್ಯಕ್ರಮದ ಅಂಗವಾಗಿ ಪ್ರಸ್ತುತ ಗೊಳಿಸಿದ್ದು ೧೯೭೭-೭೮ರಲ್ಲಿ! ಅದರ ನಂತರ ಮೇರೀಲ್ಯಾಂಡಿಗೆ ಬಂದಮೇಲೆ ಹಲವಾರು ನಾಟಕಗಳನ್ನು ಬರೆದು ನಾಟಕದ ಖಯಾಲಿ ಇಲ್ಲಿನ ಪ್ರೇಕ್ಷಕರಲ್ಲಿ ಬೆಳೆಯುವಂತೆ ಮಾಡಿದೆ. ಗುಂಪು ಕಟ್ಟಿಕೊಂಡು ಅನೇಕ ನಗರಗಳಲ್ಲಿ ನನ್ನ ನಾಟಕಗಳನ್ನು ಪ್ರದರ್ಶಿಸುವ ಅವಕಾಶ ದೊರಕಿತು. ನಾಟಕವನ್ನು ರಂಗದ ಮೇಲೆ ತರುವುದು, ಅಭಿನಯಿಸಿ ಭೇಶ್ ಅನ್ನಿಸಿಕೊಳ್ಳುವುದು ಒಂದೆರಡು ದಿನಗಳ ಸುಖವಾದರೆ, ನಾಟಕಗಳನ್ನು ಅಭ್ಯಾಸಮಾಡುವಾಗಿನ ಸಂದರ್ಭಗಳು ಅಲ್ಲಿ ನಡೆಯುವ ತಮಾಷೆಗಳು, ಅಲ್ಲಿ ಕಾಣಸಿಗುವ ಮೈತ್ರಿ, ಕಿತಾಪತಿ ಇವೆಲ್ಲ ಹಲವಾರು ತಿಂಗಳ ಸಂತೋಷಕೂಟಗಳು, ಅಳಿಸಲಾಗದ ನೆನಪುಗಳಾಗಿ ಉಳಿದುಕೊಳ್ಳುತ್ತವೆ! ನಾಟಕದ ಕಾರಣದಿಂದ ಹಲವಾರು ಮಿತ್ರರು, ಹಲವು ಕನ್ನಡ ಕೂಟಗಳ ಸಂಬಂಧ, ಹಲವು ಹತ್ತು ಕಲಾವಿದರ ಸಂಪರ್ಕ, ಇವೆಲ್ಲ ಅಳತೆಗೂ ಮೀರಿದ ಸಂತೋಷಗಳು. ನಾನು ಬರೆದು ಆಡಿಸಿದ ನಾಟಕಗಳು ಅಮೆರಿಕದಲ್ಲಿ ಮತ್ತು ಭಾರತದಲ್ಲಿ ಹಲವು ಪ್ರದರ್ಶನಗಳನ್ನು ಕಂಡಿವೆ. ಶಂಕರ ಶೇಷ್ ಅವರ ಹಿಂದಿ ನಾಟಕ "ಅರೆ ಮಾಯಾವಿ ಸರೋವರ್" ಅನ್ನು ಕನ್ನಡಕ್ಕೆ ರೂಪಾಂತರಿಸಿ ಪ್ರದರ್ಶಿಸಿದಾಗ ಅತ್ಯಂತ ಹೆಚ್ಚಿನ ಖುಶಿ ಸಿಕ್ಕಿತು. ಆ ನಾಟಕವನ್ನು ಭಾರತದ ಕಲಾವಿದರು ಮೈಸೂರು, ಬೆಂಗಳೂರು ಮತ್ತು ಮುಂಬೈನಲ್ಲಿ ಸಹ ಪ್ರದರ್ಶಿಸಿ ಮೆಚ್ಚುಗೆ ಪಡೆದರು. "ಮೀನಿನ ಹೆಜ್ಜೆ" ಮತ್ತು "ನೇಣು" ನಾಟಕಗಳು ಹಲವು ಪ್ರದರ್ಶನಗಳನ್ನು ಇಲ್ಲಿಯೂ ಬೆಂಗಳೂರಿನಲ್ಲೂ ಕಂಡಿವೆ. "I am Brahman" ನಾನು ಇತ್ತೀಚೆಗೆ ಬರೆದ ನಾಟಕ ಹಾಗೂ ಇಂಗ್ಲಿಶ್ ಭಾಷೆಯಲ್ಲಿ ಬರೆದ ಮೊದಲ ನಾಟಕ. ಶಂಕರರ ಅದ್ವೈತ ವೇದಾಂತದ ಬಗ್ಗೆ ಮತ್ತು ಭಾರತೀಯ ಸನಾತನ ಧರ್ಮದ ಬಗ್ಗೆ ಅಮೆರಿಕದಲ್ಲಿ ಹುಟ್ಟಿ ಬೆಳೆದ ಮಕ್ಕಳಲ್ಲಿ ಕುತೂಹಲ ಹುಟ್ಟಿಸುವ ಸಲುವಾಗಿ ಬರೆದದ್ದು. ಅದಿನ್ನೂ ರಂಗದ ಮೇಲೆ ಬರಬೇಕಾಗಿದೆ.

**(೧೭ನೇ ಪುಟಕ್ಕೆ...)**


Copyright © KCO – Brindavana

ಬೃಂದಾವನ ವಾಣಿ
ಬೃಂದಾವನ ಕನ್ನಡ ಕೂಟ, ನ್ಯೂಜೆರ್ಸಿಯ ದ್ವೈಮಾಸಿಕ ಪತ್ರಿಕೆ

# ಹುಚ್ಚು ಹೃದಯ



ಕಥಾ ಸಮಯ

ಅನಿಲ್ ಭಾರದ್ವಾಜ್

*"ಗಂಡು ನೋಡಲು ಹೋಗಬೇಕು, ದಯವಿಟ್ಟು ಬೇಗೆದ್ದು ತಿಂಡಿ ತಿಂದು ರೆಡಿಯಾಗು ಪುಟಾಣಿ," ಪುಸಲಾಯಿದಳು ಅಮ್ಮ. ಪ್ರತಿಯೊಮ್ಮೆ ಗಂಡು ನೋಡಲು ಹೋಗುವ ದಿನ ಮನೆಯಲ್ಲಿ ಒಂದು ಸಣ್ಣ ಸಮರವೇ ಜರಗುತ್ತಿತ್ತು.*

**ಬೆಂ**ಗಳೂರಿನಲ್ಲಿ ಮೇ ತಿಂಗಳ ಒಂದು ಭಾನುವಾರದ ಬೆಳಗಿನ ಹೊತ್ತು. ತಂಪಾದ ಗಾಳಿ ಮಂಚದ ಪಕ್ಕದ ಕಿಟಕಿಯ ಸಂದಿಯಿಂದ ಬೀಸುತ್ತಿತ್ತು. ಹೊರಗಿನಿಂದ ಪಾರಿಜಾತ ಗಿಡದ ಹೂವಿನ ಕಂಪು, ಮನೆಯೊಳಗಿನಿಂದ ಚಟ್ನಿಗೆ ಮಾಡಿದ್ದ ಒಗ್ಗರಣೆಯ ಇಂಗಿನ ವಾಸನೆ ಎಚ್ಚರಿಸಲು ಯತ್ನಿಸುವಂತಿತ್ತು.ಕಂಬಳಿ ಸರಿಮಾಡಿಕೊಂಡು,ಮೊಗ್ಗಲು ತಿರುಗಿಸಿ ಮಲಗಿದಳು. "ಒಂಭತ್ತು ಘಂಟೆ ಆಯಿತು. ಹಂಡೆಯಲ್ಲಿ ನೀರು ಚೆನ್ನಾಗಿ ಕಾದಿದೆ, ಎಣ್ಣೆ ನೀರು ಸ್ನಾನ ಮಾಡೇಳು ಗುಂಡಿ," ಮುದ್ದಾಗಿ ಏಳಿಸಲು ಪ್ರಯತ್ನಿಸಿದಳು ಅವಳ ತಾಯಿ.

"ಏನಿಲ್ಲ.ಇನ್ನು ಎಂಟು ಘಂಟೆ. ತರಕಾರಿಯವನು ಈಗ ಕೂಗುತ್ತಿದ್ದಾನೆ," ಗೊಣಗಿ ಮುಸುಕು ಹಾಕಿ ಮಲಗಿದಳು ಅಭಿಲಾಷ.

"ಹುರಳಿಕಾಯಿ, ಬದನೇಕಾಯಿ, ಬೆಂಡೆಕಾಯಿ..." ಎಂದು ತರಕಾರಿಯವನು ಕೂಗುತ್ತಿದ್ದರೆ, "ಕನಕಾಂಬ್ರ, ಮಲ್ಗೆ, ಶಾವಂತ್ಗೆ, ಜಾಜಿ ಊವಾ...," ಪ್ರತ್ಯುತ್ತರಿಸುತ್ತಿದ್ದಳು ಹೂ ಮಾರುವ ಮುದುಕಿ. ಒಬ್ಬರ ಹಿಂದೊಬ್ಬರು ಬರುತ್ತಿದ್ದ ಹೂವು, ಹಣ್ಣು, ತರಕಾರಿ, ಎಳನೀರು ಮುಂತಾದ್ದನ್ನು ಮಾರುವವರ ಗಾಡಿಗಳು ದೈನಂದಿನ ಮೆರವಣಿಗೆಯಂತಿತ್ತು. ಮನೆ ಮುಂದೆ ರಂಗೋಲಿ ಹಾಕುತ್ತಿದ್ದ, ಬಂದ ದ್ರವ್ಯಗಳನ್ನು ಖರೀದಿಸುತ್ತಿದ್ದ ಹೆಂಗಸರು ಅಲ್ಲೇ ನಿಂತು ತಮ್ಮ ನೆರೆಹೊರೆಯ ಹೆಂಗಸರೊಂದಿಗೆ ತುಸುಹೊತ್ತು ಹರಟೆ ಹೊಡೆದು ತಮ್ಮ ದಿನಗಳನ್ನು ಸ್ವಾಗತಿಸುತ್ತಿದ್ದರು. ಭಾನುವಾರವಂತೂ, ವಿಶಿಷ್ಟ ಅಡುಗೆ ಮಾಡುವುದರಿಂದ, ಎಲ್ಲ ರೀತಿಯ ಭೋಜನಗಳ ಸುವಾಸನೆ ಬರುತ್ತಿತ್ತು. ಕಮಲಮ್ಮನವರ ಪೂರಿ-ಸಾಗೂ ಪ್ರಸಿದ್ಧವಾದರೆ, ಭಾಗೀರಥಿಬಾಯಿಯವರ ಇಡ್ಲಿ-ಗಸಗಸೆ ಪಾಯಸ, ಗಿರಿಜಮ್ಮನವರ ಈರುಳ್ಳಿ ಉಪ್ಪಿಟ್ಟು, ಸರೋಜಮ್ಮನವರ ಶ್ಯಾವಿಗೆ ಭಾತ್ ಪುದಿನ ಚಟ್ನಿ, ವನಜಾಬಾಯಿಯವರ ಪ್ರಬಲವಾದ ಕಾಫಿ ಮನೆಮಾತಾಗಿತ್ತು. ಇದಲ್ಲದೆ ಕೆಲವರು ಅಡುಗೆ ವಿನಿಮಯಿಸಿ ಅಥವಾ ಹಂಚಿಕೊಂಡು ತಿನ್ನುತ್ತಿದ್ದರು. ಹೀಗೆ ಭಾನುವಾರದ ಸಡಗರ ಒಂದು ಕಿರಿಹಬ್ಬದಂತಿರುತ್ತಿತ್ತು.

ಅಭಿಲಾಷ ತಂತ್ರಜ್ಞಾನದಲ್ಲಿ ಪದವೀಧರಳಾಗಿ ಕಾಲೇಜು ಇನ್ನೇನು ಮುಗಿಸುತ್ತಿದ್ದ ಹುಡುಗಿ. ಹತ್ತಾರು ಕನಸುಗಳು, ಆ ಕನಸುಗಳಿಂದಲೇ ಕಳವಳಿಸುತ್ತಿದ್ದ ಚಂಚಲ ಮನಸ್ಸು. ಸಹಪಾಠಿಗಳಿಂದ ದೂರವಾಗುವ ಸಂಕಟ, ಅನಿಶ್ಚಿತವಾದ ಭವಿಷ್ಯದ ಬಗೆಗಿನ ಚಿಂತೆ ಕೆಲವೊಮ್ಮೆ ಅವಳನ್ನು ಕದಲಿಸುತ್ತಿತ್ತು. ಸಂಪ್ರದಾಯಸ್ಥರ ಮನೆಯಿಂದ ಬಂದ ಈ ಹುಡುಗಿ ಮನೆಯಲ್ಲಿನ ಆಚಾರ-ವಿಚಾರಗಳನ್ನು ಪ್ರತಿಭಟಿಸುತ್ತಲೇ ಬೆಳೆದಳು. ಅವಳದ್ದು ಬ್ರಾಹ್ಮಣರ ಬೀದಿಯಲ್ಲಿದ್ದ ಚೊಕ್ಕವಾದೊಂದು ಕುಟುಂಬ - ಅಪ್ಪ -ಅಮ್ಮ, ಅಜ್ಜಿ-ತಾತ, ಒಬ್ಬ ಅಣ್ಣ ಮತ್ತು ತಂಗಿ.

"ಗಂಡು ನೋಡಲು ಹೋಗಬೇಕು, ದಯವಿಟ್ಟು ಬೇಗೆದ್ದು ತಿಂಡಿ ತಿಂದು ರೆಡಿಯಾಗು ಪುಟಾಣಿ," ಪುಸಲಾಯಿದಳು ಅಮ್ಮ. ಪ್ರತಿಯೊಮ್ಮೆ ಗಂಡು ನೋಡಲು ಹೋಗುವ ದಿನ ಮನೆಯಲ್ಲಿ ಒಂದು ಸಣ್ಣ ಸಮರವೇ ಜರಗುತ್ತಿತ್ತು. "ನಾನು ಯಾವ ಗಂಡೂ ನೋಡಲು ಬರೋಲ್ಲ. ಹೌದು. ಹೆಣ್ಣಿನವರೇ ಏಕೆ ಯಾವಾಗಲೂ ಪ್ರದರ್ಶನ ಮಾಡಲು ಹೋಗಬೇಕು. ಅವರೇ ಇಷ್ಟ ಇದ್ದರೆ ಬರಲಿ," ಗುಡುಗಿದಳು ಅಭಿಲಾಷ. "ಸುಮ್ಮನೆ ನನ್ನ ಸತಾಯಿಸಬೇಡ. ವರ್ಷಾನುಗಟ್ಟಲೆಯಿಂದ ಬಂದ ರೂಢಿ ನಿನಗೋಸ್ಕರ ಯಾರೂ ಬದಲಾಯಿಸುವುದಿಲ್ಲ. ಪ್ರತಿ ಸರಿ ನಿನ್ನ ಜೊತೆ ವಾದ ಮಾಡಕ್ಕೆ ಆಗೋದಿಲ್ಲ, ಏಳಮ್ಮ," ಬೇಡಿಕೊಂಡಳು ಅಮ್ಮ.

ಕೊನೆಗೂ ಎದ್ದು ಎಣ್ಣೆಸ್ನಾನ ಮಾಡಿ, ಇಡ್ಲಿ-ಚಟ್ನಿ ತಿಂದು ಅಭಿಲಾಷ ತಯಾರಾಗುತ್ತಿದ್ದಳು."ನಾನು ಸೀರೆ-ಗೀರೆ ಉಟ್ಕೊಳೋಲ್ಲ,ಈ ಚೂಡಿದಾರ್ ಹಾಕ್ಕೊಂಡು ಬರ್ತೀನಿ," ಎಂದಳು ಅಭಿಲಾಷ .

"ತಿರ್ಗಾ ತೆಗೆದಳು ಇವಳ ಕಥೆ. ಅವರು ಆಚಾರಸ್ಥರ ಮನೆಯವರು. ಕಷ್ಟಪಟ್ಟು ಮೂರು-ನಾಲ್ಕು ಕಡೆ ಹುಡುಕಿದ ಮೇಲೆ, ಕೊನೆಗೂ ನಿನ್ನ ಜಾತಕದ ಮೂಲಾ ನಕ್ಷತ್ರಕ್ಕೆ ಒಪ್ಪುವ, ಮಾವ ಇಲ್ಲದಿರೋ ಒಂದು ಮನೆ ಸಿಕ್ಕಿದೆ. ಹುಡುಗ ಇಸ್ರೋದಲ್ಲಿ ಕೆಲಸ ಮಾಡ್ತಾನಂತೆ, ಲಕ್ಷಣವಾಗಿ ಇದಾನೆ, ಎರಡು ಹೊತ್ತು ಸಂಧ್ಯಾವಂದನೆ ಮಾಡ್ತಾನಂತೆ. ಮೂಲೆ ಮನೆ ಉಳುಕುಮಂತ್ರದ ಯಮುನಾಬಾಯಿಗೆ ದೂರದ ಸಂಬಂಧಿ ಅಂತೆ," ವಿವರಿಸಿದಳು ತಾಯಿ. "ಈ ಮೂಲಾ, ಜ್ಯೇಷ್ಠ, ಆಶ್ಲೇಷ ಇನ್ನೆಲ್ಲಾ ನಕ್ಷತ್ರ ಬರೀ ಹೆಣ್ಣುಮಕ್ಕಳಿಗೆ ಮಾತ್ರ ಯಾಕೆ ನೋಡ್ಬೇಕು? ಗಂಡಿನ ನಕ್ಷತ್ರ ಏನಿದ್ರೂ ಸರಿನಾ? ಅವಳ ಅಪ್ಪ-ಅಮ್ಮ ಮತ್ತು ಸಂಸಾರದವರ ಜೀವಕ್ಕೆ ಏನೂ ಬೆಲೆ ಇಲ್ವಾ?" ಒಂದರ ಹಿಂದೊಂದು ಪ್ರಶ್ನೆ ಅಭಿಲಾಷ ಎಸೆದಳು."ನಾನು ಉತ್ತರ ಕೊಡಕ್ಕೆ ಆಗ್ದಿರೋ ಪ್ರಶ್ನೆಗಳ್ನ ಕೇಳಿ, ನನ್ನ ಪ್ರಾಣ ತಿನ್ನಬೇಡ. ಇವಳ ಈ ಮೂಲಾ ನಕ್ಷತ್ರ ನನ್ನ ನೆಮ್ಮದಿ ಹಾಳುಮಾಡೋ ಒಂದು ಮೂಲ ಆಗೋಗಿದೆ. ಇವಳ ಮದುವೆ ಬೇಗ ಆದ್ರೆ ಮಂತ್ರಾಲಯದಲ್ಲಿ ಉರುಳುಸೇವೆ ಮಾಡ್ತೀನಿ," ಪರಿತಪಿಸಿದಳು ಅಮ್ಮ.

ಅಭಿಲಾಷ ತೆಳ್ಳಗೆ ಬೆಳ್ಳಗೆ ಇದ್ದ ಸುಂದರವಾದ ಹುಡುಗಿ. ಸೊಂಟಕ್ಕಿಂತ ಕೆಳಗಿದ್ದ ಅವಳ ದುಂಡಾದ ಕಪ್ಪು ಜಡೆ, ಅವಳು ಸೀರೆಯುಟ್ಟರೆ ಬಹಳ ಮೆರಗು ನೀಡುತ್ತಿತ್ತು. "ನನ್ನ ಮೊಮ್ಮಗಳನ್ನು ಯಾರಾದರೂ ಕಣ್ಣು ಮುಚ್ಚಿ ಮದುವೆ ಮಾಡಿಕೊಂಡು ಹೋಗ್ತಾರೆ. ಪುಣ್ಯ ಮಾಡಿರಬೇಕು ಇಂತ ದಂತದ ಬೊಂಬೆನಾ ಮದುವೆ ಆಗೋದಕ್ಕೆ," ಗರ್ವಿಸುತ್ತಿದ್ದರು ಅವಳ ಮುದ್ದಿನ ತಾತ. ಸಾಧಾರಣ ಜರತಾರಿ ಸೀರೆಯುಟ್ಟು, ಗೊಣಗುತ್ತಲೇ ಸ್ವಲ್ಪ ಸಿಂಗಾರ ಮಾಡಿಕೊಂಡು, ಜೋತುಬಿದ್ದ ಹೆಗಲಿನಿಂದ, ದಿನಪತ್ರಿಕೆ ಓದುತ್ತಿದ್ದ ತಾತನ ಪಕ್ಕ ಬಂದು ಸೋಫಾ ಮೇಲೆ ಕುಸಿದಳು."ಬಂಗಾರಿ ಇದು.....


Copyright © KCO – Brindavana

**ಹುಚ್ಚು ಹೃದಯ** (…ಮುಂದುವರೆದುದು)

ಒಂದು ದೃಷ್ಟಿ ಬೊಟ್ಟು ಇಡ್ರಿ ಇದಕ್ಕೆ," ಹಣೆಯ ಮೇಲೆ ಮುತ್ತಿಟ್ಟನು ಅವಳ ತಾತ. "ಸುಮ್ನಿರು ತಾತ. ಮೊದಲೇ ನನಗೆ ತಲೆ ಕೆಟ್ಟಿದೆ. ನೀನ್ ಬೇರೆ…,"ಎಂದಳು ಅಭಿಲಾಷ ಸಿಟ್ಟಿನಿಂದ. "ಆ ಹಾಳಾದ್ದು ಬಿಂದಿ ಇಟ್ಟಿಕೊಂಡಿದ್ದೀಯಲ್ಲೇ! ಅವರು ಧಾರವಾಡದ ಜನ. ಹೋಗಿ ಉದ್ದವಾಗಿ ಶೃಂಗಾರ್ ಕುಂಕುಮದ ತಿಲಕ ಇಟ್ಕೋ," ಅಪ್ಪಣೆ ಮಾಡಿದಳು ತುಳಸಿ ಪೂಜೆ ಮಾಡುತ್ತಿದ್ದ ಆವಳಜ್ಜಿ. ತಕ್ಷಣ ಅಜ್ಜಿಗೆ ಸುಮ್ಮನಿರಲು ಕೈ ಸನ್ನೆ ಮಾಡಿದನು ಹುಡುಗನ ಮನೆಯ ವಿಳಾಸ ಬರೆದುಕೊಳ್ಳುತ್ತಿದ್ದ ಅವಳ ತಂದೆ. "ಶುಭ ಕಾರ್ಯ. ಮೂರು ಜನ ಹೋದ್ರೆ ಕೆಲಸ ಆಗೋಲ್ಲ. ನಾನು ಬರ್ತೀನಿ ತಾಳು," ಅವಸರದಲ್ಲಿ ತುಳಸಿ ಬೃಂದಾವನಕ್ಕೆ ನೀರು ಹಾಕಿ, ನಮಸ್ಕರಿಸಿ ಎದ್ದಳು ಅಜ್ಜಿ.

ಅಪ್ಪ, ಅಮ್ಮ, ಅಜ್ಜಿಯೊಂದಿಗೆ ಅಭಿಲಾಷಳ ಸವಾರಿ ಹೊರಡಲು ನಿಂತಿತ್ತು. "ಸ್ವಲ್ಪ ಹೊತ್ತು ತಡೆಯಿರಿ. ಎಚ್.ಎ.ಎಲ್ ರಂಗನಾಥಾಚಾರ್ ಈ ಕಡೆನೇ ಬರ್ತಿದಾರೆ. ಒಂಟಿ ಬ್ರಾಹ್ಮಣನನ್ನ ನೋಡಿದರೆ ಹೋದ ಕೆಲಸ ದೇವರೇ ಗತಿ," ಅಜ್ಜಿ ಹೇಳಿದಳು. "ನಾನು ಬಸ್ಸಿನಲ್ಲಿ ಈ ಸೀರೆ ಉಟ್ಟಿಕೊಂಡು ಬರಲ್ಲ. ಆಟೋದಲ್ಲಿ ಆದ್ರೆ ಮಾತ್ರ ಬರ್ತೀನಿ," ಘೋಷಿಸಿದಳು ಅಭಿಲಾಷ. "ಆಯ್ತುಮ್ಮಾ ಮಹಾತಾಯಿ, ಆಟೋದಲ್ಲೇ ಹೋಗೋಣ ನಡಿ.," ಸವರಿಸಿದನು ಅಪ್ಪ. ಎಲ್ಲರೂ ಮುಖ್ಯರಸ್ತೆಯ ಮೂಲೆಗೆ ಆಟೋ ಹಿಡಿಯಲು ನಡೆದರು. ಕಾಂತಮ್ಮ ಅವರ ಮನೆ ಮುಂದಿನ ಕಟ್ಟೆ ಮೇಲೆ ಕಾಫಿಯೊಂದಿಗೆ ಆಗಲೇ ಹಾಜರಿದ್ದರು. ಕಾಂತಮ್ಮ ಬೀದಿಯ ಅಧಿಕೃತ ರೇಡಿಯೋ ಎಂಬುವುದು ಬಹಿರಂಗ ರಹಸ್ಯ. ಅವರನ್ನು ನೋಡಿದರೂ ನೋಡದಂತೆಯೇ ಇವರ ಗುಂಪು ಮುನ್ನಡೆಯಿತು. "ಕಾಂತಮ್ಮನ ಕೇಳಿದರೆ ನಾನು ಇದುವರೆಗೆ ಎಷ್ಟು ಗಂಡುಗಳ ನೋಡಲು ಹೋಗಿದ್ದೆ ಎಂದು ಸರಿಯಾಗಿ ಹೇಳುತ್ತಾರೆ," ಮೆಲುನಕ್ಕಳು ಅಭಿಲಾಷ.

"ಜಯನಗರ ಫೋರ್ತ್ ಟಿ ಬ್ಲಾಕ್ ಬರ್ತೀಯಾಪ್ಪಾ?"ಮೂರ್ನಾಲ್ಕು ಆಟೋಗಳನ್ನು ವಿಚಾರಿಸಿದರು ಅಪ್ಪ."ಈ ಆಟೋದವರಿಗೆ ಇರುವಷ್ಟು ಕೊಬ್ಬು ಇನ್ಯಾರಿಗೂ ಇಲ್ಲ.ಇನ್ಯಾರಿಗೂ ಇಲ್ಲ. ಎಲ್ಲಿಗೆ ಕೇಳಿದ್ರು ಬರಲ್ಲಾ ಅನ್ನೋದೇ," ಕೋಪಿಸಿದಳು ಅಭಿಲಾಷ ತಾಯಿ. ಕಡೆಗೂ ಒಬ್ಬ ಆಟೋದವನು ಬರಲೊಪ್ಪಿದ. "ಡಬಲ್ ಮೀಟರ್ ಆಗತ್ತೆ ರೀ. ಅಲ್ಲಿಂದ ಯಾರು ವಾಪಸ್ ಗಿರಾಕಿ ಸಿಗಲ್ಲ," ಪ್ರಸ್ತಾಪಿಸಿದ ಆಟೋ ಚಾಲಕ. "ಹತ್ತು ರೂಪಾಯಿ ಜಾಸ್ತಿ ಕೊಡ್ತೀನಿ ನಡಿ," ಹತ್ತಲು ಸನ್ನೆ ಮಾಡಿದನು ಅಪ್ಪ. ಹಿಂದು-ಮುಂದು ನಾಲ್ಕು ಜನ ಕಷ್ಟಪಟ್ಟು ಅಮುಕಿ ಕುಳಿತರು. ಆಟೋದವನು ವಾಹನವನ್ನು ಬಹಳ ಚೆನ್ನಾಗಿ ಸಿಂಗರಿಸಿದ್ದ. "ನನಗಿಂತ ಈ ಆಟೋ ಅಲಂಕಾರವೇ ಜೋರಾಗಿ ಇದೆ," ಯೋಚಿಸಿದಳು ಅಭಿಲಾಷ. 'ನಲಿಯುತಾ ಹೃದಯ ಹಾಡನು ಹಾಡಿದೆ…' ಹಾಡು ಆಟೋದಲ್ಲಿ ಚಾಲನೆ ಆಗಿತ್ತು. "ರೀ ಬೇರೆ ಹಾಡು ಹಾಕ್ರಿ," ಎಂದಳು ಅಭಿಲಾಷ. "ಏನ್ ಮೇಡಂ. ಇದು ಅಣ್ಣಾವ್ರುದ್ದು ಫೇಮಸ್ ಹಾಡು. ಏನ್ ಚೇಂಜ್ ಮಾಡು ಅಂತೀರಲ್ಲ? ಹೋಗ್ಲಿ ಮಾಡ್ತೀನಿ ಇರಿ." ಆಟೋದವ ಮತ್ತೊಂದು ಹಾಡು ಹಾಕಿದ . 'ಬಾಡಿ ಹೋದ ಬಳ್ಳಿಯಿಂದ ಹೂವು ಅರಳಬಲ್ಲದೇ..' ಹಾಡು ಶುರುವಾಯಿತು. . "ಇದೇ ಇರಲಿ ಬಿಡಿ," ಆಜ್ಞಾಪಿಸಿ ಅಭಿಲಾಷ ಚಾಲಕನ ಬೆನ್ನಿಗಿರುವ ಮೆತ್ತಗಿನ ದಿಂಬಿನ ಹಿಂಭಾಗಕ್ಕೆ ತನ್ನ ಹಣೆ ಒತ್ತಿ ತಲೆತಗ್ಗಿಸಿ ಕೂತಳು. ರಸ್ತೆಯ ಏರಿಳಿತದಿಂದ ಎತ್ತಿಹಾಕುತ್ತಿದ್ದ ಆಟೋದಿಂದ ಎಲ್ಲರೂ ಮೇಲೆ-ಕೆಳಗೆ ನೆಗೆಯುತ್ತಿದ್ದರು. ಅಭಿಲಾಷಳ ಹಣೆಗೆ ಮೆತ್ತೆ ಹೊಡೆಯುತ್ತಿತ್ತೋ ಅಥವಾ ಅವಳೇ ದಿಂಬಿಗೆ ಹಣೆ ಚಚ್ಚಿಕೊಳ್ಳುತ್ತಿದ್ದಳೋ ಗ್ರಹಿಸಲಾಗುತ್ತಿರಲಿಲ್ಲ. "ಒಂದು ಚೂರೂ ಲವಲವಿಕೆಯಿಂದ ಖುಷಿಯಾಗಿರಲ್ಲ ಇವಳು. ತುಂಬಾ ಬೇಜಾರು ಮಾಡ್ತಾಳೆ," ವ್ಯಥೆಪಟ್ಟು ನುಡಿದಳು ಅವಳಮ್ಮ. ಅಭಿಲಾಷ ತಲೆ ಮಾತ್ರ ಮೇಲೆ ಬರಲಿಲ್ಲ.

ಹುಡುಗನ ಮನೆಯ ಸಂದರ್ಶನದ ನಂತರ, ಮತ್ತೊಂದು ಆಟೋದಲ್ಲಿ ವಿಮರ್ಶೆ ಹಾಗೂ ನಿರ್ಣಯ ಭರದಿಂದ ಸಾಗುತ್ತಿತ್ತು. "ಪರವಾಗಿಲ್ಲ ಮನೆ ಚೆನ್ನಾಗಿದೆ. ಅನುಕೂಲಸ್ಥರ ಹಾಗೆ ಕಾಣಿಸ್ತಾರೆ, ಜೋರಾಗಿ ಮದುವೆ ಮಾಡಕ್ಕೆ ಹೇಳಬಹುದು," ವಿಮರ್ಶಿಸಿದನು ಅಪ್ಪ."ಹುಡುಗ ಲಕ್ಷಣವಾಗಿದ್ದಾನೆ. ಆದರೂ ಏನೇ ಹೇಳಿ ಧಾರಾವಾಡದವರು ಸ್ವಲ್ಪ ಜೋರೇ. ಗಂಡಿನ ಅಮ್ಮ ಅಭಿಲಾಷನ್ನ ಹುರಿದು ಮುಕ್ಕಿಬಿಡ್ತಾಳೆ," ತೀರ್ಮಾನಿಸಿದಳು ಅಮ್ಮ. "ಅಷ್ಟು ದೊಡ್ಡ ಮನೆ, ಒಂದು ಸರಿಯಾದ ದೇವರ ಮನೆ ಇಲ್ಲ. ಆ ಹೆಂಗಸು ಅಂಚು-ಸರಗು ಇಲ್ಲದ ನೈಲೆಕ್ಸ್ ಸೀರೆ ಉಟ್ಟಿದ್ದಳು. ನನಗೇನೋ ಸರಿಬರಲಿಲ್ಲ," ತೀರ್ಪಿಟ್ಟಳು ಅಜ್ಜಿ. "ನಿನಗೇನೂ ಅನಿಸಿತು ಹೇಳೆ ಅಭಿಲಾಷ," ಕೊನೆಗೂ ಜ್ಞಾಪಿಸಿಕೊಂಡು ಅಮ್ಮ ಕೇಳಿದಳು. "ಹುಡುಗಾನಾ ಅವನು? ವಯಸ್ಸಾದ ಕಳೆ," ಘೋಷಿಸಿದಳು ಅಭಿಲಾಷ. ಇನ್ನು ಮನೆ ತಲುಪುವವರೆಗೆ ಆಟೋದಲ್ಲಿ ಥಟ್ಟನೆ ನೀರವತೆ ಬಂತು. ಹತ್ತಾರು ಯೋಚನೆಗಳು ಅಭಿಲಾಷ ಮನಸ್ಸಿನಿಂದ ಹೊರಹೊಮ್ಮುತ್ತಿತ್ತು: 'ಕಾಲೇಜಿನಲ್ಲಿ ನನ್ನನ್ನು ಇಷ್ಟಪಟ್ಟಿದ್ದ ಅವಿನಾಶ್ ನನ್ನು ಪ್ರೀತಿಸಿ ಮದುವೆಯಾಗಬೇಕಿತ್ತೇ?','ನಾನೂ ವ್ಯಾಮೋಹಿಸಿದ್ದ ನಮ್ಮ ಮನೆ ರೋಡಿನ ಭರತ್ ನೊಂದಿಗೆ, ಬೇರೆ ಜಾತಿಯವನಾದರೂ, ಪ್ರೇಮ ಬೆಳೆಸಬೇಕಿತ್ತೇ?', "ಹೆಣ್ಣುಮಕ್ಕಳಿಗೆ ಮದುವೆಯೇ ಸಾಧನೆಯ ಪಾರಿತೋಷಕ, ಪರಾಕಾಷ್ಠೆಯೇ?'

ಹೀಗೆ ಒಂದೆರಡು ವರ್ಷ ಇವರ ಮದುವೆಯ ಕವಾಯತು ನಡೆಯಿತು. ಅದೃಷ್ಟವಶಾತ್, ಅಭಿಲಾಷ ತನಗೂ ಮೆಚ್ಚುಗೆಯಾದ, ತಂದೆ-ತಾಯಿ ತೋರಿಸಿದ ಒಬ್ಬ ರೂಪವಂತ ಹುಡುಗನನ್ನು ಮನಸಾರೆ ಮೆಚ್ಚಿ ಮದುವೆಯಾದಳು. ಅವಳಮ್ಮ ನಿಟ್ಟುಸಿರುಬಿಟ್ಟು, ತಂಗಿಯ ಬಗ್ಗೆ ಯೋಚಿಸಲು ಆರಂಭಿಸಿದಳು. ಅಭಿಲಾಷ ಸುಖವಾಗಿ ಸಂಸಾರ ನಡೆಸುತ್ತಿದ್ದಳು. ಆದರೂ ಹಿಂದಿನ ಆಲೋಚನೆಗಳು ಆಗಾಗ್ಗೆ ಮನಸ್ಸಿಗೆ ಬರುತ್ತಿತ್ತು - 'ನಾನು ಪ್ರೀತಿಸಿ ಮದುವೆಯಾಗಿದ್ದರೆ ಇನ್ನೂ ಸಂತೋಷದಿಂದ ಇರುತ್ತಿದ್ದೆನೇ?'ಇತ್ಯಾದಿ.ಹೀಗೊಮ್ಮೆ ಕಲ್ಪನಾ-ಮಗ್ನಳಾಗಿ ಟೀ ಕುಡಿಯುತ್ತಾ ಮೈಮರೆತಿದ್ದಳು. ಅವಳ ಮಕ್ಕಳನ್ನು ಶಾಲೆಯ ಬಸ್ಸಿನಿಂದ ಕರೆತರುವ ಸಮಯದ ಅಲಾರಂ ಘಂಟೆ ಸೆಲ್ ಫೋನಿನಲ್ಲಿ ಬಾರಿಸಿತು. ಎಚ್ಚರಗೊಂಡವಳಂತೆ ಎದ್ದು ಟೀ ಮುಗಿಸಿ ಗಡಿಯಾರದ ಕಡೆ ನೋಡಿದಳು. ರೇಡಿಯೋನಲ್ಲಿ 'ದಿಲ್ ತೋ ಪಾಗಲ್ ಹೇ… ದಿಲ್ ದಿವಾನ ಹೇ… ' ಎಂದು ಹಿಂದಿಯ ಹಾಡು ಬರುತ್ತಿತ್ತು. ನಸುನಗೆಯಿಂದ ನಿಟ್ಟುಸಿರುಬಿಟ್ಟು ಹೊರಹೊರಟಳು ಅಭಿಲಾಷ. ●


Copyright © KCO – Brindavana

ಕಥಾ ಸಮಯ



ಸರಿತಾ ನವಲಿ

# ದಾರಿ ನೂರಿದೆ ನಡೆವಾತಗೆ..

**ಮನುಷ್ಯ ತನ್ನ ಸಾಮರ್ಥ್ಯದಿಂದ, ದೃಢ ನಿಶ್ಚಯದಿಂದ, ಸಾಧನೆಯ ಛಲತೊಟ್ಟಾಗ ಹಲವಾರು ಅವಕಾಶಗಳು ಅವನ ಮುಂದೆ ತೆರೆದಿಟ್ಟುಕೊಳ್ಳುತ್ತವೆ. ನಡೆಯುವ ಶಕ್ತಿ, ಸಾಮರ್ಥ್ಯವಿದ್ದವನಿಗೆ ಒಂದೆರಡೇನು? ನೂರಾರು ದಾರಿಗಳು!**

"ಭಟ್ರೇ, ಈ ಸಲದ ಜಾತ್ರಾ ಮಹೋತ್ಸವದಲ್ಲಿ ಯಾವುದರಲ್ಲೂ ಕಮ್ಮಿ ಆಗಬಾರದು,ಎಲ್ಲವೂ ಅಚ್ಚುಕಟ್ಟಾಗಿ ನಡೀಬೇಕು."ಜಾತ್ರಾ ಸಮಿತಿಯ ಮೇಲ್ವಿಚಾರಕರಾದ ಗೋವಿಂದರಾಯರು ಹೇಳಿದಾಗ, "ಮಾಡೋಣ ಬಿಡಿ ರಾಯ್ರೆ , ಊರ ಜಾತ್ರೆಯಲ್ಲಿ ಪಾಲ್ಗೊಳ್ಳಲು ಸಿಕ್ಕಿರುವ ಈ ಅವಕಾಶದಲ್ಲಿ ನಮ್ಮ ಪ್ರಯತ್ನವನ್ನು ಶ್ರದ್ಧೆಯಿಂದ ಮಾಡುವಾ" ಎನ್ನುತ್ತ ತಮ್ಮ ಕೈಲಿದ್ದ ಪುಟ್ಟ ಪುಸ್ತಕದಲ್ಲಿ ಏನನ್ನೋ ಗುರುತು ಹಾಕಿಕೊಂಡರು ಸುಬ್ಬಾಭಟ್ಟರು. ಒಪ್ಪಿಕೊಂಡ ಕೆಲಸಗಳನ್ನು ನಿರ್ವಹಿಸುವಲ್ಲಿ ಭಟ್ಟರು ಸಮರ್ಥರೆಂದು ತಿಳಿದಿದ್ದ ಗೋವಿಂದರಾಯರ ಮುಖದಲ್ಲಿ ಸಮಾಧಾನದ ನಗು ಕಂಡಿತು.

***

ಕಡಲ ತೀರದಲ್ಲಿರುವ ಸುಂದರ ನಗರಿ ರಾಜೇಶ್ವರಿಪುರದಲ್ಲಿ ಊರದೈವದ ವಾರ್ಷಿಕ ಜಾತ್ರೆಯ ಸಂಭ್ರಮ. ಒಂದು ವಾರದವರೆಗೆ ನಡೆಯುವ ಜಾತ್ರಾ ಮಹೋತ್ಸವದಲ್ಲಿ ಸುವರ್ಣ ರಥೋತ್ಸವ, ರಜತ ರಥೋತ್ಸವ,ಪಲ್ಲಕ್ಕಿ ಉತ್ಸವಗಳು,ತ್ರಿಕಾಲ ಪೂಜೆಗಳು,ವಿಶೇಷ ಹೋಮ ಹವನಗಳು, ನಾನಾ ಬಗೆಯ ಭಕ್ಷ್ಯಗಳ ನೈವೇದ್ಯಗಳು, ಭಕ್ತಿ-ಸಂಗೀತದ ಕಾರ್ಯಕ್ರಮಗಳು ಮಿಳಿತಗೊಂಡಿದ್ದವು. ಗೋವಿಂದರಾಯರು,ಶ್ಯಾಮರಾಯರು, ವೇಣುಗೋಪಾಲರಾಯರು ಮತ್ತು ಇತರ ಸದಸ್ಯರನ್ನೊಳಗೊಂಡ ಜಾತ್ರಾಸಮಿತಿ ನೂರಾರು ಭಕ್ತರನ್ನು ಒಟ್ಟುಗೂಡಿಸಿ, ವಿವಿಧ ಕಾರ್ಯಕ್ರಮಗಳನ್ನು ವಿಂಗಡಿಸಿ ಈ ಮಹೋತ್ಸವವನ್ನು ಯಶಸ್ವಿಯಾಗಿ ನೆರವೇರಿಸಬೇಕೆಂಬ ಯೋಜನೆ ಹಾಕಿಕೊಂಡಿತ್ತು. ಅದರಂತೆ ಹತ್ತಾರು ವಿಭಾಗಗಳಲ್ಲಿ ಹಲವಾರು ಭಕ್ತರು ತಮ್ಮನ್ನು ತೊಡಗಿಸಿಕೊಂಡಿದ್ದರು. ಆಗ ಗೋವಿಂದರಾಯರು ಸುಬ್ಬಾಭಟ್ಟರನ್ನು ಕರೆಯಿಸಿ ಮಾತನಾಡಿದ್ದರು. ಯಾರು ಈ ಸುಬ್ಬಾಭಟ್ಟ? ಮಧ್ಯವಯಸ್ಸಿನ, ಮೃದುಮಾತಿನ, ನಗುಮೊಗದ ಬಾಣಸಿಗ! ಭಕ್ಷ್ಯಗಳನ್ನು ತಯಾರಿಸುವಲ್ಲಿ ಎತ್ತಿದ ಕೈ! ಪರಿಚಯಸ್ಥರು ಮಾತನಾಡಿಸಿ, "ಏನ್ ಭಟ್ರೇ, ನೀವು ಸಿಹಿಭಕ್ಷ್ಯಗಳನ್ನು ತುಂಬಾ ಚೆನ್ನಾಗಿ ಮಾಡ್ತೀರಂತೆ?" ಎಂದು ಪ್ರಶ್ನಿಸಿದಾಗ, "ನಿಮ್ಮೆಲ್ಲರಿಗೂ ನನ್ನ ಕೈಯಿಂದ ಸಿಹಿ ಉಣಬಡಿಸುವ ಪ್ರಯತ್ನ ನನ್ನದು,ಕಹಿಯಂತೂ ಉಣಿಸೊಲ್ಲ ಮಾರಾಯ್ರೆ" ಎಂದು ನಗುತ್ತಿದ್ದರು. ಕೈಯಲ್ಲಿ ಜಾಲರಿ ಸೌಟುಗಳು,ಮಾಹಿತಿ ಗುರುತು ಹಾಕಿಕೊಳ್ಳುವ ಪುಟ್ಟ ಪುಸ್ತಕ,ಮುಖದ ಮೇಲೆ ಮಾಸದ ನಗು, ಈ ಸುಬ್ಬಾಭಟ್ಟರ ಪರಿಚಯವನ್ನುವಂತಿದ್ದವು. ಬರೀ ಸಿಹಿಭಕ್ಷ್ಯಗಳನ್ನು ತಯಾರಿಸುವುದಲ್ಲದೇ, ಸುಂದರವಾದ ರಂಗೋಲಿಗಳನ್ನು ಬಿಡಿಸುವುದು,



ಚಿತ್ರ: ಅಂತರ್ಜಾಲ

ವೇದ ಪಾರಾಯಣೆ, ಪೂಜಾ ವಿಧಾನಗಳಲ್ಲೂ ಪರಿಣತಿಯನ್ನು ಹೊಂದಿದ್ದರು ಈ ಭಟ್ಟರು!

***

ಗೋವಿಂದರಾಯರನ್ನು ಭೇಟಿಮಾಡಿದ ನಂತರ ಹಿರಿಯರಾದ ವೆಂಕಣ್ಣಭಟ್ಟ, ರಂಗಣ್ಣ, ನಾಣಿಯ ಜೊತೆಗೆ ತಮ್ಮದೇ ಒಂದು ಪುಟ್ಟ ತಂಡವನ್ನು ಕಟ್ಟಿಕೊಂಡರು ಸುಬ್ಬಾಭಟ್ಟರು. ನೈವೇದ್ಯ ಮತ್ತು ಮಹಾಪ್ರಸಾದಕ್ಕೆಂದು ವಿವಿಧ ಬಗೆಯ ವಿಶೇಷ ಭಕ್ಷ್ಯಗಳನ್ನು ತಯಾರಿ ಮಾಡಬೇಕೆಂದು ಯೋಚಿಸಿ, ಹೊಸಬಗೆಯ ಭಕ್ಷ್ಯಗಳಿಗೆ ಬೇಕಾಗುವ ಸಾಮಗ್ರಿಗಳನ್ನು, ತಯಾರಿಕೆಯ ವಿಧಾನಗಳನ್ನು ತಂಡದವರೊಡನೆ ಚರ್ಚಿಸಿ, ತಮ್ಮ ಪುಸ್ತಕದಲ್ಲಿ ಎಲ್ಲವನ್ನು ಬರೆದುಕೊಂಡರು. ಹಲವಾರು ವಿಷಯಗಳಲ್ಲಿ ಪರಿಣತಿ, ಮಾಹಿತಿ ಹೊಂದಿದ್ದ ಭಟ್ಟರು ಜಾತ್ರಾಮಹೋತ್ಸವದಲ್ಲಿ ಯೋಜಿಸಲಾಗಿದ್ದ ಇತರ ಕೆಲಸಗಳಲ್ಲಿಯೂ ತಮ್ಮನ್ನು ತೊಡಗಿಸಿಕೊಂಡರು. ವಹಿಸಿಕೊಂಡ ಜವಾಬ್ದಾರಿಗಳನ್ನೆಲ್ಲ ಸರಿಯಾಗಿ ನಿರ್ವಹಿಸುವುದನ್ನೇ ತಮ್ಮ ಗುರಿಯಾಗಿಸಿಕೊಂಡರು.

ಭಕ್ತಾದಿಗಳೆಲ್ಲ ಕಾತುರತೆಯಿಂದ ಎದುರು ನೋಡುತ್ತಿದ್ದ ದೇವಿ ಮಹೋತ್ಸವ ಶ್ರದ್ಧೆ , ಭಕ್ತಿಗಳಿಂದ ಪ್ರಾರಂಭಗೊಂಡಿತು. ವಿವಿಧ ಪೂಜೆಗಳು, ವಿಶೇಷ ಹೋಮ ಹವನಗಳಲ್ಲಿ ಸಾವಿರಾರು ಭಕ್ತರು ಪಾಲ್ಗೊಂಡರು. ದೇವಿ ಅಲಂಕಾರ, ದೀಪೋತ್ಸವ, ಸುಂದರವಾಗಿ ಅಲಂಕರಿಸಿಕೊಂಡ ಸುವರ್ಣ, ರಜತ ರಥಗಳು, ಭಕ್ತಿ-ಸಂಗೀತದ ಕಾರ್ಯಕ್ರಮಗಳು ಎಲ್ಲರ ಮನ ತುಂಬಿದವು. ಹತ್ತಾರು ವಿಭಾಗಗಳಲ್ಲಿ ನೂರಾರು ಭಕ್ತರು ಎಲ್ಲ ಕಾರ್ಯಗಳನ್ನು ನಿರ್ವಹಿಸಲು ಹಗಲಿರುಳೆನ್ನದೇ ದುಡಿಯುತ್ತಿದ್ದರು. ಸುಬ್ಬಾಭಟ್ಟರು ತಮ್ಮ ತಂಡದವರನ್ನು ಜೊತೆಯಾಗಿಸಿಕೊಂಡು ದೇವಿ ನೈವೇದ್ಯಕ್ಕೆ ಹಲವಾರು ಬಗೆಯ ಸಿಹಿಭಕ್ಷ್ಯಗಳನ್ನು ತಯಾರಿಸುವಲ್ಲಿ ನಿರತರಾಗಿದ್ದರು.

ಮಹೋತ್ಸವದ ಮೊದಲ ಎರಡು ದಿನಗಳು ಪೂರ್ಣಗೊಂಡಾಗ ತಾವು ವಹಿಸಿಕೊಂಡಿದ್ದ ಕೆಲಸಗಳನ್ನು ಪ್ರಾಮಾಣಿಕತೆಯಿಂದ ಮಾಡಿ ಮುಗಿಸುವ ತಮ್ಮಗಳ ಪ್ರಯತ್ನಕ್ಕೆ ಸಮಾಧಾನ ಎಲ್ಲರಲ್ಲಿ ಕಂಡುಬಂದಿದ್ದರೂ, ನಂತರದ ದಿನಗಳಲ್ಲಿ ಅಲ್ಲಲ್ಲಿ ಅಸಹನೆ, ಅಭಿಪ್ರಾಯಭೇದ, ಅಸಮಾಧಾನಗಳನ್ನು ಕಂಡಿದ್ದರು ಭಟ್ಟರು. ಭಕ್ತಿಯ, ಸೇವೆಯ ಮನೋಭಾವವಿರಬೇಕಾದಲ್ಲಿ ಕೆಲವರು ತಮ್ಮ ಅಭಿಪ್ರಾಯಗಳನ್ನು ಮಂಡಿಸುವಲ್ಲಿ ಬಲವಂತದ ಪ್ರಯತ್ನದಲ್ಲಿದ್ದಾರೆ ಎನಿಸಿತು. ಇನ್ನು ಕೆಲವರಂತೂ ತಮ್ಮ ಹಿರಿಮೆ ತೋರಿಸುವ ಹುನ್ನಾರದಲ್ಲಿ ಜೊತೆಯಲ್ಲಿರುವವರ ಪರಿಶ್ರಮವನ್ನು, ವ್ಯಕ್ತಿತ್ವವನ್ನೂ ಅಲಕ್ಷಿಸಿದಂತಿದ್ದರು. ಇವರ ಜೊತೆ ಊರ ರಾಜಕೀಯದ ಪ್ರಮುಖರು ಸೇರಿಕೊಂಡು ಮುಂಬರಲಿರುವ ಪಂಚಾಯಿತಿ ಚುನಾವಣೆಯಲ್ಲಿ ತಮ್ಮ ಬಲಾಬಲ ತೋರಿಸಲು ಊರ ದೇವಿಯ ಈ ಜಾತ್ರಾ ಮಹೋತ್ಸವವನ್ನು ಉಪಯೋಗಿಸಿಕೊಳ್ಳುತ್ತಿದ್ದಂತೆ ಕಂಡು ಬರುತಿತ್ತು. ಈ ಬಗ್ಗೆ ಕೆಲವು ಸ್ನೇಹಿತರು ಭಟ್ಟರಲ್ಲಿ ಪ್ರಸ್ತಾಪಿಸಿದಾಗ, "ಇದೆಂತ ಹೊಸ ವಿಷಯವೋ? ಇದು ಎಲ್ಲಾ ಕಡೆ ಇರೂದೆ" ಎಂದು ಹೇಳಿ ಸುಮ್ಮನಾಗಿದ್ದರು ಸುಬ್ಬಾಭಟ್ಟರು.ಭಟ್ಟರ ತಂಡದ ಸದಸ್ಯರೂ ಇದಕ್ಕೆ ಹೊರತಾಗಿರಲಿಲ್ಲ.

**(ಮುಂದಿನ ಪುಟಕ್ಕೆ)**


Copyright © KCO – Brindavana

**ಮುಂದುವರೆದುದು....**

ಭಟ್ಟರ ತಂಡದ ಸದಸ್ಯರೂ ಇದಕ್ಕೆ ಹೊರತಾಗಿರಲಿಲ್ಲ. ಅಂದು ಸಂಜೆಯ ನೈವೇದ್ಯಕ್ಕೆ ತಯಾರಿಸಿಬೇಕಾಗಿದ್ದ 'ದಿವ್ಯಪಾಕ', ವಿಶೇಷ ಭಕ್ಷದ ಬಗ್ಗೆ ಉಪಯುಕ್ತವಾದ ಸಲಹೆಯನ್ನು ಹೇಳ ಹೊರಟ ಭಟ್ಟರ ಮಾತನ್ನು ಮಧ್ಯದಲ್ಲಿಯೇ ತುಂಡರಿಸಿದ ನಾಣಿ, "ನಾವೆಲ್ಲ ಸಾಮಗ್ರಿಗಳನ್ನ ತಯಾರಿ ಮಾಡಿಕೊಂಡಿದ್ದೇವೆ. ಇನ್ನು ಹೆಚ್ಚಿನ ಪದಾರ್ಥ ಬೆರೆಸಲಿಕ್ಕೆ ಆಗಲ್ಲ ಭಟ್ರೇ" ಎಂದಾಗ ಅವನ ಧ್ವನಿಯಲ್ಲಿನ ಅಸಹನೆಯ ಜಾಡುಹಿಡಿದಿದ್ದರು ಈ ಸೂಕ್ಷ್ಮಮತಿ ಭಟ್ಟರು."ಸಾಮಾನ್ ಸೇರಿದೋದು ಬೇಡ ಅಂದ್ರೆ ಎಂತ ತೊಂದರೆಯಿಲ್ಲ.ಆದರೆ ಕೆಲವು ಸಾಮಗ್ರಿಗಳ ಅಳತೆ,ಮಿಶ್ರಣ ಸರಿಮಾಡಿದ್ರೆ ಒಳ್ಳೇದು. 'ದಿವ್ಯಪಾಕ'ದ ಸರಿಯಾದ ಸ್ವಾದ ತಿಳಿದಿರೋ ಭಕ್ತಾದಿಗಳೂ ಇದ್ದಾರೆ." ಎಂದು ಉತ್ತರಿಸಿ ಅಡುಗೆಮನೆಯಿಂದ ಹೊರಬಂದು ಹೋಮದ ರಂಗೋಲಿಯನ್ನು ಬಿಡಿಸಬೇಕೆಂದು ಯಾಗಶಾಲೆಯತ್ತ ಹೊರಟ ಸುಬ್ಬಾಭಟ್ಟರಿಗೆ ಅವಧಾನಿಗಳು ಹೇಳುತ್ತಿದ್ದ ಡಿ.ವಿ.ಜಿ. ಅವರ 'ಮಂಕುತಿಮ್ಮನ ಕಗ್ಗ'ದ ಪದ್ಯದ ಸಾಲುಗಳು ನೆನಪಾಗಿದ್ದವು.

*"ನಾನು ನಾನೇ ನಾನೆನುತ್ತ*
*ಕಿರಿಕೊಡದ ನೀರ್।*
*ಗಾನಗೆಯ್ವುದು ಹೆಮ್ಮೆಯಿಂ ಕಡಲ ಮರೆತು ॥*
*ನೂನದಿಂದೆಲ್ಲವೆನುವಬ್ಧಿಗೊಳಗದನಿರಿಸೆ ।*
*ಮೌನವದು ಮಣ್ಣರಗಿ - ಮಂಕುತಿಮ್ಮ ॥"*

***

ಒಂದು ವಾರದ ಜಾತ್ರಾ ಮಹೋತ್ಸವ ಬಹಳ ವಿಜೃಂಭಣೆಯಿಂದ ನೆರವೇರಿತ್ತು. ಉತ್ಸವದಲ್ಲಿ ಭಾಗಿಯಾಗಿದ್ದ ಸಾವಿರಾರು ಭಕ್ತರು ಅಲ್ಲಿನ ಸಂಭ್ರಮಗಳನ್ನು ಮನಃಪೂರ್ವಕವಾಗಿ ಆನಂದಿಸಿದರು. ರುಚಿಕರ ಭಕ್ಷಗಳನ್ನು ಸವಿದು ತೃಪ್ತರಾದರು. ಜಾತ್ರಾ ಸಮಿತಿಯ ಸದಸ್ಯರು ಹೆಚ್ಚಿನ ಅಡ್ಡಿ, ಆತಂಕಗಳಿಲ್ಲದೇ (ಅನವಶ್ಯಕವಾದ ರಾಜಕೀಯದ ನಡುವೆಯೂ) ಯಶಸ್ವಿಯಾಗಿ ನೆರವೇರಿದ್ದನ್ನು ಕಂಡು ಸಮಾಧಾನಗೊಂಡು ತಾಯಿ ರಾಜೇಶ್ವರಿಗೆ ನಮನಗಳನ್ನು ಸಲ್ಲಿಸಿದರು. ರಾತ್ರಿಯ ಮಹಾಮಂಗಳಾರತಿಯ ನಂತರ ವಿಧ, ವಿಧವಾದ ಕೆಲಸಗಳಲ್ಲಿ ದುಡಿದಿದ್ದ ಭಕ್ತರನ್ನೆಲ್ಲ ಒಂದೆಡೆ ಸೇರಿಸಿ, ಮಹಾಪ್ರಸಾದ ನೀಡಿ ಅವರ ಸೇವೆ, ಪರಿಶ್ರಮವನ್ನು ಶ್ಲಾಘಿಸಿದರು. ಜಾತ್ರಾ ಸಮಿತಿಯ ಮೇಲ್ವಿಚಾರಕರಾದ ಗೋವಿಂದರಾಯರ ಮುಂದಾಳತ್ವದಲ್ಲಿ ಈ ಕಾರ್ಯಕ್ರಮ ಜರುಗಿತು. ಶ್ಯಾಮರಾಯರು, ವೇಣುಗೋಪಾಲರಾಯರು ಮಾತನಾಡಿ ಎಲ್ಲರ ಕಾರ್ಯವೈಖರಿಯ ಬಗ್ಗೆ ಮೆಚ್ಚುಗೆ ವ್ಯಕ್ತಪಡಿಸಿದರು. ಅಡುಗೆಭಟ್ಟರ ತಂಡದವರನ್ನು, ವಿಶೇಷ ಸಿಹಿ ಭಕ್ಷಗಳನ್ನು ತಯಾರಿಸಿದವರನ್ನು ಹೆಸರಿಸಿದಾಗ, ಭಕ್ತಾದಿಗಳೆಲ್ಲ ಜೋರಾಗಿ ಚಪ್ಪಾಳೆ ತಟ್ಟಿ ಹರ್ಷೋದ್ಗಾರ ಮಾಡಿದರು. ಗೋವಿಂದರಾಯರು ನಸುನಕ್ಕು ತಮ್ಮ ಅಯ್ಕೆಯ ಬಗ್ಗೆ ಹೆಮ್ಮೆ ಪಟ್ಟುಕೊಂಡರು. ಅದೇ ಸಂತೋಷದಲ್ಲಿ 'ಅಡುಗೆಭಟ್ಟರ ತಂಡ'ದ ಕಡೆಗೆ ಕಣ್ಣು ಹಾಯಿಸಿದಾಗ , ಮುಂಚೂಣಿಯಲ್ಲಿ ವೆಂಕಣ್ಣಭಟ್ಟರು , ನಾಣಿ ಮತ್ತು ರಂಗಣ್ಣ ಕಂಡರೇ ಹೊರತು ಸುಬ್ಬಾಭಟ್ಟರು ಕಾಣಿಸಲಿಲ್ಲ.

ವೆಂಕಣ್ಣಭಟ್ಟರು ಮಾತನಾಡಿ ತಮ್ಮ ತಂಡದ ನಾಣಿ, ರಂಗಣ್ಣರನ್ನು ಹಾಡಿ ಹೊಗಳಿದರು. ಅಲ್ಲಿದ್ದ ಕೆಲವರು "ಸುಬ್ಬಾಭಟ್ರು", "ಸುಬ್ಬಾಭಟ್ರು" ಎಂದು ಕೂಗಿದ್ದು ಅಲ್ಲಿನ ಗದ್ದಲದಲ್ಲಿ ಯಾರಿಗೂ ಕೇಳದಂತಾಗಿತ್ತು. ಹಿರಿಯರಾದ ವೆಂಕಣ್ಣಭಟ್ಟರು ತಮ್ಮ ಮಾತಿನ ನಡುವೆ ಭಟ್ಟರ ಹೆಸರು ಮರೆತಿರಬಹುದೆಂದುಕೊಂಡರೂ, ನಾಣಿ ಮತ್ತು ರಂಗಣ್ಣರೂ ಸಹ ನೆನಪಿಸುವ ಗೋಜಿಗೆ ಹೋಗದೇ ಇದ್ದುದು ಕಂಡು ಬಂದಿತ್ತು. ಅಲ್ಲಿಯೇ ಹಿಂದಿನ ಸಾಲಿನಲ್ಲಿ ನಿಂತು ಈ ಆಗುಹೋಗುಗಳನ್ನೆಲ್ಲ ನೋಡಿದ ಸುಬ್ಬಾಭಟ್ಟರಲ್ಲಿ ನಿರ್ಲಿಪ್ತತೆ ಮೂಡಿತ್ತು. ಇದನ್ನೆಲ್ಲ ಗೋವಿಂದರಾಯರು ಗಮನಿಸಿದ್ದರೂ, ಹೆಚ್ಚಿನ ಸಮಯವಿರದ ಕಾರಣ ಮಾತು ಮುಂದುವರಿಸದೇ ಸುಮ್ಮನಾಗಿದ್ದರು.

***

ಜಾತ್ರಾ ಮಹೋತ್ಸವ ಮುಗಿದು ಒಂದೆರಡು ತಿಂಗಳುಗಳು ಕಳೆದಿದ್ದವು.ಅಂದು ಶುಕ್ರವಾರವಾಗಿದ್ದು ದೇವಸ್ಥಾನದಲ್ಲಿ ನಡೆಯುವ ವಾರದ ವಿಶೇಷ ಪೂಜೆಗೆಂದು ಹೋಗಿದ್ದ ಗೋವಿಂದರಾಯರು, ಪ್ರತಿವಾರವೂ ಆ ಪೂಜೆಯಲ್ಲಿ ಪಾಲ್ಗೊಳ್ಳುತ್ತಿದ್ದ ಸುಬ್ಬಾಭಟ್ಟರ ಗೈರುಹಾಜರಿಯನ್ನು ಕಂಡು ಆಶ್ಚರ್ಯಗೊಂಡರು. ಅರ್ಚಕರಲ್ಲಿ ವಿಚಾರಿಸಲಾಗಿ, ಕೆಲವು ದಿನಗಳಿಂದ ಭಟ್ಟರು ಬರುತ್ತಿಲ್ಲವೆಂದು ತಿಳಿದಾಗ ಗೋವಿಂದರಯರು ಕಸಿವಿಸಿಗೊಂಡರು.

ಜಾತ್ರಾ ಮಹೋತ್ಸವದಲ್ಲಿ ಅವರ ಅರ್ಹತೆಗೆ ತಕ್ಕ ಮನ್ನಣೆ ಕೊಡದೆ ತಮ್ಮ ಜೊತೆಯವರೆ ತಮ್ಮನ್ನು ನಿರ್ಲಕ್ಷಿಸಿದರು ಎಂದು ಕೋಪಗೊಂಡರೇ? ಅಥವಾ ಬೇಸರಗೊಂಡಿರಬಹುದೇ? ಅಂದು ಮಹಾಪ್ರಸಾದ ವಿತರಣೆಯ ನಂತರ ಭಟ್ಟರಲ್ಲಿ ಮಾತನಾಡಲು ಆಗಿರಲಿಲ್ಲವೆನ್ನುವುದು ನೆನಪಿಗೆ ಬಂದು, ಸುಬ್ಬಾಭಟ್ಟರ ಮನೆಯತ್ತ ನಡೆದಿದ್ದ ಗೋವಿಂದರಾಯರಿಗೆ ಅಲ್ಲಿ ತಿಳಿದ ವಿಷಯ ಸಂತೋಷ ತಂದಿತ್ತು! ಜಾತ್ರಾ ಮಹೋತ್ಸವದ ಘಟನೆಗಳನ್ನೆಲ್ಲ ಜೀವನಾನುಭವಗಳ ಪಟ್ಟಿಗೆ ಸೇರಿಸಿದ್ದ ಸುಬ್ಬಾಭಟ್ಟರು, ಗುರುಕುಲದ ಪಾಠಗಳಲ್ಲಿ, ವೇದಾಧ್ಯಯನದಲ್ಲಿ, ಹಿರಿಯರು ಪೂಜೆಮಾಡಿಕೊಂಡು ಬಂದಿದ್ದ ದೇವಸ್ಥಾನವನ್ನು ಸ್ವತಃ ನಿರ್ವಹಿಸುವಲ್ಲಿ ತಮ್ಮನ್ನು ತೊಡಗಿಸಿಕೊಂಡಿದ್ದರು!

ಅಲ್ಲಿಂದ ಮನೆಯತ್ತ ಹೊರಟ ಗೋವಿಂದರಾಯರ ಯೋಚನೆಗಳಲ್ಲಿ ಸುಬ್ಬಾಭಟ್ಟರೇ ಆವರಿಸಿಕೊಂಡಿದ್ದರು. ಮನುಷ್ಯ ತನ್ನ ಸಾಮರ್ಥ್ಯದಿಂದ, ದೃಢ ನಿಶ್ಚಯದಿಂದ, ಸಾಧನೆಯ ಛಲತೊಟ್ಟಾಗ ಹಲವಾರು ಅವಕಾಶಗಳು ಅವನ ಮುಂದೆ ತೆರೆದಿಟ್ಟುಕೊಳ್ಳುತ್ತವೆ. ನಡೆಯುವ ಶಕ್ತಿ, ಸಾಮರ್ಥ್ಯವಿದ್ದವನಿಗೆ ಒಂದೆರಡೇನು? ನೂರಾರು ದಾರಿಗಳು! ಭಟ್ಟರ ಬಗ್ಗೆ ಅಭಿಮಾನ ಮೂಡಿ ಗೋವಿಂದರಾಯರ ಕಣ್ಣಂಚು ಒದ್ದೆಯಾಯಿತು. ಭುಜದ ಮೇಲೆ ಹಾಕಿಕೊಂಡಿದ್ದ ಶಲ್ಯದಿಂದ ಕಣ್ಣೀರು ಒರೆಸಿಕೊಂಡು ತಮ್ಮಷ್ಟಕ್ಕೇ ಮಾತನಾಡಿಕೊಂಡರು. **"ದಾರಿ ನೂರಿದೆ ನಡೆವಾತಗೆ . ನಿಜ, ದಾರಿ ನೂರಿದೆ ನಡೆವಾತಗೆ!".**

# ಬೃಂದಾವನ ವಾಣಿ

ಬೃಂದಾವನ ಕನ್ನಡ ಕೂಟ, ನ್ಯೂಜೆರ್ಸಿಯ ದ್ವೈಮಾಸಿಕ ಪತ್ರಿಕೆ

ಓ ನನ್ನ ಚೇತನ

ಅಹೀಶ ಭಾರದ್ವಾಜ



## ಅಂತರಿಕ್ಷದಲ್ಲೊಂದು ಮನೆಯ ಮಾಡಿ...

*"ಮುಂದೊಂದು ದಿನ ನಮ್ಮಗಳ ಎಂಟೋ ಹತ್ತೋ ಪೀಳಿಗೆಯ ಜನರ ಕಾಲಮಾನದಲ್ಲಿ, ಅವರುಗಳು ಅಂತರಿಕ್ಷದಲ್ಲಿ ವಾಸವಿದ್ದು, ಭೂಮಿಗೆ ರಜಾದಿನಗಳನ್ನು ಕಳೆಯಲು ಬರುವುದಲ್ಲಿ ಆಶ್ಚರ್ಯವೇನಿಲ್ಲ. ಈಗಲೇ ನಿವೇಶನಕ್ಕೆ ಒಂದು ಅರ್ಜಿ ಹಾಕಿ!! ನಿಮ್ಮ ಮುಂದಿನ*

ಜೀವಜಂತುಗಳು ಈ ಭೂಮಿಯ ಮೇಲೆ ಅನಾದಿಕಾಲದಿಂದಲೂ ಒಂದಲ್ಲ ಒಂದು ಪ್ರಕೃತಿ ವಿಕೋಪಕ್ಕೆ ಸಿಲುಕಿ ವಿನಾಶಗೊಂಡಿವೆ. ಹಾಗೆಯೇ ಈ ಭೂಮಿಯ ಮೇಲಿನ ಅವುಗಳ ಉಳುವಿಕೆಗೆ ಅನೇಕಾನೇಕ ವಿಪತ್ತುಗಳು ಅಡಚಣೆಯನ್ನು ಮಾಡುತ್ತಲೇ ಬಂದಿವೆ, ಮುಂದೆಯೂ ಬರಬಹುದೆಂಬ ಶಕ್ಯವಿದೆ. ಈ ವಿಪತ್ತುಗಳು ಪ್ರಕೃತಿ ನಿರ್ಮಿತವಾಗಿರಬಹುದು ಅಥವಾ ಮಾನವ ಸೃಷ್ಟಿಯಾಗಿರಬಹುದು. ಇವುಗಳು ಒಂದು ನಿರ್ದಿಷ್ಟ ಭೂಮಿಯ ವಾತಾವರಣದಲ್ಲಿರುವುದಿಂದ ವಿಪತ್ತುಗಳಿಂದ ಪಾರಾಗಲು, ಚೇತರಿಸಿಕೊಳ್ಳಲು ಅಸಾಧ್ಯವಾದ ಮಾತು. ಜೀವಜಂತುಗಳ ವಿನಾಶ ನಾನಾರೀತಿಯ ವಿಪತ್ತುಗಳಿಂದ ಆಗಬಹುದು. ಹಲವಾರು ಸಂಶೋಧನಾ ಕೇಂದ್ರಗಳ ಅಧ್ಯಯನಗಳ ಪ್ರಕಾರ ವಿಶ್ವದ ಭೂತಾಪಮಾನದ ಏರಿಕೆಯಿಂದ ಹವಾಮಾನದ ವೈಪರಿತ್ಯಗಳು ಹೆಚ್ಚಾಗಿ ಪರಿಸರದ ಸಮತೋಲನವು ಕುಸಿದು, ಒಂದರ ನಂತರ ಮತ್ತೊಂದು ವೈಪರಿತ್ಯಗಳಿಗೆ ಅಣಿವು ಮಾಡಿಕೊಟ್ಟು ಭೂಮಿಯ ಮೇಲೆ ಜೀವಿಸಲಾಗದಂತ ವಾತಾವರಣವು ಸೃಷ್ಟಿಯಾಗುತ್ತದೆ.

ಸಣ್ಣ ಆಕಾಶಕಾಯಗಳು(Asteroids) ಭೂಮಿಗೆ ಅಪ್ಪಳಿಸುವುದರಿಂದಲೂ ಕೂಡ ಜೀವಜಂತುಗಳ ವಿನಾಶಕ್ಕೆ ಕಾರಣವಾಗುತ್ತದೆ. ಹಲವು ಸಂಶೋಧನೆಗಳ ಪ್ರಕಾರ ಡೈನೋಸಾರಗಳ ವಿನಾಶಕ್ಕೆ ಸಣ್ಣ ಆಕಾಶಕಾಯಗಳು ಭೂಮಿಗೆ ಅಪ್ಪಳಿಸಿದ್ದೇ ಕಾರಣವೆಂದು ಅಭಿಪ್ರಾಯ. ಖಗೋಳಶಾಸ್ತ್ರಜ್ಞರ ಪ್ರಕಾರ ಅಂತರಿಕ್ಷದಲ್ಲಿರುವ ಕೋಟ್ಯಾನುಕೋಟಿ ಆಕಾಶಕಾಯಗಳ ಪೈಕಿ ಕೆಲುವುದರ ಬಗ್ಗೆ ಮಾತ್ರ ಮಾಹಿತಿ ಇದ್ದು, ಈ ಭೂಮಿಗೆ ಭವಿಷ್ಯದಲ್ಲಿ ಯಾವ ಆಕಾಶಕಾಯದಿಂದ ವಿಪತ್ತು ಬರುವುದೆಂದು ಹೇಳಲಸಾಧ್ಯ. ಆರೋಹಣ (Robot Ascension) ಹಾಗು ಅವುಗಳಿಂದ ಇದರ ಜೊತೆಗೆ ದಿನೇದಿನೇ ಹೆಚ್ಚುತ್ತಿರುವ ಸರ್ವವ್ಯಾಪಿ ಮಾನವನ ಮೇಲಿನ ಹಿಡಿತ ಮತ್ತು ವಿನಾಶ, ಜನಸಂಖ್ಯಾಸ್ಫೋಟವೂ, ಭೂಮಿಯಲ್ಲಿ ಮಾನವಕುಲದ ಉಳಿವಿಗೆ ಮುಂದಿನ ದಿನಗಳಲ್ಲಿ ಮಾರಕವಾಗುತ್ತದೆ.

ಈ ಭೂಮಿಯ ಮೇಲೆ ಮಾನವ ಸಂತತಿ ಚಿಕ್ಕದಾಗಿ



ಚಿತ್ರ: ಅಂತರ್ಜಾಲ

ಯಾವುದೋ ಖಂಡದಲ್ಲಿ ಶುರುವಾಗಿ ಕಾಲಕ್ರಮೇಣ ಭೂಮಿಯ ಎಲ್ಲಾ ಭಾಗಗಳಲ್ಲಿ ವ್ಯಾಪಿಸಿಕೊಂಡು ಎಲ್ಲೆ ಮೀರಿ ಬೆಳೆದಿದೆ ಹಾಗು ಮುಂದಕ್ಕೆ ಘಾತೀಯರೀತಿಯಲ್ಲಿ ಬೆಳೆಯುವಂತೆ ಹೆಜ್ಜೆ ಹಾಕುತ್ತಿದೆ. ಹೀಗೆ ನಾನಾ ವಿಪತ್ತುಗಳಿಂದ ಭೂಮಿಯ ಮೇಲಿನ ಮಾನವ ಸಂತತಿಯ ವಿನಾಶ ಸಂಭವಿಸುವ ಸೂಚನೆಗಳಿರುವುದಿಂದ, ಈ ವಿಪತ್ತುಗಳನ್ನು ಮೀರಿ ಭೂಮಿಯ ಮೇಲೆ ನಮ್ಮ ಉಳಿವು ಸಾಧ್ಯವೇ? ಅದು ಬಹಳ ಕಷ್ಟವೆಂದು ಸಾಕಷ್ಟು ಸಂಶೋಧಕರ, ವಿಜ್ಞಾನಿಗಳ ಅಭಿಪ್ರಾಯ. ಖ್ಯಾತ ಆಸ್ಟ್ರೋಫಿಸಿಸ್ಟ್ ಸ್ಟೀಫನ್ ಹಾಕಿಂಗ್ ಹೇಳುವಂತೆ " ಭವಿಷ್ಯದಲ್ಲಿ ಭೂಮಿಯ ಮೇಲೆ ಮಾನವನ ಉಳಿವು ಕಷ್ಟ. ಮುಂದಿನ ನೂರಾರು ವರ್ಷಗಳಲ್ಲಿ ಒಂದಲ್ಲ ಒಂದು ವಿಪತ್ತಿನಿಂದ ಮಾನವಕುಲವು ನಾಶವಾಗುವುದು ಖಂಡಿತ. ನಾವು ಒಳಮುಖವಾಗಿ ಭೂಮಿಯ ಮೇಲಿನ ವಾಸ್ತವ್ಯದ ಯೋಚನೆಯನ್ನು ಬಿಟ್ಟು, ಹೊರಮುಖವಾಗಿ ಅಂತರಿಕ್ಷದಲ್ಲಿ ನೆಲಸುವ ಯೋಚನೆಯನ್ನು ಮಾಡಬೇಕಾಗುತ್ತದೆ."

ಈ ದಿಶೆಯಲ್ಲಿ ವಿಜ್ಞಾನಿಗಳ, ಸಂಶೋಧಕರ ಆಲೋಚನೆಗೆ ಬಂದದ್ದು ನಾವೇಕೆ ಭೂಮಿಯಿಂದ ದೂರದ ಅದರ ಕಕ್ಷೆಯಲ್ಲಿ ವಸಾಹತುಗಳನ್ನು ನಿರ್ಮಿಸಬಾರದೆಂದು! ಅಂತಹ ಚಿಂತನೆಯಿಂದ ಅವಿಷ್ಕಾರವದುದೇ ಮಾನವನ ಭವಿಷ್ಯದ ವಾಸಸ್ಥಳ "ಅಂತರಿಕ್ಷ ವಸಾಹತುಗಳು"(Space Habitats). ಅಂತರಿಕ್ಷ ವಸಾಹತುಗಳು ಒಂದು ಬೃಹದಾಕಾರದ ವಸಾಹತು ಸಂಕೀರ್ಣ. ಸರಿಸುಮಾರು ಒಂದು ದೊಡ್ಡ ನಗರ ಅಥವಾ ಸಣ್ಣ ಪಟ್ಟಣದಷ್ಟು ಗಾತ್ರವಿದ್ದು ಅಂತರಿಕ್ಷದ ಭೂಮಿಯ ಕಕ್ಷೆಯಲ್ಲಿ ನಿರ್ಮಾಣ ಮಾಡಲ್ಪಟ್ಟ ವಸಾಹತುಗಳು. ಇವುಗಳು ಭೂಮಿಯ ಮೇಲಿನ ಯಾವುದೇ ನಗರಗಳಲ್ಲಿರುವ ಎಲ್ಲಾ ಸೌಲಭ್ಯಗಳನ್ನು ಹೊಂದಿರುವಂತಹ, ಮಾನವನು ಜೀವಿಸಲು ಅನುಕೂಲವಾಗುವಂತ ಪರಿಸರ ಹೊಂದಿರುವ ಪುಟ್ಟ ಪುಟ್ಟ ನಗರಗಳು.

****

ಆಶ್ಚರ್ಯವೆನಿಸುತ್ತದೆ ! ಇದು ಏನು star wars ಚಿತ್ರದಲ್ಲಿ ತೋರಿಸುವಂತ ಕಲ್ಪನಾಲೋಕವೆಂದು! ಇದು ಕಲ್ಪನೆಯಲ್ಲ, ಮುಂದೊಂದು ದಿನ(ಸುಮಾರು ೧೦೦ ರಿಂದ ೨೦೦ ವರ್ಷದಲ್ಲಿ) ದಿಟವಾಗುವ ತಂತ್ರಜ್ಞಾನ. ಈ ಅಂತರಿಕ್ಷ ವಸಾಹತುಗಳ ವಿನ್ಯಾಸದ ಮಧ್ಯಭಾಗದಲ್ಲಿ ಬೃಹದಾಕಾರದ ಸಿಲಂಡರ್ ಇದ್ದು, ಅದರ ಸುತ್ತಲೂ ಅಂತರಿಕ್ಷ ವಸಾಹತುಗಳು ಸುತ್ತುತ್ತಿರುತ್ತವೆ. ಆ ಸುತ್ತುವಿಕೆಯ ಶಕ್ತಿಯು ವಸಾಹತುಗಳಲ್ಲಿ ವಾಸಮಾಡುವವರಿಗೆ ಕೃತಕ ಗುರುತ್ವಾಕರ್ಷಣೆಯನ್ನು ಕೊಡುವ ಸಾಮರ್ಥ್ಯವನ್ನು ಹೊಂದಿರುತ್ತದೆ. ಅದು ನಮಗೆ ಭೂಮಿಯ ಮೇಲಿರುವ ಗುರುತ್ವಾಕರ್ಷಣದ ಶಕ್ತಿಯ ಸರಿಸಮವಾಗಿರುವಂತಹದ್ದು. ಇಂತಹ ವಸಾಹತುಗಳಿಗೆ ಭೂಮಿಯ ಮೇಲೆ ಇರುವಂತೆ ವಾಯುಭಾರ, ತಾಪಮಾನಗಳ ನಿಯಂತ್ರಣೆ, ಜೀವಿಸಲು ಪೂರಕವಾಗುವಂತಹ ಪರಿಸರದ ಆಧಾರ, ವಿಕಿರಣದಿಂದಾಗುವ ಹಾನಿಯನ್ನು ತಡೆಗಟ್ಟುವ ಸಾಮರ್ಥ್ಯಹಾಗು ಇವುಗಳನ್ನೆಲ್ಲಾ ಹಿಡಿದಿಟ್ಟು ಸುಶ್ರೂಶೆಯಿಂದ ನಡೆಯಲು ಅನುಕೂಲ ಮಾಡಿಕೊಡುವಂತಹ ಸಂಪರ್ಕ ಮಾಧ್ಯಮಗಳು ಅತ್ಯಗತ್ಯ.ಈಗಿನ ತಂತ್ರಜ್ಞಾನ, ನಿರ್ಮಾಣಕ್ಕೆ ತಗಲುವ


Copyright © KCO – Brindavana

# ಬೃಂದಾವನ ವಾಣಿ

ಬೃಂದಾವನ ಕನ್ನಡ ಕೂಟ, ನ್ಯೂಜೆರ್ಸಿಯ ದ್ವೈಮಾಸಿಕ ಪತ್ರಿಕೆ

ಮುಂದುವರೆದುದು....

ಅಂದಾಜು ಬಂಡವಾಳಗಳು ಇಂದಿನ ಪರಿಸ್ಥಿತಿಯಲ್ಲಿ ವಸಾಹತುಗಳ ನಿರ್ಮಾಣಕ್ಕೆ ಪೂರಕವಾಗಿಲ್ಲವಾದರೂ, ಮುಂದಿನ ೩೦-೪೦ ವರ್ಷಗಳಲ್ಲಿ ಅಂತರಿಕ್ಷ ಪ್ರವಾಸೋದ್ಯಮ(Space Tourism), ಅಂತರಿಕ್ಷ ವಸತಿಗೃಹ(Space Hotels), ಹಾಗು ಅಂತರಿಕ್ಷ ಕ್ರೀಡೆಗಳನ್ನು(Space Sports) ಅಭಿವೃದ್ಧಿಗೊಳಿಸಿ, ಭೂಮಿಯಲ್ಲಿರುವ ಜನಗಳಿಗೆ ಅಂತರಿಕ್ಷಕ್ಕೆ ಹೋಗುವ, ಕೆಲಕಾಲ ಹೋಟೆಲಲ್ಲಿ ತಂಗುವ ಮತ್ತು ಕ್ರೀಡೆಗಳನ್ನು ನೋಡುವ ಒಂದು ಅನುಭವವನ್ನು ಕೊಡುವುದರ ಮೂಲಕ ಹೆಚ್ಚು ಹೆಚ್ಚು ಆದಾಯವನ್ನುಗಳಿಸಿ, ಇವುಗಳ ನಿರ್ವಹಣೆಯ ಕಲಿಕೆಯಿಂದ ತಂತ್ರಜ್ಞಾನದ ಅಭಿವೃದ್ಧಿಯನ್ನುಂಟುಮಾಡಿ ಮುಂದಿನ ದಶಕಗಳಲ್ಲಿ ಬೃಹದಾಕಾರದ ಅಂತರಿಕ್ಷ ವಸಾಹತುಗಳ ನಿರ್ಮಾಣಕ್ಕೆ ನಾಂದಿಯಾಗುವಂತೆ ಮಾಡುತ್ತದೆ.

ಹಾಗೆಯೇ ಅಂತರಿಕ್ಷ ವಸಾಹತುಗಳಲ್ಲಿ ನೈಸರ್ಗಿಕ ಸಂಪನ್ಮೂಲಗಳನ್ನು ಒದಗಿಸಲು ಭೂಮಿಯಿಂದ ಸಾಗಿಸಲು ಅಸಾಧ್ಯ. ಹಾಗಾಗಿ ಅಂತರಿಕ್ಷದಲ್ಲಿ ಸುತ್ತ ಹಾರಾಡುತ್ತಿರುವ ಆಕಾಶಕಾಯಗಳು (Asteroids),ನಶಿಸಿಹೋದ ಧೂಮಕೇತುಗಳು (Spent Comet) ಹಾಗು ಭೂಮಿಗೆ ಸಮೀಪದಲ್ಲಿರುವ ಇತರೆ ಸಣ್ಣ ಸೌರವ್ಯೂಹ(near Earth Objects) ವಸ್ತುಗಳಲ್ಲಿರುವ ನೈಸರ್ಗಿಕ ಸಂಪನ್ಮೂಲಗಳನ್ನು ಗಣಿಗಾರಿಕೆ(Asteroid Mining) ಮಾಡಿ ಅದನ್ನು ಅಂತರಿಕ್ಷ ವಸಾಹತುಗಳಿಗೆ ರವಾನಿಸಿ ಅವುಗಳ ನಿರ್ಮಾಣಕ್ಕೆ ಅನುಕೂಲ ಮಾಡುವಂತಹ ತಂತ್ರಜ್ಞಾನಗಳು ಮಂಚೂಣಿಯಲ್ಲಿವೆ. ಜೊತೆಗೆ ವಾಯುಭಾರ ನಿಯಂತ್ರಣೆ, ತಾಪಮಾನ ನಿಯಂತ್ರಣೆ, ಗುರುತ್ವಾಕರ್ಷಣೆ, ಪಥಚಲನಗಳ ನಿಯಂತ್ರಣೆಗಳು ಭೂಮಿಯ ಮೇಲೆ ಇರುವಂತೆಯೇ ಸೃಷ್ಟಿಸಲು ಸಧ್ಯಕ್ಕೆ ಇರುವ ಅಡೆತಡೆಗಳನ್ನು ಸಂಗ್ರಹಿಸಿ, ಮುಂದಿನ ಸಂಶೋಧನೆಗಳು ನಡೆಯುತ್ತಲೇ ಇದೆ.

ಮುಂದೊಂದು ದಿನ ನಮ್ಮಗಳ ಎಂಟೋ ಹತ್ತೋ ಪೀಳಿಗೆಯ ಜನರ ಕಾಲಮಾನದಲ್ಲಿ, ಅವರುಗಳು ಅಂತರಿಕ್ಷದಲ್ಲಿ ವಾಸವಿದ್ದು, ಭೂಮಿಗೆ ರಜಾದಿನಗಳನ್ನು ಕಳೆಯಲು ಬರುವುದಲ್ಲಿ ಆಶ್ಚರ್ಯವೇನಿಲ್ಲ. ಇಷ್ಟವಿದ್ದರೆ ಈಗಲೇ ನಿವೇಶನಕ್ಕೆ ಒಂದು ಅರ್ಜಿ ಹಾಕಿ!! ನಿಮ್ಮ ಮುಂದಿನ ಪೀಳಿಗೆಗೆ ಆದೀತು!

(ಕೆಲವು ಮಾಹಿತಿಗಳ ಆಧಾರ: space.alglobus.net
ಹೆಚ್ಚಿನ ಮಾಹಿತಿ ಹಾಗು ಸಧ್ಯದ ಸಂಶೋಧನೆಯ ವಿಚಾರಗಳ ಮಾಹಿತಿಗೆ ಭೇಟಿ ಕೊಡಿ: space.alglobus.net )

## ಕವನ



ವಿ.ಪ್ರಸನ್ನ ಕುಮಾರ್

### ಬಂದಿತೊ ಸಂಕ್ರಾಂತಿ

ಆರಂಭ ಈದಿನ ಪುಣ್ಯಕಾಲದ ಉತ್ತರಾಯಣ
ಆನಂದದಿ ಕಟ್ಟೋಣ ಬಾಗಿಲಿಗೆ ತೋರಣ
ಸಂಭ್ರಮದಿಂದಿರಲು ಬೇಕೆ ಬೇರೆ ಕಾರಣ
ಸಂಕ್ರಾಂತಿ ಹಬ್ಬವನು ಕೂಡಿ ಆಚರಿಸೋಣ

ರುಚಿಯಾದ ಎಳ್ಳು ಬೆಲ್ಲವ ಸವಿಯೋಣ
ಸೊಗಸಾದ ಸಿಹಿಯಾದ ಮಾತುಗಳ ಆಡೋಣ
ನೀಡುತೆಲ್ಲೆಡೆ ಪ್ರೀತಿ ಪ್ರೇಮದ ಹೂರಣ
ಜೀವನದ ಗುರಿಯನ್ನು ಮುಟ್ಟಲಿಕೆ ಸಾಗೋಣ

ನಿನ್ನೆಯ ಕಹಿ ಪುಟಗಳ ಮುಚ್ಚೋಣ
ನಾಳಿನ ಸಿಹಿ ಅಧ್ಯಾಯಗಳ ತೆರೆಯೋಣ
ಸ್ನೇಹ ಪ್ರೀತಿ ಸಹನೆಯ ತೋರೋಣ
ಸುಂದರ ಬಾಳಿದು ಶಾಂತಿಯಲಿ ನಡೆಸೋಣ

ಗುರು, ದೇವ, ಹಿರಿಯರಲಿ ನಿತ್ಯ ಬೇಡೋಣ
ಕರುಣಿಸಿರಿ ನಮಗೆಲ್ಲ ಸಂಯಮ ಸದ್ಗುಣ
ನಡೆಸಿರೆಮ್ಮನು ನಿತ್ಯ ಸುಲಭವಾಗಿಸಿ ಪಯಣ
ಸುಖಬಾಳಿಗೆ "ಸಂತೃಪ್ತಿ" ಆಗಲೆಮಗೆ ಪ್ರೇರಣ


Copyright © KCO – Brindavana




***೪. 'The Void and The Womb' ಮತ್ತು 'Beyond Words' ಎಂಬ ವಿಶಿಷ್ಟ ಅನುವಾದಗಳು ನಿಮ್ಮ ಲೇಖನಿಯಿಂದ ಮೂಡಿ ಬಂದಿವೆ. ಜೊತೆಗೆ ಆಂಗ್ಲ ಬರಹಗಳನ್ನು 'ಭಾಷೆಯಿಂದ ಭಾಷೆಗೆ' ಸಂಕಲನದಲ್ಲಿ ಕನ್ನಡಕ್ಕೆ ತಂದಿದಿರಿ. ಈ ಅನುವಾದಗಳನ್ನು ಮಾಡುವಾಗ ಬಂದೆರುಗಿದ ಸವಾಲುಗಳೇನು?***

ಕನ್ನಡದ ಉತ್ತಮ ಕೃತಿಗಳು ಕನ್ನಡೇತರರಿಗೆ ತಿಳಿಯಬೇಕಾದರೆ, ಅವುಗಳ ಭಾಷಾಂತರ ಅತ್ಯಗತ್ಯ. ಕನ್ನಡದ ಕೃತಿಗಳು ಇತರ ಭಾರತೀಯ ಭಾಷೆಗಳಿಗೆ ಅನುವಾದವಾಗುವಷ್ಟು ಇಂಗ್ಲಿಷ್ ಭಾಷೆಗೆ ಆಗುತ್ತಿಲ್ಲವೆಂಬುದು ಖೇದದ ಸಂಗತಿ. ಒಂದು ಭಾಷೆಯಿಂದ ಮತ್ತೊಂದು ಭಾಷೆಗೆ ಅನುವಾದಿಸುವುದು ಸುಲಭವಲ್ಲ. ಅದರಲ್ಲೂ ಭಾರತೀಯ ಸಂವೇದನೆಗಳನ್ನು ಇಂಗ್ಲಿಷ್ ನಲ್ಲಿ ಅಳವಡಿಸುವುದು ಅನೇಕವೇಳೆ ಕಷ್ಟವಾಗುತ್ತದೆ. ಅದರಲ್ಲೂ ಕವನವಂತೂ ಕನ್ನಡದಿಂದ ಇಂಗ್ಲಿಷ್ ಗೆ ಮಾರ್ಪಟ್ಟಾಗ ತನ್ನ ಅಂತರಾತ್ಮವನ್ನೇ ಕಳೆದುಕೊಳ್ಳುವ ಸಾಧ್ಯತೆಯಿದೆ. ನಾನು ಅನುವಾದಿಸಿದ ಕವಿಯೊಬ್ಬರು ನನ್ನ ಅನುವಾದನ್ನು ಮೆಚ್ಚುತ್ತಲೇ ಹೀಗೊಂದು ಪ್ರಶ್ನೆಯೆತ್ತಿದರು: "ಕನ್ನಡ ಬಲ್ಲವರಿಗೆ ಈ ಅನುವಾದದ ಅಗತ್ಯವಿಲ್ಲ, ಕನ್ನಡ ಬಾರದವರಿಗೆ ಇದು ಅರ್ಥವಾಗುವುದಿಲ್ಲ, ಹಾಗಿದ್ದಾಗ ಕವನಗಳನ್ನು ಏಕೆ ಅನುವಾದಿಸಬೇಕು?" ಈ ಅಭಿಪ್ರಾಯವನ್ನೇ ಎಲ್ಲ ಅನುವಾದಕರೂ ಅನುಸರಿಸಿದರೆ, ಒಂದು ಭಾಷೆಯ ಸಾಹಿತ್ಯದ ಸೌಂದರ್ಯ ಮತ್ತೊಂದು ಭಾಷೆಯ ಸಾಹಿತ್ಯ ಪ್ರೇಮಿಗಳಿಗೆ ದೊರಕುವುದಾದರೂ ಹೇಗೆ? ಸಮಾಧಾನದ ಸಂಗತಿಯೆಂದರೆ, ನನ್ನ ಆಂಗ್ಲ ಅನುವಾದವನ್ನೋದಿದ ಕೆಲವರು, "ಮೂಲ ಕನ್ನಡ ಕವಿತೆಯ ಅರ್ಥ ನನಗೆ ಈಗ ಚೆನ್ನಾಗಿ ತಿಳಿಯಿತು, ಹೊಸ ಹೊಸ ಸಾಧ್ಯತೆಗಳನ್ನು ತೋರಿಸಿಕೊಟ್ಟಿತು, ಮೂಲ ಮತ್ತು ಅನುವಾದ ಎರಡನ್ನೂ ಒಟ್ಟಾಗಿ ಅಧ್ಯಯನ ಮಾಡಿದರೆ ಸೊಗಸು ಇಮ್ಮಡಿಗೊಳ್ಳುತ್ತದೆ" ಮುಂತಾಗಿ ಹೇಳಿದವರೂ ಇದ್ದಾರೆ!

ಎರಡೂ ಭಾಷೆಗಳಲ್ಲಿ ಸಾಕಷ್ಟು ಪಾಂಡಿತ್ಯವಿಲ್ಲದಿದ್ದರೆ ಅನುವಾದ ಸಪ್ಪೆಯಾಗುತ್ತದೆ, ಇದು ಮೂಲಕ್ಕೂ ಅನ್ಯಾಯ ಮತ್ತು ಅನುವಾದಗೊಂಡ ಭಾಷೆಗೂ ವಂಚನೆಯಾಗುತ್ತದೆ. ದಿವಾಣಜಿಯವರ "ಬಯಲು ಬಸಿರು" ಕಾದಂಬರಿಯನ್ನು "The Void and the Womb" ಎಂಬ ಹೆಸರಿನಲ್ಲಿ ಆಂಗ್ಲಕ್ಕೆ ರೂಪಾಂತರಿಸುವಾಗ ಸಾಕಷ್ಟು ಸವಾಲುಗಳನ್ನು ಎದುರಿಸಬೇಕಾಯಿತು. ಅದು ನನ್ನ ಮೊದಲ ಗಮನಾರ್ಹ ಪ್ರಯತ್ನ, ಹಾಗಾಗಿ ಅನುಭವವಿಲ್ಲದೇ ಹಲವು ರೀತಿಯಲ್ಲಿ ತಿಣುಕಬೇಕಾಯಿತು. ನಾನು ಅನುವಾದವನ್ನು ಮುಗಿಸಿದಾಗ ದಿವಾಣಜಿ ಅವರು ಹಾಸಿಗೆ ಹಿಡಿದಿದ್ದರು ಮತ್ತು ಹೊರ ಪ್ರಪಂಚದ ಅರಿವನ್ನೇ ಕಳೆದುಕೊಂಡಿದ್ದರು! ಅವರು ನನ್ನ ಅನುವಾದವನ್ನು ಓದಿ ಅಭಿಪ್ರಾಯ ತಿಳಿಸುವುದು ಅಸಾಧ್ಯವಾಗಿತ್ತು, ಅವರ ಸೋದರರು ಅನುವಾದವನ್ನು ಮೆಚ್ಚಿಕೊಂಡರು. ಭಾರತದಲ್ಲಿ ಅದನ್ನು ಪ್ರಕಟಿಸಲು ಅವರು ಮಾಡಿದ ಪ್ರಯತ್ನಗಳು ವ್ಯರ್ಥವಾದವು, ಹೀಗಾಗಿ "iUniverse" ಎಂಬ ಸ್ವಪ್ರಕಾಶನದ ಸಂಸ್ಥೆಯ ಮೂಲಕ ಪುಸ್ತಕವನ್ನು ಪ್ರಕಟಿಸಿದೆ. ಇಂಥ ಯತ್ನಗಳಿಗೆ ಕರ್ನಾಟಕದಲ್ಲಿ ಮತ್ತು ಅಮೆರಿಕದಲ್ಲಿ ದೊರಕಬೇಕಾದ ಉತ್ತೇಜನ, ಪ್ರಚಾರ, ಮಾನ್ಯತೆ ಅಥವಾ ಗುರುತಿಸುವಿಕೆ ದೊರಕುತ್ತಿಲ್ಲವೆಂಬುದು ನನ್ನ ವ್ಯಥೆಗಳಲ್ಲೊಂದು. ಇರಲಿ, ಇದು ಅಮೆರಿಕದಲ್ಲಿರುವ ಅನೇಕ ಕನ್ನಡ ಬರಹಗಾರರ ವ್ಯಥೆಯೂ ಹೌದು!

"Beyond Words" ಕನ್ನಡ ಕವಿತೆಗಳ ಆಂಗ್ಲ ಅನುವಾದ. ಈ ಕೆಲಸಕ್ಕೆ ಕೈಹಾಕಿದಾಗ ನಾನು ಎದುರಿಸ ಹೊರಟ ಸವಾಲಿನ ಬಗ್ಗೆ ನನಗೇ ಅರಿವು ಇರಲಿಲ್ಲ. ಡಿವಿಜಿ ಅವರಿಂದ ಹಿಡಿದು ಇಂದಿನ ವರೆಗೆ ಹಲವಾರು ಹಿರಿಯ ಮತ್ತು ಕಿರಿಯ ವಿವಿಧ ಶೈಲಿಯ ವಿವಿಧ ಚಿಂತನೆಯ ಕವಿತೆಗಳನ್ನು ಆಯ್ಕೆ ಮಾಡುವುದರಲ್ಲಿ ಮಿತ್ರರಾದ ಕವಿ ಎಚ್ಚೆಸ್ವಿ ಅವರು ಸಹಾಯಮಾಡಿದರು. ಅನೇಕ ಕವಿತೆಗಳ ಅನುವಾದದ ಬಗ್ಗೆ ಒಳ್ಳೊಳ್ಳೆಯ ಅಭಿಪ್ರಾಯಗಳು ಬಂದವು. ಎಚ್ಚೆಸ್ವಿ ಅವರ ನೀಳ್ಗವನ "ಉತ್ತರಾಯಣ"ದ ಅನುವಾದ ಎಲ್ಲಕ್ಕಿಂತ ಕಠಿಣವೆನ್ನಿಸಿತು, ಆದರೆ ಮೂಲದ ಕವಿಯೇ ಭಾಷಾಂತರವನ್ನು ಮೆಚ್ಚಿದಾಗ ಮನಸ್ಸಿಗೆ ಆದ ಆನಂದಕ್ಕೆ ಮಿತಿಯೇ ಇರಲಿಲ್ಲ. ಅಕಾಲದಲ್ಲಿ ತೀರಿಕೊಂಡ ತಮ್ಮ ಮಡದಿಯನ್ನೇ ವಸ್ತುವಾಗಿಟ್ಟುಕೊಂಡು ಎಚ್ಚೆಸ್ವಿ ಅವರು ಈ ವಿಶಿಷ್ಟ ಕವನದಲ್ಲಿ ಮೃತ್ಯುವಿನೊಂದಿಗೆ ಸಂವಾದ ನಡೆಸಿದ್ದಾರೆ, ಗಂಡಹೆಂಡಿರ ಪ್ರೇಮದ ಆಂತರ್ಯದ ಬಗ್ಗೆ ಮನೋಜ್ಞವಾಗಿ ಜಿಜ್ಞಾಸೆಮಾಡಿದ್ದಾರೆ, ದಾಂಪತ್ಯಜೀವನದ ಬಗ್ಗೆ ಅತ್ಯಂತ ಆತ್ಮೀಯವಾಗಿ ಬರೆದಿದ್ದಾರೆ, ದಾರುಣತೆಯಿಂದ ಕಣ್ಣೀರಿಟ್ಟಿದ್ದಾರೆ, ಮರಣೋತ್ತರ ಕ್ರಿಯೆಗಳ ನಡುವೆಯೂ ಇಡೀ ವೈವಾಹಿಕ ಜೀವನದ ಮಧುರ ನೆನಪುಗಳನ್ನು ಅನುಭವಿಸಿ ಅತ್ತಿದ್ದಾರೆ, ನಕ್ಕಿದ್ದಾರೆ, ವಿಸ್ಮಯಗೊಂಡಿದ್ದಾರೆ, ಪತ್ನಿಯನ್ನು ಬೀಳ್ಕೊಡುತ್ತಾ ಕಾಳಿದಾಸನ ಮೇಘದೂತದ ಯಕ್ಷನಂತೆ ವಿರಹವನ್ನನುಭವಿಸಿದ್ದಾರೆ. ಇಂಥ ಅಪ್ಪಟ ಭಾರತೀಯ ಆಪ್ತ ಭಾವನೆಗಳನ್ನು ಇಂಗ್ಲಿಷ್ ಭಾಷೆಯಲ್ಲಿ ಅಭಿವ್ಯಕ್ತಿಗೊಳಿಸುವಾಗ ಎಷ್ಟು ತಿಣುಕಿದೆನೆಂದು ಮತ್ತೆ ಹೇಳಬೇಕಿಲ್ಲ. ಇಡೀ ಅನುವಾದ ಮುಗಿದಾಗ ನನಗೆ '೧೦೫ ಡಿಗ್ರೀ ಜ್ವರ ಇಳಿದು ಬೆವತು ಒದ್ದೆಯಾಗಿ ಎಚ್ಚರಗೊಂಡ' ಅನುಭವವಾಯಿತು. ತಕ್ಷಣ ಎಚ್ಚೆಸ್ವಿ ಅವರಿಗೆ ವಿ-ಅಂಚೆ ಮೂಲಕ ಕಳಿಸಿಕೊಟ್ಟೆ. ತಲುಪಿದ ಕೂಡಲೇ ಅದನ್ನೋದಿ ಭಾವುಕರಾಗಿ ಕಣ್ಣೀರಿಟ್ಟ ಎಚ್ಚೆಸ್ವಿ ಅವರ ದೂರವಾಣಿ, ಅವರ ಗದ್ಗದ ಕಂಠದಿಂದ ಬಂದ ಮೆಚ್ಚುಗೆಯ ಮಾತುಗಳು, ಇನ್ನೂ ಕಿವಿಯಲ್ಲೇ ಇವೆ. ವಿಚಿತ್ರವೆಂದರೆ ಅನುವಾದವನ್ನೋದಿ ಅವರಿಗೆ ಮರುಕಳಿಸಿದ ದುಃಖದಿಂದ ನನಗೆ ದೊರೆತ ಸುಖವನ್ನು ನಾನೆಂದೂ ಮರೆಯಲಾರೆ. ಅವರಿಗೆ ದುಃಖವನ್ನುಂಟುಮಾಡಿದೆನೆಂದಲ್ಲ, ಅವರು ಮತ್ತೊಮ್ಮೆ ತಮ್ಮ ಕವನದ ಮರುಹುಟ್ಟನ್ನು ಮತ್ತೊಂದು ಭಾಷೆಯಲ್ಲಿ ಅನುಭವಿಸಿ ಸುಖಿಸಿದ್ದರಲ್ಲ ಎಂದು!

ಕನ್ನಡದಿಂದ ಇಂಗ್ಲಿಷಿಗೆ ಅನುವಾದ ಮಾಡುವುದಕ್ಕಿಂತ ಇತರ ಭಾಷೆಗಳಿಂದ ಕನ್ನಡಕ್ಕೆ ರೂಪಾಂತರಿಸುವುದು ಕಡಿಮೆ ಕಷ್ಟ ಕೊಡುವ ಸವಾಲು ಎಂಬುದು ನನ್ನ ಅನುಭವ. "ಭಾಷೆಯಿಂದ ಭಾಷೆಗೆ"ಯಲ್ಲಿ ಆಂಗ್ಲದಿಂದ ಕನ್ನಡಕ್ಕೆ ಅನುವಾದ ಮಾಡುವಾಗ ಸವಾಲುಗಳಿದ್ದರೂ ಕನ್ನಡದಿಂದ ಇಂಗ್ಲಿಷ್ ಭಾಷೆಗೆ ಮಾಡುವಾಗಾದಷ್ಟು ಕಷ್ಟವೆನಿಸಲಿಲ್ಲ. ಭಾರತಕ್ಕೆ ಹೊರಗಿನ ಭಾಷೆಗಳಲ್ಲಿನ ಸೊಬಗನ್ನು ಕನ್ನಡಕ್ಕಿಳಿಸಿ ಅದು ಕನ್ನಡಕ್ಕೆ ಸ್ವಂತದ್ದೆನಿಸುವಂತೆ ಮಾಡಬೇಕೆಂಬುದೇ ನನ್ನ ಬಯಕೆಯಾಗಿತ್ತು. ಅನುವಾದವನ್ನೋದಿದ ಹಲವಾರು ಸಹೃದಯಿಗಳು ಅನುವಾದಿತ ಕವಿತೆಗಳು ಕನ್ನಡದ್ದೇ ಅನಿಸುತ್ತವೆ ಎಂದಾಗ ಮನಸ್ಸಿಗೆ ಸಂತೋಷವಾಯಿತು. ನಮ್ಮ ಕಣ್ಣಿಗೆ ಬಿದ್ದ ಅನ್ಯ ಭಾಷೆಯ ಅನರ್ಘ್ಯ ರತ್ನಗಳನ್ನು ನಮ್ಮ ಓದುಗರಿಗೆ ತಲುಪಿಸುವುದರಲ್ಲೂ ಒಂದು ಅನನ್ಯ ಆನಂದವಿದೆ. ಹೊರನೋಟಕ್ಕೆ ಪರಕೀಯ ಎನ್ನಿಸಬಹುದಾದ ಸಂದರ್ಭಗಳನ್ನು, ಸಂವೇದನೆಗಳನ್ನು ನಮ್ಮದಾಗಿಸಿಕೊಳ್ಳುವಾಗ ವಿಶೇಷವಾದ ಸಂತೋಷ ದೊರಕುತ್ತದೆ, ಏಕೆಂದರೆ ಕನ್ನಡಕ್ಕೆ ಅನುವಾದಿಸಿದರೆ ಸಾಲದು, ಮೂಲದಲ್ಲಿರುವ ಅನುಭವವನ್ನು ಕನ್ನಡೀಕರಿಸಬೇಕಾಗುತ್ತದೆ! ಪರಭಾಷೆ ಬಾರದವರೂ ಅದನ್ನು ಸ್ವಂತ ಕನ್ನಡದ ರಚನೆಯೆಂದೇ ಅನುಭವಿಸುವಂತೆ ಮಾಡಿದಾಗಳಾಗುವ ಪುಳಕ ಅಸಾಧಾರಣವಾದುದು.

**(ಮುಂದಿನ ಪುಟಕ್ಕೆ...)**


Copyright © KCO – Brindavana

# ಬೃಂದಾವನ ವಾಣಿ

ಬೃಂದಾವನ ಕನ್ನಡ ಕೂಟ, ನ್ಯೂಜೆರ್ಸಿಯ ದ್ವೈಮಾಸಿಕ ಪತ್ರಿಕೆ




***೫. ತಾವು ಅರವತ್ತರ ದಶಕದಲ್ಲಿಯೇ ಅಮೆರಿಕೆಗೆ ವಲಸೆ ಬಂದವರು. ಅಮೆರಿಕಾ ಮತ್ತು ಭಾರತಗಳಲ್ಲಿ ಈ ಐವತ್ತು ವರ್ಷಗಳಲ್ಲಿ ನಡೆದ ಬದಲಾವಣೆಗಳ ಬಗೆಗೆ ನಿಮ್ಮ ಅಭಿಪ್ರಾಯವೇನು?***

ಈ ಪ್ರಶ್ನೆಗೆ ಸುಲಭವಾಗಿ ನಾಲ್ಕೇ ಮಾತುಗಳಲ್ಲಿ ಉತ್ತರಕೊಡಲಾಗುವುದಿಲ್ಲ. ನಾಲ್ಕೈದು ದಶಕಗಳಲ್ಲಿ ಕೆಲವು ದೇಶಗಳೇ ಭೂಪಟದಿಂದ ಮಾಯವಾಗುತ್ತವೆ, ಹೊಸ ದೇಶಗಳು ಹುಟ್ಟಿಕೊಳ್ಳುತ್ತವೆ. ನಾನು ಪಿಟ್ಸ್‌ಬರ್ಗಿನಲ್ಲಿ ಡಾಕ್ಟರೇಟ್ ವಿದ್ಯಾರ್ಥಿಯಾಗಿದ್ದಾಗ ಪಾಕಿಸ್ತಾನ ಇಬ್ಭಾಗವಾಗಿ ಬಾಂಗ್ಲಾದೇಶ ಹುಟ್ಟಿಕೊಂಡಿತು. ಕೆಲ ವರ್ಷಗಳ ಹಿಂದೆ ಸೋವಿಯತ್ ಒಕ್ಕೂಟ ಒಡೆದುಹೋಯಿತು, ಇದೀಗ ಯೂರೋಪಿಯನ್ ಒಕ್ಕೂಟ ಒಡೆಯುವುದರಲ್ಲಿದೆ! ಪಾಕಿಸ್ತಾನ ಮತ್ತೆ ಛಿದ್ರವಾಗಬಹುದು ಎಂದು ಕೆಲವರ ಅಭಿಪ್ರಾಯ. ಕಾಶ್ಮೀರವನ್ನು ಹೇಗಾದರೋ ಮಾಡಿ ಭಾರತದಿಂದ ಬೇರ್ಪಡಿಸಬೇಕೆಂಬ ಹಂಬಲ ಹಲವು ದೇಶಗಳಿದೆ. ಒಂದೇ ಎರಡೇ? ಮೊಟ್ಟ ಮೊದಲ ಕರಿಯ ವರ್ಣದವನೊಬ್ಬ ಅಮೆರಿಕದ ಅಧ್ಯಕ್ಷನಾದದ್ದೇನು ಸಣ್ಣ ವಿಕ್ರಮವೇ, ಈ ದೇಶದಲ್ಲಿ? ಇನ್ನೇನು ಮಹಿಳೆಯೊಬ್ಬಳು ಅಮೆರಿಕದ ಅಧ್ಯಕ್ಷೆಯಾಗೇ ಬಿಟ್ಟಳೆಂದು ನಂಬಿದ್ದೆವು, ಆದರೆ ಅಮೆರಿಕನ್ನರು ಆ ವಿಷಯದಲ್ಲಿ ಯುಕೆ, ಜರ್ಮನಿ, ಇಸ್ರೇಲ್, ಅರ್ಜೆಂಟೀನಾ, ಇಂಡಿಯ, ಪಾಕಿಸ್ತಾನ, ಬಾಂಗ್ಲಾದೇಶ, ಫಿಲಿಪೀನ್ಸ್, ಶ್ರೀಲಂಕಾ ಮೊದಲಾದ ದೇಶಗಳಿಗಿಂತ ಹಿಂದುಳಿದ ದೇಶವಾಗಿಬಿಟ್ಟಿತು! ಆ ಮಾತು ಬದಿಗಿರಲಿ.

ಇತ್ತೀಚೆಗೆ ಬೆಂಗಳೂರಿನಲ್ಲಿ ಕೆಲವು ಬಡಾವಣೆಗಳಲ್ಲಿ ಓಡಾಡಿದಾಗ ಯಾವುದೋ ಪರಿಚಯವಿಲ್ಲದ ದೇಶವೊಂದರಲ್ಲಿ ಓಡಾಡುತ್ತಿರುವ ವಿಚಿತ್ರ ಅನುಭವವಾಗುವಷ್ಟು ಅಲ್ಲಿ ಬದಲಾವಣೆಗಳಾಗಿವೆ. ಕನ್ನಡವೇ ಸಂಪೂರ್ಣವಾಗಿ ಮಾಯವಾಗಿಬಿಟ್ಟಿರುವ ಹಲವು ಭಾಗಗಳು ಬೆಂಗಳೂರಿನಲ್ಲಿವೆ. ಅಮೆರಿಕದಲ್ಲಿ ಸಹ ನಾವು ಬಂದಾಗಿನ ಸ್ಥಿತಿಗತಿಗಳಿಗಿಂತ ವಿಭಿನ್ನವಾದ ಪರಿಸ್ಥಿತಿಯುಂಟಾಗಿದೆ. ಈ ದೇಶಕ್ಕೆ ವಿದ್ಯಾರ್ಥಿಯಾಗಿ ಬಂದಾಗ, ಪ್ರತಿಮನೆಯಲ್ಲೂ ದೂರವಾಣಿ ಮತ್ತು ಕಾರುಗಳನ್ನು ಕಂಡು ದಿಗ್ಭ್ರಮೆಯಾಗುತ್ತಿತ್ತು. ಈಗ ಬೆಂಗಳೂರಿನಲ್ಲಿ ಎಲ್ಲರ ಮನೆಯಲ್ಲೂ, ಎಲ್ಲರ ಕೈಯಲ್ಲೂ ಮೊಬೈಲ್ ಫೋನುಗಳು, ಪ್ರತಿ ಮನೆಯಲ್ಲಿ ಒಂದೆರಡು ಕಾರುಗಳು ಕಾಣುತ್ತವೆ. ಅಲ್ಲಿಯೂ ಊಬರ್, ಮೆಟ್ರೋ ಎಲ್ಲ ಬಂದಿದೆ. ಹಣವನ್ನು ನಮಗಿಂತ ಧಾರಾಳವಾಗಿ (ನೀರಿನಂತೆ) ಖರ್ಚುಮಾಡುವ ಅಲ್ಲಿಯ ಜನರನ್ನು ಕಂಡು ಡಾಲರ್ ಇಟ್ಟುಕೊಂಡಿದ್ದರೂ ನಾವೇ ಬಡವರೋ ಎಂಬ ಕೀಳರಿಮೆ ಬರುತ್ತದೆ! ಒಂದು ಡಾಲರಿಗೆ ಐದು ರುಪಾಯಿ ಇದ್ದದ್ದು ಈಗ ಎಪ್ಪತ್ತಾಗಿದೆ, ಇದನ್ನು ಒಳ್ಳೆಯ ಬದಲಾವಣೆಯೆಂದು ತಿಳಿಯಬೇಕೋ ಬೇಡವೋ ಗೊತ್ತಾಗುತ್ತಿಲ್ಲ. ನೂರಾರು ಟಿವಿ ಚ್ಯಾನಲ್ಲುಗಳು ನಡೆಸುವ ನೂರೆಂಟು ಕಾರ್ಯಕ್ರಮಗಳ ನಡುವೆ ಭಾರತದಲ್ಲಿ ಮನುಷ್ಯ-ಮನುಷ್ಯರ ನಡುವಿನ ಸಂಬಂಧಗಳು ಟಿವಿಯಲ್ಲಿ ನಡೆಯುವ ಸೀರಿಯಲ್ಲುಗಳಲ್ಲಿ ಮಾತ್ರ ಉಳಿದಿದೆಯೋ ಎಂಬ ಭ್ರಮೆ ಉಂಟಾಗುತ್ತದೆ. ಸಿನಿಮಾ, ನಾಟಕ, ಸಂಗೀತ ಮುಂತಾದ ಕ್ಷೇತ್ರಗಳಲ್ಲೂ ಸಾಕಷ್ಟು ಬದಲಾವಣೆಗಳು ಆಗಿವೆ, ಕೆಲವು ಒಳ್ಳೆಯವು ಇನ್ನು ಕೆಲವು ಅಷ್ಟೇನೂ ಒಳ್ಳೆಯವು ಅನ್ನಿಸುವುದಿಲ್ಲ. ಉಳ್ಳವರ ಮತ್ತು ದರಿದ್ರರ ನಡುವಿನ ಅಂತರವೂ ಇಲ್ಲೂ ಅಲ್ಲೂ ಹೆಚ್ಚಾಗಿದೆ. ಅಲ್ಲೂ ಇಲ್ಲೂ ಬಲಪಂಥ-ಎಡಪಂಥ, ಕನ್ಸರ್ವೇಟಿವ್-ಲಿಬರಲ್ ಮುಂತಾದ ಜಗಳಗಳು ಹೆಚ್ಚಾಗುತ್ತಿವೆ. ರಾಜಕೀಯವಾಗಿ ಎರಡೂ ದೇಶಗಳು ಸಾಕಷ್ಟು ಸವಾಲುಗಳನ್ನು ಎದುರಿಸುತ್ತಿವೆ. ಮಾಧ್ಯಮಗಳು ಮಾಡಬಹುದಾದ ಅಪಾಯಗಳು ಎರಡೂ ದೇಶಗಳಲ್ಲಿ ಹೆಚ್ಚುತ್ತಿವೆ. ಟ್ವಿಟರ್, ಫೇಸ್ಬುಕ್ ಮುಂತಾದ ಸಾಮಾಜಿಕ ಮಾಧ್ಯಮಗಳು, ಅವುಗಳ ಮೂಲಕ ವ್ಯಕ್ತವಾಗುವ ದ್ವೇಷ ಎರಡೂ ದೇಶಗಳಲ್ಲಿ ಭಯಾನಿಕವೆನ್ನಿಸುತ್ತಿದೆ (ಟ್ರೋಲ್ ಎಂಬ ಶಬ್ದ ಯಾರಿಗೆ ತಾನೇ ಗೊತ್ತಿತ್ತು?). ಭಾರತದಲ್ಲಿ ಲೈಂಗಿಕ ಉಚ್ಛೃಂಖಲತೆ ಅಪಾಯಕಾರೀ ಮಟ್ಟವನ್ನು ಮುಟ್ಟುತ್ತಿರುವಂತೆ ಅನಿಸುತ್ತಿದೆ, ವಿವಾಹಪೂರ್ವ ಸಂಬಂಧಗಳು, ಅನೌಪಚಾರಿಕ 'ಕೂಡಿಕೆ'ಗಳು, ಒಟ್ಟಿಗಿರುವಿಕೆ, ಸಲಿಂಗರತಿ, ಹೀಗೆ ಸಾಂಪ್ರದಾಯಿಕ ಸಾಮಾಜಿಕ ಮೌಲ್ಯಗಳಲ್ಲಿ ವಿಪ್ಲವ ನಡೆಯುತ್ತಿದೆ. ಮುಂಚೆಯೂ ಇತ್ತು, ಗುಪ್ತವಾಗಿತ್ತು, ಈಗ ಟಿವಿಯಲ್ಲಿ ನಡೆಯುವ ಚರ್ಚೆಗಳಿಂದ ಎಲ್ಲ ಬಹಿರಂಗವಾಗಿವೆ. ಹೆಣ್ಣಿನ ಮೇಲೆ ಆಕ್ರಮಣ ಹೆಚ್ಚಾಗಿದೆಯೋ ಅಥವಾ ಟಿವಿಯಲ್ಲಿ ವರದಿಯಾಗುವ ಕಾರಣದಿಂದ ಹೆಚ್ಚಾಗಿದೆ ಅನಿಸುತ್ತೋ ಹೇಳಲಾಗದು. ಭಾರತದಲ್ಲಿ ಪಶ್ಚಿಮದ ಅಣಕವಾಡುವಿಕೆ ಎಂದಿನಂತೆ ಮುಂದುವರೆದಿದೆ. ಜಾತೀಯತೆ ಲಂಗುಲಗಾಮಿಲ್ಲದೇ ಮುಂದುವರೆದಿದೆ. ತಮ್ಮದೆಂದು ಹೆಮ್ಮೆಪಟ್ಟುಕೊಳ್ಳುವಂಥ ಅನೇಕ ವಿಷಯಗಳಿದ್ದಾಗ್ಯೂ ಎಲ್ಲವನ್ನೂ ಸಾರಾಸಗಟು ಟೀಕಿಸುವುದನ್ನೇ ಫ್ಯಾಷನ್ನಾಗಿಸಿಕೊಂಡವರ ಸಂಖ್ಯೆ ಬೆಳೆಯುತ್ತಿದೆ.ಅಮೆರಿಕದಲ್ಲಿ ಹೊರಗಿನವರನ್ನು ತಮ್ಮವರಾಗಿಸಿಕೊಳ್ಳುವುದರಲ್ಲಿ ಹಿಂದೊಮ್ಮೆ ಇದ್ದ ಉತ್ಸಾಹ ಈಗ ಇದ್ದಂತಿಲ್ಲ, ಇಂದಿನ ಅಮೆರಿಕದ ಎಲ್ಲ ಅನಿಷ್ಟಗಳಿಗೂ ವಲಸಿಗರೇ ಕಾರಣ ಎಂಬ ಧೋರಣೆ ಅನೇಕರಲ್ಲಿ ಬೆಳೆದಿದೆ. ಮೋದಿಯ ನಾಯಕತ್ವದ ಭಾರತ ಮತ್ತು ಟ್ರಂಪ್ ನಾಯಕತ್ವದ ಅಮೆರಿಕ ಒಟ್ಟಾಗಿ ಸಾಧಿಸಬಹುದಾದ್ದು ಸಾಕಷ್ಟಿದೆ, ಎಂದು ಕೆಲವರ ಅಂಬೋಣ. ಆದರೆ ಎರಡೂ ದೇಶಗಳ ಆಂತರಿಕ ಸಮಸ್ಯೆಗಳಿಂದಾಗಿ ಪರಸ್ಪರ ಸಹಕಾರ ಸಾಧ್ಯವಾಗುವುದೋ ಇಲ್ಲವೋ ಆ ದೇವರೇ ಬಲ್ಲ! ಟ್ರಂಪ್ ನಡವಳಿಕೆ ಮತ್ತು ಅವನ ಟ್ವೀಟ್ ಮಾಡುವ ಚಟ ಭಯವನ್ನುಂಟುಮಾಡುತ್ತವೆ. ಆತ ಅಮೆರಿಕವನ್ನು "ಮಹಾನ್" ಮಾಡಲು ಹೊರಟಿದ್ದಾನೆ, ಆದರೆ ಒಬಾಮ ಮಾಡಿದ್ದನ್ನೆಲ್ಲಾ ಒಡೆದು ಹಾಕಿ ದೇಶಗಳ ನಡುವೆ ಗೋಡೆ ಕಟ್ಟುವ ಮಹಾನ್ ಧ್ಯೇಯವೇ ಎಲ್ಲಕ್ಕಿಂತ ಮುಖ್ಯವೆಂದು ಬಗೆದಿರುವಂತಿದೆ.ಭಾರತವೂ "ಮೇರಾ ಭಾರತ್ ಮಹಾನ್" ಎಂದು ಘೋಷಣೆಗಳನ್ನು ಕೂಗುತ್ತಲೇ ಇದ್ದರೂ ಇನ್ನೂ ನಿಜವಾಗಿ ಮಹಾನ್ ಆದಂತೆ ಕಾಣುತ್ತಿಲ್ಲ.ಅಲ್ಲಿ ಲಂಚಕೋರತನ ಎಷ್ಟರಮಟ್ಟಿಗೆ ಅಧಿಕಸಂಖ್ಯೆಯಲ್ಲಿ ಜೀವನಶೈಲಿಯ ಭಾಗವಾಗಿದೆಯೆಂದರೆ ನೆನೆಸಿಕೊಂಡೇ ನಡುಕವಾಗುತ್ತದೆ. ಆ ರೋಗವನ್ನು ಗುಣಪಡಿಸಲು ನಡೆಯುವ ಯತ್ನವನ್ನು ಸಫಲವಾಗದಂತೆ ನೋಡಿಕೊಳ್ಳುವ ರಾಜಕಾರಿಣಿಗಳೇ ಹೆಚ್ಚಾಗಿರುವಂತೆ ತೋರುತ್ತಿದೆ. ಚುನಾಯಿತ ನಾಯಕರು ಲೋಕಸಭೆ ಮುಂತಾದ ಸ್ಥಳಗಳಲ್ಲಿ ನಡೆದುಕೊಳ್ಳುವ ರೀತಿಯನ್ನು ಕಂಡು ಅಚ್ಚರಿಯಾಗುತ್ತದೆ. ವ್ಯಕ್ತಿಪೂಜೆ ಕೆಲವು ಕಡೆ ಮಿತಿ ಮೀರಿದೆ (ಉದಾ: ತಮಿಳುನಾಡಿನ ಅಮ್ಮ), ರಾಜರ ವಂಶಪಾರಂಪರ್ಯದಂತೆ ರಾಜಕಾರಣಿಗಳ ವಂಶಗಳೂ ಬೆಳೆಯುತ್ತಿವೆ (ಉದಾ: ನೆಹರೂ ಕುಟುಂಬ). ಇಂಥಾ ಕುಟುಂಬಗಳನ್ನು ಅವಿದ್ಯಾವಂತರು ಮೌಢ್ಯದಿಂದ ಪೂಜಿಸಿದರೆ ಅವರ ಹೆಸರಿನಲ್ಲಿ ಲಾಭ ಪಡೆದುಕೊಳ್ಳುವ ಅನೇಕ ವಿದ್ಯಾವಂತ ಸ್ವಾರ್ಥಿಗಳ ಸಂಖ್ಯೆಯನ್ನು ನೋಡಿದರೆ ಆಶ್ಚರ್ಯವಾಗುತ್ತದೆ. ಭಾರತ ಮತ್ತು ಭಾರತೀಯತೆಯನ್ನು ಆಂತರಿಕ ವೈರಿಗಳಿಂದಲೇ ನಾಶಮಾಡಿಸಲು ಬಾಹ್ಯಶಕ್ತಿಗಳು ನಡೆಸುತ್ತಿರುವ ಕೂಟನೀತಿಯೂ ದಿಗ್ಭ್ರಮೆಯುಂಟುಮಾಡುವ ಮಟ್ಟಕ್ಕೇರಿದೆ.

**(ಮುಂದಿನ ಪುಟಕ್ಕೆ...)**


Copyright © KCO – Brindavana

# ಬೃಂದಾವನ ವಾಣಿ

ಬೃಂದಾವನ ಕನ್ನಡ ಕೂಟ, ನ್ಯೂಜೆರ್ಸಿಯ ದ್ವೈಮಾಸಿಕ ಪತ್ರಿಕೆ




ಎಲ್ಲವೂ ನಿರಾಶಾದಾಯಕವಾಗಿಲ್ಲ. ಹೊಸ ಪೀಳಿಗೆಯಲ್ಲಿ ಆತ್ಮವಿಶ್ವಾಸ ಹೆಚ್ಚಾಗಿದೆ, ಚಿಕ್ಕ ಮಕ್ಕಳು ಹದಿಹರೆಯದವರು ಕಷ್ಟಪಟ್ಟು ಅಭ್ಯಾಸಮಾಡಿ ಪ್ರದರ್ಶಿಸುವ ಅವರ ಸಂಗೀತ, ನೃತ್ಯ ಮುಂತಾದ ಕಲೆಗಳ ಮತ್ತು ಕ್ರೀಡೆಗಳ ಪ್ರತಿಭೆ ಅಚ್ಚರಿಗೊಳಿಸುತ್ತಿದೆ. ಬಾಹ್ಯಾಕಾಶ ವಿಜ್ಞಾನದಲ್ಲಿ ಭಾರತ ಮೆಚ್ಚುವಷ್ಟು ಮುಂದುವರೆದಿದೆ. ಕೇವಲ ಇಂಜಿನಿಯರಿಂಗ್, ಮೆಡಿಸಿನ್ ಬಿಟ್ಟರೆ ಮತ್ತೊಂದಿಲ್ಲ ಎಂದು ತಿಳಿದಿದ್ದವರು ಈಗ ಇತರ ವಿಷಯಗಳ ಕಲಿಕೆಯತ್ತಲೂ ಕಣ್ಣು ಹಾಯಿಸುತ್ತಿದ್ದಾರೆ. ಸ್ಕೈಪ್, ಫೇಸ್ ಟೈಮ್, ವಾಟ್ಸ್ಯಾಪ್, ಯೂಟ್ಯೂಬ್ ಮುಂತಾದ ಸಾಧನಗಳಿಂದ ಭಾರತ ಅಮೆರಿಕಗಳ ನಡುವಿನ ಸಂವಹನ ಕ್ರಿಯೆ ಅತ್ಯಂತ ಸುಲಭವಾಗಿದೆ. ನಾವು ದೇಶವನ್ನು ಬಿಟ್ಟುಬರಲೇ ಇಲ್ಲವೇನೋ ಅನ್ನಿಸುತ್ತಿದೆ. ಅಲ್ಲಿನ ಊಟ ತಿಂಡಿ ಬಟ್ಟೆ ಬರೆ ಒಡವೆ ಪುಸ್ತಕ ಸಂಗೀತ ನಾಟಕ ಸಿನಿಮಾ ಎಲ್ಲವೂ ಇಲ್ಲೂ ಸಿಗುತ್ತಿದೆ, ಇಲ್ಲಿನ ಊಟ ತಿಂಡಿ ಬಟ್ಟೆ ಬರೆ ನಡೆ ನುಡಿ ರೀತಿ ರಿವಾಜು ಎಲ್ಲವೂ ಅಲ್ಲಿಯೂ ಬಂದಿದೆ. ಇಲ್ಲಿಂದ ಯಾವ ಎಲೆಕ್ಟ್ರಾನಿಕ್ ಗಿಫ್ಟ್ ಗಳನ್ನೂ ಅಲ್ಲಿನವರು ಬಯಸದ ನಿರಾಳದ ದಿನಗಳು ಬಂದಿವೆ. ಜಗತ್ತೇ ಒಂದು ಕುಟುಂಬದಂತಿದ್ದರೂ ಏನನ್ನೋ ಕಳೆದುಕೊಂಡ ಭಾವ ಮಾತ್ರ ಇಲ್ಲಿಗೆ ವಲಸೆ ಬಂದವರಲ್ಲಿ ಸಂಪೂರ್ಣವಾಗಿ ಮಾಯವಾಗಿಲ್ಲ!

ಕಾವ್ಯಾ ಅವರೇ, ನನ್ನನ್ನು ದಶಕಗಳ ಹಿಂದಕ್ಕೆ ಒಯ್ದು ನಮ್ಮೂರನ್ನು, ತಾಯಿನಾಡನ್ನು, ಅಲ್ಲಿ ಕಳೆದ ಬಾಲ್ಯವನ್ನು ನೆನೆಸಿಕೊಂಡು ಹಿತವಾಗಿ ಸುಖಪಡುವ ಅವಕಾಶವನ್ನು ಕಲ್ಪಿಸಿದ ನಿಮಗೂ ಇತರ ಬೃಂದಾವನವಾಸಿಗಳಿಗೂ ನಾನು ಆಭಾರಿ!

ಸಿರಿಗನ್ನಡಂ ಗೆಲ್ಗೆ!

## ನಾವು ನೋಡಿದ ಸಿನೆಮಾ



## ಕವನ



ಕೀರ್ತಿ ಮಂಜುನಾಥ

### ನೆನಪಿನ ನಿಘಂಟು

ನಾನು ಬರೀ ನಾನಾಗಿಲ್ಲ
ನಾನೊಂದು ನೆನಪಿನ ನಿಘಂಟು ॥
ಹಲವಾರು ನಂಟು
ನೂರೆಂಟು ನೆನಪು
ಬಿಡಿಸಿ ಹೇಳುವ ಪದಕೋಶ
ನನ್ನೆದೆಯಾಳದ ತುಮುಲ ಮಿಡಿತ ॥

ಅದೊಂದು ಸುಂದರ ಕವನ
ನಾ ಬೆಳೆದು ಬಂದ ಹಾದಿ
ಪದಪದವೂ ಅತಿ ಮಧುರ
ಸವಿ ಸವಿ ನೆನಪಿನ ಸಂಕಲನ ॥
ನಾನು ಬರೀ ನಾನಾಗಿಲ್ಲ
ನಾನೊಂದು ನೆನಪಿನ ನಿಘಂಟು ॥

ಮಗಳಾದೆ ಸತಿಯಾದೆ
ಬಯಸಿ ಬಯಸಿ ತಾಯಾದೆ
ಹುಡುಗಾಟದ ಕಾಲ ಕಳೆದು
ಸಂಸಾರದ ಹೊಣೆ ತಳೆದೆ ॥
ಈಗ ಮತ್ತಷ್ಟು ಹೊಸ ನಂಟು
ಮತ್ತಾರು ನೆನಪುಗಳು
ಹೊಸ ನೆನಪುಗಳ ಸರಮಾಲೆಯೂ
ಸೇರಿ ಬೆಳೆಯಿತು ನನ್ನ ನಿಘಂಟು ॥
ನಾನು ಬರೀ ನಾನಾಗಿಲ್ಲ
ನನ್ನೊಳಗಿದೆ ನೂರೆಂಟು ನಂಟು ॥

ಇವೆಲ್ಲರ ಮಧ್ಯೆ ನಾನೆಲ್ಲಿ ಅಡಗಿರುವೆ
ಕಳೆದು ಹೋದೆನೆ ನಾನು
ನಿಘಂಟಿನ ಪುಟಗಳ ನಡುವೆ ॥
ಮಗುಚಿ ಮಗುಚಿ ಹುಡುಕಿದರೂ
ಅರ್ಥ ಕಾಣದು ಮನಸಿಗೆ
ಹೃದಯ ಮಾತ್ರ ತುಂಬಿದಂತಿದೆ
ಈ ಅರ್ಥ ತಿಳಿಯದ ಭಾವುಕತೆಗೆ ॥

ಪದಗಳೇ ಹಾಗೆ .....
ಬುದ್ಧಿಗೆ ನಿಲುಕುವುದು ಒಂದಾದರೆ
ಭಾವಕ್ಕೆ ಸ್ಪಂದಿಸುವುದು ಇನ್ನೆರಡು ॥
ನಾನ್ಯಾರು ನಾನೇನು
ಈ ಪ್ರಶ್ನೆಗಳಿಗುತ್ತರ
ನನ್ನೆದೆಯಾಳದ ಮಿಡಿತಕ್ಕೆ
ಕಿವಿಗೊಟ್ಟು ಕೇಳಿದೊಡೆ
ಮತ್ತೆ ಬರುವೆನು ಅದೇ ನಿಲುವಿಗೆ ॥
ನಾನು ಬರೀ ನಾನಾಗಿಲ್ಲ
ನಾನೊಂದು ನೆನಪಿನ ನಿಘಂಟು ।

### ಖಾಲಿ ಗೂಡಿನಲ್ಲಿ ತಾಯಿ ಹಕ್ಕಿ

ಪುಟ್ಟ ಹಕ್ಕಿ ಗೂಡು ಬಿಟ್ಟು
ಹಾರಲೆಣಿಸಿದೆ
ಅದನು ತಿಳಿದ ತಾಯಿ ಹೃದಯ
ನವಿರಾಗಿ ನಡುಗುತಿದೆ ॥

ರೆಕ್ಕೆ ಬಲಿತು ಹಾರಲೇ ಬೇಕು
ಹಕ್ಕಿಗದುವೆ ಸಹಜ ಧರ್ಮ
ಎಲ್ಲ ಅರಿತೂ ಗೂಡಿನಲ್ಲೆ
ಇರಲಿ ಎನುವುದು ತಾಯ ಪ್ರೇಮ ॥

ಕಾಳು ಕೊಟ್ಟು ಬೆಚ್ಚಗಿರಿಸಿ
ಕಾದುದಾಯ್ತು ಮರಿಯನು
ಆದರೀಗ ಬೆಳೆದ ಕಂದ
ಹುಡುಕಿ ಹೊರಟಿದೆ ತನ್ನನು ॥

ಗಿಡುಗ ಬಂದು ಕಾಡಬಹುದು
ಬೇಡ ಬಾಣ ಹೂಡಬಹುದು
ಕಾಣ್ವ ಕಾಣದ ಎಲ್ಲ ಅಪಾಯ
ಮರಿಗೆ ಮುತ್ತಿಗೆ ಹಾಕಬಹುದು ॥

ಯಾಕೆ ಮಗುವೆ ಇಂಥ ಸಾಹಸ
ದುಷ್ಟರ ಹುಂಬರ ಸಹವಾಸ
ಕಲಿಕೆ ಬಾಳಿಗೆ ಒಳಿತು ಸರಿಯೆ
ಮುಂದೆ ಸಿಗುವುದು ಅವಕಾಶ
ಕೇಳು ಅಮ್ಮ ಕಲಿಯಲೆ ಬೇಕು
ಎಲ್ಲ ಗೆಲುತ ನಡೆಯಬೇಕು
ಬೆಳೆವುದಾಗ ಆತ್ಮ ವಿಶ್ವಾಸ ॥

ಬಾನಿನೆತ್ತರ ಹಾರಬಹುದು
ದೂರ ದೇಶ ನೋಡಬಹುದು
ಪ್ರಕೃತಿ ಸಿರಿಯ ಸವಿಯಬಹುದು
ಜನ್ಮ ಸಾರ್ಥಕ ಆಗಬಹುದು ॥

ನೀನೆ ಹೇಳು ಮುದ್ದಿನ ಅಮ್ಮ
ಹಾರುವುದಲ್ಲವೆ ನನ್ನಯ ಧರ್ಮ
ಹುಟ್ಟಿ ಬೆಳೆದ ಗೂಡಿನಲ್ಲೆ
ಕಡೆಯ ತನಕ ಇದ್ದು ಬಿಡೆ
ವ್ಯರ್ಥವಲ್ಲವೆ ಹಕ್ಕಿಯ ಜನ್ಮ ॥

ನಗುತ ನನ್ನ ಕಳಿಸಿಕೊಡು
ಕದವನೆಂದು ತೆರೆದೇ ಇಡು
ನನ್ನ ರೆಕ್ಕೆಗಳಡಿಯ ಶಕ್ತಿಯಾಗು
ನಾ ಮುಗಿಲು ಮುಟ್ಟಲೆಂದು ಹರಸು ॥

ರೆಕ್ಕೆಗೆದರಿ ಗಗನಕ್ಕೇರಿ
ಹಾರಿ ಹೊರತಿಟು ಪುಟ್ಟಮರಿ
ಆದನೆ ಎದುರು ನೋಡುತ ಕಾಲ ತಳ್ಳಿತು
ತಾಯಿ ಹಕ್ಕಿ ಗೂಡಲಿ.....
ಖಾಲಿ ಗೂಡಲಿ ॥


Copyright © KCO – Brindavana

## ಯುವ ವಾಣಿ



ಅನನ್ಯ ಗಿರೀಶ್

### ನ್ಯೂಯಾರ್ಕ್ ನಗರದಲ್ಲಿ ಒಂದು ದಿನ..

ನನಗೆ ನ್ಯೂಯಾರ್ಕ್ ಅಂದರೆ ಒಂದು ಬ್ರಹ್ಮಾಂಡ, ಜಗತ್ತಿನಲ್ಲಿರುವ ಎಲ್ಲಾ ದೇಶಗಳ ಜನರನ್ನು ಇಲ್ಲಿ ಕಾಣಬಹುದು. ಇಲ್ಲಿ ತಾರೆಗಳು ಉದಯಿಸುತ್ತಾರೆ. ಕನಸುಗಳು ನಿಜವಾಗುತ್ತವೆ. ಅಮೆರಿಕಾದ ಅತ್ಯಂತ ಜನನಬಿಡ ಪ್ರದೇಶ. ಪ್ರಪಂಚದಲ್ಲೇ ಅತಿ ಹೆಚ್ಚು ಗಗನಚುಂಬಿ ಕಟ್ಟಡಗಳಿರುವ ನಗರ. ಕೌತುಕ ಮತ್ತು ಕುತೂಹಲ ತುಂಬಿದ ಅದ್ಭುತ ನಗರ. ಅವಕಾಶಗಳ ಆಗರ. ಜಗತ್ತಿನ ನಾಲ್ಕುಮೂಲೆಗಳಿಂದ ಜನರು ಈ ಅಮೆರಿಕಾದ ಹೃದಯಕ್ಕೆ ಅವಕಾಶಗಳನ್ನು ಹುಡುಕಿಕೊಂಡು, ತಮ್ಮ ಮನಸ್ಸುಗಳ ತುಂಬಾ ನಂಬಿಕೆಯಿಟ್ಟು, ತಮ್ಮ ಜೀವನದ ಅರ್ಥವನ್ನು ಹುಡುಕಿಕೊಂಡು ಬರುತ್ತಾರೆ. ಆ ಪ್ರಯತ್ನದಲ್ಲಿ ತುಂಬಾ ಜನ ಸಫಲರಾಗುತ್ತಾರೆ. ಈ ವಿಸ್ಮಯಿ ನಗರಕ್ಕೆ ಯುವ ಬೃಂದಾವನ ತಂಡ ಒಂದು ದಿನದ ಪ್ರವಾಸವನ್ನು ಏರ್ಪಡಿಸಿದ್ದರು.

ಆ ದಿನದ ಕಥೆ ಹೇಳಬೇಕಂದರೆ ಅದರ ಹಿಂದಿನ ದಿನದ ರಾತ್ರಿಯಿಂದ ಆರಂಭ ಮಾಡಬೇಕು. ಸುಮಾರು ಇಪ್ಪತ್ತು ಮಂದಿ ಸುಹಾಸನ ಮನೆಯಲ್ಲಿ ಸೇರಿ ನೂರಕ್ಕೂ ಹೆಚ್ಚು ಚೀಲಗಳಲ್ಲಿ ಸ್ಯಾಂಡ್ವಿಚ್ಗಳನ್ನು ಮಾಡಿ, ಅದರ ಜೊತೆಗೆ ಒಂದೊಂದು ಚಿಪ್ಸಿನ ಪ್ಯಾಕೆಟನ್ನು , ಒಂದು ಡಬ್ಬ ಜ್ಯೂಸನ್ನು ಮತ್ತು ಒಂದು ಸೇಬನ್ನು ತುಂಬಿದವು. ಆಮೇಲೆ ಎಲ್ಲರು ಸುತ್ತಲು ಕುಳಿತು ತಮ್ಮ ಹೆಸರು ಮತ್ತು ತಮ್ಮ ಬಗ್ಗೆ ಒಂದು ಪದವನ್ನು ಹೇಳಿದರು.

ಇದು ನನಗೆ ಜನರ ಹೆಸರುಗಳನ್ನೂ ತಿಳಿಯುವುದರಲ್ಲಿ ಸಹಾಯ ಮಾಡಿತು. ಮುಂದಿನ ದಿವಸ, "ದೊಡ್ಡ ಸೇಬಿಗೆ (ಬಿಗ್ ಆಪಲ್)" ಹೊರೆಟೆವು. ದಿನದ ಮೊದಲ ಭಾಗದಲ್ಲಿ ನಿರಾಶ್ರಿತರಿಗೆ ರಾತ್ರಿ ಪ್ಯಾಕ್ ಮಾಡಿದ ಊಟದ ಚೀಲಗಳನ್ನು ಹಂಚಿದೆವು. ಈ ಕಾರ್ಯ ಎಲ್ಲರಿಗೂ ತೃಪ್ತಿಯ ಭಾವ ಮೂಡಿತು. ನಮ್ಮ ಊಟಕ್ಕೆ, ಪಿಜ್ಜಾ ತಿನ್ನುವ ಸ್ಪರ್ಧೆಯನ್ನು ಇಟ್ಟುಕೊಂಡಿದ್ದೆವು.





ಅದಾದಮೇಲೆ ಯುನೈಟೆಡ್ ನೇಷನ್ಸ್ (ಯು. ಎನ್.) ಕಟ್ಟಡವನ್ನು ನೋಡಲು ಹೊರೆಟೆವು. ಪ್ರಪಂಚದ ನಾಯಕರು ಇಲ್ಲಿ ಸೇರಿ ಜಗತ್ತಿನ ಅಭಿವೃದ್ಧಿ ಮತ್ತು ಶಾಂತಿಗಾಗಿ ಚರ್ಚೆ ಮಾಡುತ್ತಾರೆ. ರಾಜಕಾರಣಿಗಳ ಬಗ್ಗೆ ಏನಾದರು ಅನ್ನಿ, ಆದರೆ ಯು. ಎನ್. ೧೯೪೫ ನಲ್ಲಿ ಹುಟ್ಟಿದ ಕ್ಷಣದಿಂದ ಜಗತ್ತಿನಲ್ಲಿ ಭರವಸೆಯನ್ನು ತಂದಿದೆ. ಯು. ಎನ್. ಕಟ್ಟಡವೇ ಒಂದು ಸೌಂದರ್ಯದ ಸಾಕಾರ. ಜಗತ್ತಿನ ಬೇರೆ ಬೇರೆ ದೇಶಗಳಿಂದ ಆಶ್ಚರ್ಯಕರ ಕಲೆ ಈ ಕಟ್ಟಡದಲ್ಲಿ ಕಾಣಬಹುದು. ಈ ಕಲೆಗಳನ್ನು ವೀಕ್ಷಿಸಿದ ಮೇಲೆ ಅದರ ಸಂದೇಶಗಳು ನಮ್ಮ ಮನಸ್ಸಿನಲ್ಲಿ ಅಚ್ಚೊತ್ತಿವೆ. ಒಂದು ದಿನದ ಪ್ರವಾಸವು ಕೊನೆಗೆ ಬಂತು. ರಾತ್ರಿ ಊಟವನ್ನು ಮಾಡಿ, ದಿನದ ಅನುಭವವನ್ನು ಮೆಲಕು ಹಾಕಿ ನಮ್ಮ ನಮ್ಮ ಮನೆಗಳಿಗೆ ಹೊರೆಟೆವು.

ಯುವಕ, ಯುವತಿಯರು ಹೆಚ್ಚಿನ ಸಂಖ್ಯೆಯಲ್ಲಿ ಯುವಬೃಂದಾವನದಲ್ಲಿ ಪಾಲ್ಗೊಳ್ಳಲುyuva@brindavana.org ಗೆ ಮಿಂಚಂಚೆ ಕಳಿಸಿ.


Copyright © KCO – Brindavana

# ಬೃಂದಾವನ ವಾಣಿ

ಬೃಂದಾವನ ಕನ್ನಡ ಕೂಟ, ನ್ಯೂಜೆರ್ಸಿಯ ದ್ವೈಮಾಸಿಕ ಪತ್ರಿಕೆ

## ? ಹೀಗೊಂದು ಪ್ರಶ್ನೆ. . . .

ಈ ಕೆಳಗಿನ ಛಾಯಾಚಿತ್ರಗಳಿಗೆ  ಒಂದು ಸಾಲಿನ 'ತಲೆಬರಹ' ಬರೆದು ಕಳಿಸಿ.

ನಮ್ಮ ಮಿಂಚಂಚೆ ವಿಳಾಸ : vani@brindavana.org

"................" ?



"................" ?



ಛಾಯಾಚಿತ್ರ ಕೃಪೆ : ರಾಘವೇಂದ್ರ ಕುಂದಲಗುರ್ಕಿ

## ಕನ್ನಡ ಕೂಟದ ಮುಂಬರುವ ಚಟುವಟಿಕೆಗಳು

- ಏಪ್ರಿಲ್ ೦೮  : ಯುಗಾದಿ ಹಬ್ಬ

## ಸದಸ್ಯತ್ವ ಮಾಹಿತಿ

ಬೃಂದಾವನ ಕನ್ನಡ ಕೂಟ ,ಕನ್ನಡ ಮತ್ತು ಕನ್ನಡಿಗರ ಪರವಾದ ಕಾರ್ಯಕ್ರಮಗಳಲ್ಲಿ  ತನ್ನನ್ನು ತೊಡಗಿಸಿಕೊಂಡಿದೆ. ನ್ಯೂ ಜೆರ್ಸಿ ಮತ್ತು ಸುತ್ತ ಮುತ್ತ ಇರುವ ಕನ್ನಡ ಬಾಂಧವರೆಲ್ಲ ನಮ್ಮೊಡನೆ  ಕೈ ಜೋಡಿಸಿ ಎಂಬ ವಿನಂತಿ. ಈ ನಿಟ್ಟಿನಲ್ಲಿ ಮೊದಲ ಹೆಜ್ಜೆ ಬೃಂದಾವನದ "ಸದಸ್ಯತ್ವ". ವಾರ್ಷಿಕ , ದ್ವೈ ವಾರ್ಷಿಕ , ಅಜೀವ ಅಥವಾ ವಿದ್ಯಾರ್ಥಿ ಸದಸ್ಯತ್ವಗಳಲ್ಲಿ  ,ನಿಮಗೆ ಸೂಕ್ತವಾದ ಸದಸ್ಯತ್ವವನ್ನು ಆಯ್ಕೆ ಮಾಡಿ. ಈಗ ಸದಸ್ಯತ್ವ ಪರಿಪೂರ್ಣ ಇಲೆಕ್ಟ್ರಾನಿಕ್ ರೂಪದಲ್ಲಿ ಆನ್ಲೈನ್ ದೊರೆಯುತ್ತದೆ. www.brindavana.orgಗೆ ಹೋಗಿ ನಿಮ್ಮ ವಿವರಗಳನ್ನು ನೀಡಿ ಸೂಕ್ತವಾದ ಸದಸ್ಯತ್ವ ಪಡೆಯಿರಿ. ಕ್ಷಣಾರ್ಧದಲ್ಲಿ ನಿಮಗೆ e-mail ಮುಖೇನ ಸದಸ್ಯತ್ವದ ವಿವರ ಬಂದು ಸೇರುವುದು. ನಿಮ್ಮ ಈ ಬೃಂದಾವನ, Karnataka Cultural Organization – Brindavana (KCOB) NJ, USA. 501(3)(c)ಪಡೆದ ಚಾರಿಟಿ ಸಂಸ್ಥೆ. ಇದಕ್ಕೆ ನಿಮ್ಮ ಕಾಣಿಕೆ ಪರಿಪೂರ್ಣ ಟ್ಯಾಕ್ಸ್ ರಹಿತ.

ಏನಾದರು ಪ್ರಶ್ನೆ ಇದ್ದಲ್ಲಿ  president@brindavana.orgಗೆ ಇ-ಮೇಲ್ ಮಾಡಿ.

**ಸೂಚನೆ:**

ನ್ಯೂ ಜೆರ್ಸಿಯ ಮತ್ತು ಸಮಸ್ತ ಕನ್ನಡದ ಸ್ನೇಹಿತರೆಲ್ಲರೂ  "ಬೃಂದಾವನ ವಾಣಿ"ಯಲ್ಲಿ ಭಾಗಿಗಳಾಗಬೇಕೆಂಬುದು ನಮ್ಮ ಆಶಯ. ವಾಣಿಯಲ್ಲಿ ಮೂಡಿಬರುವ ಅಂಕಣಗಳು- ಸಾಹಿತ್ಯವಾಣಿ,ವನಿತಾವಾಣಿ,  ಪುಟಾಣಿ-ಪ್ರಪಂಚ,ಬಾಲಪ್ರತಿಭೆ, ಕ್ರೀಡೆ, ಅಮೆರಿಕಾ ನಾ ಕಂಡಂತೆ, ಯುವ ವಾಣಿ, ಸುತ್ತ-ಮುತ್ತ, ಹಾಗೇ ಸುಮ್ಮನೆ.. ಈ ಅಂಕಣಗಳಿಗೆ ಲೇಖನ,ಕವನ,ಕಥೆ, ಚುಟುಕುಗಳನ್ನು ಬರೆದು ಕಳಿಸಿ. ಅಡುಗೆ, ಮನೆ ಮದ್ದು, ಅಲಂಕಾರ, ಸಂಪ್ರದಾಯಗಳ ಮಾಹಿತಿ ನೀಡುವ ಕಿರುಲೇಖನಗಳನ್ನು, ಮಕ್ಕಳು ಬರೆದ ವರ್ಣಚಿತ್ರಗಳನ್ನು ಕಳುಹಿಸಬಹುದು. ಮಕ್ಕಳಿಗಾಗಿ ನೀತಿ ಕಥೆಗಳನ್ನು ಬರೆದು ಕಳಿಸಿ.

**ಅಮೆರಿಕಾ ನಾ ಕಂಡಂತೆ** – ಇದು ಜೀವನಾನುಭವಗಳ ಅಂಕಣ. ನಿಮ್ಮ ಅನುಭವಗಳನ್ನು ಹಂಚಿಕೊಳ್ಳಿ. ನೀವು ಕ್ಲಿಕ್ಕಿಸಿದ ಸುಂದರ ಛಾಯಾಚಿತ್ರಗಳನ್ನು ಕಳುಹಿಸಬಹುದು.

ನಿಮ್ಮ ಅನಿಸಿಕೆ,ಸಲಹೆ,ಸೂಚನೆಗಳಿಗೆ  ತಪ್ಪದೇ ತಿಳಿಸಿ.  vani@brindavana.org  ಮೂಲಕ ನೀವು ನಮ್ಮನ್ನು ಸಂಪರ್ಕಿಸಬಹುದು.

**ವಿಶೇಷ  ಸೂಚನೆ** : ಎಲ್ಲಾ ಮಾಹಿತಿಗಳ ಹಕ್ಕು ಆಯಾ ಲೇಖಕರಿಗೆ ಸೇರಿದ್ದು.ಲೇಖನಗಳು ಸಂಕ್ಷಿಪ್ತವಾಗಿರಲಿ. ಕಳುಹಿಸಿದ ಮಾಹಿತಿ,ಲೇಖನ ಅಸಂಪೂರ್ಣ ಅಥವಾ ಅನುಚಿತವೆನಿಸಿದರೆ ಅದನ್ನು ಪ್ರಕಟಿಸಲಾಗುವುದಿಲ್ಲ.ಸಂಪಾದಕ ಮಂಡಳಿಯ ತೀರ್ಮಾನವೇ ಅಂತಿಮ. 'ಬೃಂದಾವನ ವಾಣಿ'ಯಲ್ಲಿ ಪ್ರಕಟವಾಗುವ ಲೇಖನ, ಕಥೆ, ಕವನ, ವಿಚಾರಗಳು, ಮಾಹಿತಿಗಳಿಗೆಲ್ಲ ಲೇಖಕರೇ ಜವಾಬ್ದಾರರು.ಅಂಕಣಗಳಲ್ಲಿ ನೀಡಿರುವ ಮಾಹಿತಿಯ ನಿಖರತೆ ಮತ್ತು ಖಚಿತತೆಗೆ ,'ಬೃಂದಾವನ ವಾಣಿ' ಮತ್ತು ಬೃಂದಾವನ' ಕನ್ನಡ ಕೂಟ ಜವಾಬ್ದಾರರಲ್ಲ.


Copyright © KCO – Brindavana